ಅಮೆರಿಕನ್ ಯುದ್ಧ ವಿಮಾನಗಳಿಗೂ ಮತ್ತು ಉತ್ತರ ಕೊರಿಯಾ ಯುದ್ಧ ವಿಮಾನಗಳಿಗೂ ಭಾರೀ ಕಾಳಗ ನಡೆದಿದೆ ಕೊರಿಯಾ ಯುದ್ಧದಲ್ಲಿ ಇದು ಅತಿ ದೊಡ್ಡ ವಿಮಾನ ಕಾಳಗವೆಂದು ಹೇಳಲಾಗಿದೆ ವಿಮಾನ ಯುದ್ಧದಲ್ಲಿ ಆಮೆರಿಕನ್ ವಿಮಾನಗಳ ಹೊಡೆತಕ್ಕೆ ಸಿಕ್ಕಿ ಉತ್ತರ ಕೊರಿಯದ ೩೨ ವಿಮಾನಗಳು ಕೆಟ್ಟುಹೋಗಿವೆಯೆಂದು ಹೇಳಲಾಗಿದ ಈ ೩೨ ವಿಮಾನಗಳ ಪೈಕಿ ೫ ವಿಮಾನಗಳು ಧ್ವಂಸವಾಗಿವೆ ೧೫ ವಿಮಾನಗಳು ಕೆಟ್ಟುಹೋಗಿವೆ ಇನ್ನೆರಡು ವಿಮಾನಗಳೂ ಧ್ವಂಸವಾಗಿವೆಯೆಂದು ಭಾವಿಸಲಾಗಿದೆ

ವಿಮಾನ ಕದನದಲ್ಲಿ ಮೊದಲು ನೇತುವೆಯೊಂದರ ಮೇಲೆ ಬಾಂಬುಗಳನ್ನು ಹಾಕುತ್ತಿದ್ದ ೪೦ ಆಮೆರಿಕನ್ ವಿಮಾನಗಳನ್ನು ಕಮ್ಯೂನಿಸ್ಟರ ಚೀನಾ ವಿಮಾನಗಳು ಎದುರಿಸಿದುವು ನಂತರ ೭೨ ಆಮೆರಿಕನ್ ವಿಮಾನಗಳು ಪ್ರತಿಧಾಳಿ ನಡೆಸಿದುವು ಎರಡು ಆಮೆರಿಕನ್ ವಿಮಾನಗಳಿಗೆ ಜಖಂ ಆಗಿದೆ

ಬ್ರಿಟ್ ದಿನೇ ದಿನೇ ಅಧೋಗತಿಗಿಳಿಯುತ್ತಿದೆ

ಯುದ್ಧ ಕಾಲದ ಮಂತ್ರಿಮಂಡಲವು ಕೊನೆಗೊಂದ ನಂತರ ಬ್ರಿಟ್ ಎಲ್ಲ ಮುಖಗಳಲ್ಲಿ ಅಧೋಗತಿಗಿಳಿಯುತ್ತಿದೆ ಇದಕ್ಕೆ ಕಾರಣವೆಂದರೆ ಬ್ರಿಟ್ ಸರ್ಕಾರದ ದುಂದುವೆಚ್ಚವೇ ಎಂದ ಮಿ ಚರ್ಚಿಲ್‌ರವರು ಕಳೆದ ವಾರ ಹೌಸ್ ಆವ್ ಕಾಮನ್ಸ್‌ನಲ್ಲಿ ತಿಳಿಸಿರುವರು

ಮಿಡತೆಗಳ ಕಾಟಕ್ಕೆ ಬೆಚ್ಚಿಬಿದ್ದ ಅಮೆರಿಕಾ ವಿಮಾನಗಳು

ಅಮೆರಿಕ ಸರ್ಕಾರವು ಪರಿಹಾರಕ್ಕೆ ಮಿಡತೆಗಳ ಹಾವಳಿಯನ್ನು ತಡೆಗಟ್ಟಲು ಸಣ್ಣ ವಿಮಾನಗಳನ್ನು ಕಳುಹಿಸಿದ ಮಿಡತೆಗಳು ವಿಶೇಷವಾಗಿ ಪ್ರದೇಶಗಳಲ್ಲಿ ಸಣ್ಣ ವಿಮಾನಗಳ ಮೂಲಕ ಲಂಡ್ರಿನ್ ದ್ರಾವಕವನ್ನು ಹಾಕಲಾಗುವುದು ಅಸಂಖ್ಯಾತ ಮಿಡತೆಗಳ ಕಾಟದಿಂದ ಕ್ಷಾಮಭಯ ಉಂಟಾಗಿದೆ

ವಿಮಾನಾಪಘಾತದಲ್ಲಿ ೨೨ ಮಂದಿಯ ಮರಣ

೪ ಸಹಸ್ರ ಅಡಿ ಎತ್ತರದ ಪರ್ವತ ಶಿಖರಕ್ಕೆ ವಿಮಾನ ಢಿಕ್ಕಿ ಹೊಡೆದು ಪುಡಿಪುಡಿಯಾಯಿತು

ಸ್ಯಾನ್‌ಫ್ರಾನ್ಸಿಸ್ಕೋವಿನಿಂದ ಲಾಸ್ ಏಂಜೆಲ್ಸ್‌ಗೆ ತೆರಳಿದ್ದ ೧೯ ಮಂದಿ ಪ್ರಯಾಣಿಕರನ್ನು ಮೂರುಮಂದಿ ವೈಮಾನಿಕರನ್ನು ಒಳಗೊಂಡಿದ್ದ ಅಮೆರಿಕನ್ ಏರ್ ಲೈನರ್ ಡಕೋಟ ವಿಮಾನವೊಂದು ಕ್ಯಾಲಿಫೋರ್ನಿಯಾದ ಕ್ಯಾನ್‌ಯಾನ್ ಎಂಬ ಪರ್ವತಪ್ರದೇಶದಲ್ಲಿ ೪ ಸಹಸ್ರ ಅಡಿಗಳ ಎತ್ತರವಿರುವ ಪರ್ವತಶಿಖರವೊಂದಕ್ಕೆ ಢಿಕ್ಕಿ ಹೊಡೆದು ನಲಕ್ಕಂಲಿ ಪುಡಿಪುಡಿಯಾಗಿರುವುದೆಂದೂ ವಿಮಾನದಲ್ಲಿದ್ದವರೆಲ್ಲರೂ ಉಳಿದಿಲ್ಲವೆಂದೂ ಅವರ ಮೃತದೇಹಗಳು ದೂರದ ನಡೆದ ಪ್ರದೇಶದಲ್ಲಿ ಪರಡಿ ಬಿದ್ದಿವೆಯೆಂದೂ ವರದಿಯಾಗಿದ

ಸಿದ್ಧಾಂತ ಶಿಖಾಮಣಿ

ಲೋಕದಲ್ಲಿ ಇರುವ ಒನ್ನಧಾರಣಮಾಡಿದ ಪ್ರಲಂಬೋಷ್ಟ ಸ್ವಾಮಿಯು ಪ್ರಾಣಿಜೀವಿಸುವುದು ಈ ಮು [illegible] ಕ್ರಿಯಾಪದ ರೂಪಕ್ಕೆ ಜಗ [illegible] ಆಸ್ಥಾಪಂಡಿತರಿಗೆಲ್ಲ ವೀರಶೈವಸಿದ್ಧಾಂತವನ್ನು [illegible] ಶಪಡಿಸಿ ಪಿಂಡ ಪ್ರತಿಷ್ಠಾಪನೆಲ್ಲರಿಸುವ ವೀರಶೈವರಲ್ಲಿ ಸದಭಿಮಾನವನ್ನು ಗೌರವವನ್ನು ಸಂಪಾದಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥದ ಈಗ ಸುಮಾರು ೨೫ವರ್ಷ ವರ್ಷಗಳ ಪೂರ್ವದಲ್ಲಿದ್ದ ಶ್ರೀಕಾಶಿವಯೋಗಿಶಿವಾಚಾರ್ಯರಂಬ ಆಚಾರ್ಯರಿಂದ ರಚಿಸಲ್ಪಟ್ಟರವು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವೆಂತಿರುವುದರಿಂದ ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಬಹುಮಟ್ಟಿಗೆ ವ್ಯಾಖ್ಯಾನದಲ್ಲಿರುವಾಗಲೂ ಗೂಢಾರ್ಥಗರ್ಭಿತವಾದ ವಾಕ್ಯಗಳಿಗೆ ಸರಿಯಾದ ಅರ್ಥವು ಬರಿಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಎದುರ್ಮಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ಎದ್ದುಕಾಣುವುದು. ಪಾಠಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೪೩೫ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಚಿದಗ್ಗರೇಣುಕಾಚಾರ್ಯರ ಲೀಲಾಶ್ಲಕವಾದ ಮನೋಹರಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈಬಲ್ಯಲ್ಪತರು ಬಿನಂತಿವಾದ ಈ ಅಪೂರ್ವ ಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಸಮಗ್ರ ಸಂಸ್ಕೃತ ಮತ್ತು ಕನ್ನಡ ಮುದ್ರಿತ ಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	...		೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಅನ್ಯತ್ರ ಸಂಸ್ಕೃತ)			೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)			೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ			೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)			೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	...		೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	...		೨ ಆಣೆ
ಋಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	...		೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	...		೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	...	...	೨ ಆಣೆ
ಶಿವಶಕ್ತಿವಿಲಾಸ	...	...	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	...	...	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	...	...	೨ ಆಣೆ
ಪಂಚಾಚಾರ್ಯಪ್ರಕಾಶ	...	...	೩ ಆಣೆ
ಪಂಚಾಚಾರ ಪ್ರಕಾಶಿಕಾ	...	...	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	...	...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	...	...	೪ ಆಣೆ
ಲಿಂಗಧಾರಣವಿಧಿ	...	...	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	...	...	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	...	...	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ)	...	...	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	...	...	೪ ಆಣೆ
ವೈದಿಕವಾಙ್ಮಯರಹಸ್ಯ	...	...	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೀಕರಣ (೩ನೆಯ ಆವೃತ್ತಿ)	...	...	೬ ಆಣೆ
ವೀರಶೈವಾಹ್ನಿಕ-ಶ್ರಾದ್ಧವಿಧಿ	...	...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಅಳತೆಯಿಲ್ಲ)	...	...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	...	...	೮ ಆಣೆ
ವೀರಶೈವಮತಾತ್ಪರ್ಯ			೮ ಆಣೆ
ಬಸವೇಶ್ವಾಂತರ್ದಿವಾಕರ (೨ನೆಯ ಆವೃತ್ತಿ)	...		೮ ಆಣೆ
ಆಗಮಪ್ರಾಮಾಣ್ಯ	...		೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ			೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	...		೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ			೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	...		೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	...		೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	...	...	೧ ರೂ.
ವಿನೇಕಮುಕ್ತಾವಳಿ	...		೧ ರೂ.
ವಿಚಾರಸಾರಾವಳಿ	...	...	೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಮುದು. ೨ನೆಯ ಆವೃತ್ತಿ)			೧೫ ರೂ.
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	...	...	೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವಿತ)			೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರವು)	...		೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ವ್ಯಾಖ್ಯಾನಸಹಿತ)	...	...	೨ ರೂ.
ಶಿವಾಗಮಸಂಗ್ರಹ: (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂತ್ರಾಗಮಗಳಿಂದ ಕೂಡಿರುವುದು)			೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	...		೯ ರೂ.
A brief life-sketch of Pandit Sri Kashinatha Shastriji (*English*)			4 As.
The Philosophical Aspect of Viraasaivism (*English*)	...		8 As.
Speeches by Pandit Shri Kashinatha Shastriji (*English*)			12 As.
ಶಿವಾಚಾರಚಂದ್ರಿಕಾ (ಸಂಸ್ಕೃತ)	...		೩ ಆ.
ವೀರಶೈವರತ್ನ (ಮರಾಠಿ)	...		೧ ರೂ.
ಸಹಾನಾದಭಾಷ್ಯೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	...		೧ ರೂ.
ಸಂಧಿಶೈವಕಾರಿಕಾ (ಸಂಸ್ಕೃತ)	...	...	೩ ಆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್. ಮೈಸೂರು

Edited, Printed and Published by Brahmasri Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಕರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧರರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬ್ರ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ ನೇ ಏಪ್ರಿಲ್ ೧೯೫೧ [ಸಂಚಿಕೆ ೫೩

ಪತ್ರವ್ಯವಹಾರ

[ಚಾಕ್ಕೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಶ್ರೀಶೈಲಕ್ಷೇತ್ರದಲ್ಲಿ ಜರುಗಿದ ಯುಗಾದಿ ಮಹಾಯಾತ್ರೆ

ಪರಮಾತ್ಮನ ಲೀಲೆ ಅಗಾಧವಾದುದು. ಈ ಸೊದಲು ನಡೆದ ಶಿವರಾತ್ರಿ ಯಾತ್ರೆಗೆ ಶ್ರೀಶೈಲದಲ್ಲಿ ನೀರಿನ ಕೊರತೆ ಯಾಗಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಯುಗಾದಿ ಯಾತ್ರೆಗೆ ನೀರಿನ ಪೂರೈಕೆ ಜೇಗಾಗುವುದು ಭಕ್ತವತ್ಸಲನಾದ ಮಲ್ಲಿಕಾರ್ಜುನನಿಗೆ ದಯೆ ಬಂದು ಮಳೆ ಸುರಿಸಬೇಕು. ಇಲ್ಲದಿದ್ದರೆ ಯುಗಾದಿ ಯಾತ್ರೆ ಅಸಂಭವ ಎಂದು ಜಿಂತಿಸುತ್ತಿರುವಷ್ಟರಲ್ಲಿ ಸಮಯಕ್ಕೆ ಸರಿಯಾಗಿ ದೇವರು ದೊಡ್ಡ ಮಳೆ ತರಿಸಿ ಯಾತ್ರೆ ಸುಗಮವಾಗಿ ಸಾಗುವಂತೆ ಮಾಡಿದನು.

ವರ್ಷದ ಮಾಮೂಲಿನಂತೆ ಶ್ರೀಶೈಲ ಜಗದ್ಗುರು ವಾಗಿಶಪಂಡಿತಾರಾಧ್ಯ ಮಹಾಸ್ವಾಮಿಗಳವರು ಅತ್ಯ ಕೂರಿನ ತಮ್ಮ ವೀರಶೈವ ಯಾತ್ರಾನಿವಾಸದಲ್ಲಿ ಮತ್ತು ಶ್ರೀಶೈಲ ಕ್ಷೇತ್ರದಲ್ಲಿ ಸೂರ್ಯಸಿಂಹಾಸನಮಠದ ಹಿಸರಿನಲ್ಲಿ ತಾ॥ ೧-೪-೫೧ ರಿಂದ ತಾ॥ ೧೧-೪-೫೧ ರ ವರೆಗೂ ಅನ್ನ ಸತ್ರವನ್ನು ನಡೆಸಿದರು ಅಲ್ಲದೆ ಮಾರ್ಗದ ಕೈಲಾಸದ್ವಾರದಲ್ಲಿ ತಾ॥ ೪-೪-೫೧ ರಿಂದ ತಾ॥ ೮-೪-೫೧ ರ ವರೆಗೆ ಅರವಟ್ಟಿಗೆಯನ್ನು ನಡೆಸಿದರು. ಎಂಜೋ ಮೆಂಟ್ ಬೋರ್ಡಿನವರೂ ಸಹ ಜಗದ್ಗುರುಗಳ ಅಭಿಪ್ರಾ ಯದಂತೆ ತಮ್ಮ ಖರ್ಚಿನಿಂದ ನೀರಿನ ಪುರವರೆ ಮಾಡಿ ದರು. ಇದರಿಂದ ಯಾತ್ರೆಯು ಸುಶಾಂತವಾಗಿ ನಡೆ ಯಿತು.

ಶ್ರೀಜಗದ್ಗುರುಗಳವರು ತಮ್ಮ ಪರಿವಾರದೊಂದಿಗೆ ಶ್ರೀಶೈಲಕ್ಕೆ ಪ್ರಯಾಣಮಾಡುತ್ತ ತಾರೀಕು ೩-೪-೫೧ ಸಾಯಂಕಾಲ ೪ ಘಂಟೆ ಸಮಯದಲ್ಲಿ ಕೈಲಾಸದ್ವಾರ ದಲ್ಲಿ ಪ್ರಜೆಗಳನ್ನು ಕುರಿತು ಶ್ರೀಶೈಲಯಾತ್ರಾ ಸೌಕರ್ಯ ವಿಚಾರವಾಗಿ ಅರ್ಧಘಂಟೆ ಉಪದೇಶವಿತ್ತರಲ್ಲದೆ ಸಂಸ್ಥಾ ನವು ನಿಮ್ಮದಾಗಿ ನೀಡುತ್ತಿರುವ ಅನ್ನ-ನೀರುಗಳ ಉಪ ಯೋಗದಲ್ಲಿ ಎಲ್ಲರೂ ಶಾಂತಿ-ಸಮಾಧಾನ-ಸಮತೆಯುಳ್ಳ ವರಾಗಿ ನಡೆಯಬೇಕೆಂದು ಬೋಧಿಸಿದರು ಕೈಲಾಸ ದ್ವಾರದಲ್ಲಿ ನೀರಿನ ಕೊರತೆಯನ್ನು ಪೂರ್ಣವಾಗಿ ಹೋಗ ಲಾಡಿಸಲು ಸಂಸ್ಥಾನವು ೧೫ ಸಾವಿರ ರೂಪಾಯಿಗಳ ಖರ್ಚಿನಲ್ಲಿ ಭಾವಿ ತೋಡಿಸಲು ಪ್ರಾರಂಭಿಸಿರುವುದನ್ನು ಈ ಬಗ್ಗೆ ಗದಗಿನ ಮಾ॥ ಶ್ರೀ॥ ವೀರಯ್ಯನವರು ೨೦೦೦ ರೂಪಾಯಿ ದಾನಮಾಡಿರುವುದನ್ನೂ ಈ ಬಗ್ಗೆ ಉದಾರಿ ಗಳೂ ನೇರವಾಗಿ ಸಂಸ್ಥಾನಕ್ಕೆ ಸಹಾಯಕರಾಗಬೇಕೆಂಬು ದನ್ನೂ ವಿವರಿಸಿದರು. ಅಲ್ಲದೆ ಶ್ರೀಶೈಲದಲ್ಲಿ ಅನೇಕ ಪರಹಿತಕಾರ್ಯಗಳನ್ನು ಮಾಡುತ್ತಿದ್ದ ವೇ॥ ಬಸವಯ್ಯ ಸ್ವಾಮಿಯವರು ಶಿವಾಧೀನರಾಗಿರುವುದರಿಂದ ಇನ್ನು ಮುಂದೆ ಅವರ ಹೆಸರಿನಿಂದಲೂ ಶ್ರೀಶೈಲದ ಹೆಸರಿನಿಂ ದಲೂ ಯಾರಾದರೂ ಸಹಾಯ ಕೇಳಲು ಬಂದರೆ ಕೊಡ ದಾರರೆಂತಲೂ ಶ್ರೀಶೈಲದ ಹೆಸರಿನಿಂದ ಇನ್ನು ಕೆಲವರು ಜನರಲ್ಲಿ ಮೋಸದಿಂದ ಹಣ ವಸೂಲುಮಾಡುತ್ತಿರುವುದು ತಿಳಿದಿರುವುದರಿಂದಲೂ ಅಂಥವರ ಮೋಸಕ್ಕೆ ಒಳಗಾಗ ಬಾರದೆಂದು ಸ್ಪಷ್ಟವಾಗಿ ಅಪ್ಪಣೆಕೊಡಿಸಿ ಜನತೆಗೆ ಸಂತೋಷವನ್ನುಂಟುಮಾಡಿದರು

ತಾ॥ ೪-೪-೫೧, ೫-೪-೫೧, ೬-೪-೫೧ ರಲ್ಲಿ ಶ್ರೀ ಜಗದ್ಗುರುಗಳವರು ಶ್ರೀಶೈಲದಲ್ಲಿ ವೀರಶೈವ ಮಹಾ ಸಭಾಧ್ಯಕ್ಷಸ್ಥಾನದಿಂದ "ಯುಗಾರಂಭದ ಶ್ರೀಶೈಲ" "ಇಂದಿನ ಶ್ರೀಶೈಲ" "ಯುಗಾದಿ" ಎಂಬ ವಿಷಯಗಳ ಮೇಲೆ ಅನುಕ್ರಮವಾಗಿ ಸ್ವಾರಸ್ಯವಾದ ವ್ಯಾಖ್ಯಾನವನ್ನು ಅಪ್ಪಣೆಕೊಡಿಸಿದರು ಯುಗಾದಿ ದಿನ ಪದ್ಧತಿಯಂತೆ ವೇ॥ ಪಂ॥ ಜಿ ವೀರನಾಗೇಂದ್ರ ಶಾಸ್ತ್ರಿಗಳವರಿಂದ ಪಂಚಾಂಗಶ್ರವಣವೂ "ವೇವು ಬೆಲ್ಲ" ದ ಸಿ-ಕಹಿಯ, ವಿಮರ್ಶೆಯೂ ಬಹು ಸ್ವಾರಸ್ಯವಾಗಿ ನಡೆಯಿತು ಸಂಸ್ಥಾ ನದ ಏಜಂಟರಾದ ಶ್ರೀ ಷ॥ ಬ್ರ॥ ಹೆಚ್ ಬಿ ಸಿ ಸ್ವಾಮಿಗಳವರು ಬಂದ ಪ್ರಜೆಗಳೆಲ್ಲರಿಗೆ ಸಂಸ್ಥಾನದ ಪರ ವಾಗಿ ಧನ್ಯವಾದಗಳನ್ನೊಪ್ಪಿಸಿ ಎಲ್ಲರಿಗೂ ಸುಖವನ್ನು ಹಾರೈಸಿದರು

ಯುಗಾದಿ ಯಾತ್ರೆಗೆ ಸುಮಾರು ೨೫ ಸಾವಿರಕ್ಕೂ ಮೇಲ್ಪಟ್ಟು ಜನರು ಸೇರಿದ್ದರೆಂದು ಗೊತ್ತಾಗಿದೆ ಎಲ್ಲರೂ ಆರೋಗ್ಯವಾಗಿ ತಮ್ಮ ದೇಶಕ್ಕೆ ತೆರಳಿದರು. ಈ ಯಾತ್ರೆಗೆ ಬಹುಶಃ ಕನ್ನಡಿಗರೇ ಹೆಚ್ಚಾಗಿ ಸೇರಿದ್ದರೆಲ್ಲದೆ ಆದರಲ್ಲೂ ವೀರಶೈವರೇ ಹೆಚ್ಚಾಗಿದ್ದರೆಂದು ತಿಳಿಸಲು ಸಂತೋಷವೆನಿಸುತ್ತದೆ ಸ್ವಚ್ಛತೆ ನಿರ್ಮಲತೆ ಇಲ್ಲದಿರು ವುದು, ಔಷಧವ್ಯವಸ್ಥೆಯಿಲ್ಲದಿರುವುದು ಈ ಯಾತ್ರೆ ಯಲ್ಲಿ ಮುಖ್ಯವಾಗಿ ಕಂಡುಬರುವ ಕೊರತೆಗಳಾಗಿದ್ದುವು. ಆ ಬಗ್ಗೆ ಜನತೆಯಿಂದ ಬಂದ ರಿಪೋರ್ಟನ್ನು ಆಗಲೇ ಸರಕಾರೀ ಆಫೀಸರಿಗೆ ತಿಳಿಸಿ ಮುಂದೆ ಹೀಗಾಗದಂತೆ ನೋಡಿಕೊಳ್ಳಲು ಅವರಿಂದ ಭರವಸೆ ಪಡೆಯಲಾಯಿತು ಹೊಸ ವರ್ಷವು ಎಲ್ಲರಿಗೂ ಶುಭದಾಯಕವಾಗಲಿ

ಸಂಜಾಲಕ,
ಶ್ರೀಶೈಲ ವೀರಶೈವ ಮಹಾಸಭಾ

ಶಿವಗಣಾರಾಧನೆ ಸಮಾರಂಭ, ಕಾಳಾರಿ

ಬೆಂಗಳೂರು ಡಿ॥ ಕಾಳಾರಿ ಜಂಗಮ ಮಠಾಧ್ಯಕ್ಷ ರಾದ ಶ್ರೀ ಷ॥ ಬ್ರ॥ ವೀರಭದ್ರಸ್ವಾಮಿಗಳವರ ಸನ್ನಿಧಾ ನದಲ್ಲಿ ತಾ॥ 15-4-51 ರಲ್ಲಿ ಕಾಳಾರಿ ಮಕ್ಕಳ್ಳಿ ಶಾಖಾ ಮಠವಾದ ಕುಣಿಗಲ್ ತಾಲ್ಲೂಕು ಎಲೆಯೂರುಮಠದ ಗದ್ದಿಗೆ ಹತ್ತಿರ ಮಾಮೂಲ್‌ಪ್ರಕಾರ ನಡೆಯಬೇಕಾದ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಗದ್ದಿಗೆಗೆ ಏಕಾದಶರುದ್ರಾಭಿ ಷೇಕ, ಸಹಸ್ರಬಿಲ್ವಾರ್ಚನೆ, ಮಹಾಮಂಗಳಾರತಿ ಪೂಜಾ ಕಾರ್ಯಗಳು, ಶಿವಗಣಾರಾಧನೆ ಇನ್ನೂ ಮುಂತಾದ ಭಕ್ತರ ಸೇವಾಕಾರ್ಯಗಳೂ ಬಹಳ ವಿಜೃಂಭಣೆಯಿಂದ ನಡೆದವು. ಕೃಷ್ಣರಾಜನಗರದ ಶ್ರೀಮಾನ್ ಬಳೆ ಬಸವ ರಾಜಪ್ಪನವರು, ಅವರ ಕುಟುಂಬವರ್ಗದವರು ಕೊಡಂ ಬಳ್ಳಿ, ದೊಡ್ಡ ಅರಸಿನಕೆರೆ ಇನ್ನೂ ಮುಂತಾದ ಗ್ರಾಮ ದವರು ಸಕಾಲಕ್ಕೆ ಆಗಮಿಸಿದ್ದರು ಎಲೆಯೂರು ಗ್ರಾಮದ ಜೇರ್‌ಮೆನ್ ರುದ್ರಸ್ವಾಮಿಯವರು. ರೆವಿನ್ಯೂ ಇನ್‌ಸ್ಪೆಕ್ಟರು, ಪಟೇಲ್ ಅಪ್ಪಾಗೌಡರು, ಗೌಡಯ್ಯ ನವರು ಇನ್ನೂ ಮುಂತಾದ ಮುಖ್ಯ ಪ್ರಮುಖರು ಕಾರ್ಯ ಭಾಗಿಗಳಾಗಿ ನಿಂತು ಒಟ್ಟಿಗೆ ವಿಜೃಂಭಣೆಯಿಂದ ನಡೆಸಿ ದರು. ಜಗದಾಚಾರ್ಯರು ಸರ್ವರಿಗೂ ಆಯುರಾರೋಗ್ಯ ಧನಕನಕ ಮಹದೈಶ್ವರ್ಯಾಭಿವೃದ್ಧಿಯನ್ನುಂಟುಮಾಡಿ ಕಾಪಾಡಲೆಂದು ಅಶಿಸುತ್ತೇವೆ

ಓರ್ವ ಪ್ರತ್ಯಕ್ಷದರ್ಶಿ

ಗದಗ

ಧಾರವಾಡ ಡಿ॥ ಗದಗದ ಶ್ರೀ ವೀರಪ್ಪ ಬಳಗಾರ ಇವರು ತಮ್ಮ ಗೃಹದಲ್ಲಿ ತಾ॥ ೬-೩-೫೧ ನೇ ಮಹಾ ಶಿವರಾತ್ರಿ ದಿವಸ ಜಗದ್ಗುರು ವಿಶ್ವಾರಾಧ್ಯರ ಪಂಡಿತಾ ಧ್ಯರ ಜಯಂತೀಮಹೋತ್ಸವವನ್ನೂ ತಾ॥ ೧೫-೩-೫೧ ನೇ ದಿವಸ ವೇ॥ ಪಂ॥ ಕಾಶೀನಾಥಶಾಸ್ತ್ರೀಗಳವರ ಪುಣ್ಯ ತಿಥಿಯನ್ನೂ, ತಾ॥ ೨೧-೩-೫೧ ನೇ ದಿವಸ ಶ್ರೀಜಗ ದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನೂ ಶ್ರೀ ವೇ॥ ಚನ್ನ ಮಲ್ಲಯ್ಯಸ್ವಾಮಿ ಗುಡ್ಡದ ಹಿರೇಮಠ ಇವರ ವೈದಿಕತ್ವದಲ್ಲಿ ಭಾವಚಿತ್ರಗಳಿಗೆ ಅಷ್ಟೋಪಚಾರ ಪೂಜೆಯನ್ನು ಮಾಡಿಸಿ ಷೋಡಶವಿಲ್ವಾರ್ಚನೆಯೆಂಗೈದು ಕುಟುಂಬಪರಿವಾರದೊಡನೆ ಗುರುವೃಂಗವರಿಂದ ಮಂಗ ಲಾಶೀರ್ವಾದವನ್ನು ಬೇಡಿ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಪ್ರತಿದಿನದ ಕಾರ್ಯವನ್ನು ಪೂರ್ತಿಗೊಳಿಸಿದರು ಓರ್ವ ಪ್ರತ್ಯಕ್ಷದರ್ಶಿ

ಗ್ವಾಲಿಯರ್‌ನಲ್ಲಿ ಸಹಗಮನ

ಗ್ವಾಲಿಯರ್‌ನಲ್ಲಿ ಕಳೆದ ೧೯ ನೆ ತಾ॥ ದಿನ ರಾತ್ರಿ ಇಲ್ಲಿನ ೨೩ ವರ್ಷ ವಯಸ್ಸಿನ ಹಿಂದೂ ಯುವತಿ ಯೊಬ್ಬಳು ತನ್ನ ಪತಿಯೊಡನೆ ಸಹಗಮನ ಮಾಡಿದ್ದಾಳೆ. ಈ ಪ್ರಸಂಗ ನಗರದ ಜನರಲ್ಲಿ ಕುತೂಹಲವನ್ನು ಕೆರಳಿ ಸಿದೆ. ಆಕೆ ಸಾವಿರಾರು ಜನಗಳ ಸಮಕ್ಷಮದಲ್ಲಿ ಪತಿಯ ಚಿತಿಯಮೇಲೆ ಬಿದ್ದು ಪ್ರಾಣತ್ಯಾಗಮಾಡಿದಳು ಆಕೆಗೆ ೨ ವರ್ಷದ ಮಗು ಇದೆ

ಮಿಶ್ರವಾದ ಗೊಬ್ಬರ ಉಪಯೋಗಿಸಿದರೆ ಬಹುಮಾನ

ಬೊಂಬಾಯಿ ಸರಕಾರ ಒಂದು ಪ್ರಕಟಣೆ ಹೊರಡಿಸಿ ಈ ಪ್ರಾಂತದಲ್ಲಿ ಹೆಚ್ಚು ಮಿಶ್ರವಾದ ಗೊಬ್ಬರವನ್ನು ಉಪಯೋಗಿಸಿ ಉತ್ತಮ ರೀತಿಯಲ್ಲಿ ಬೆಳೆ ತೆಗೆಯುವ ರೈತನಿಗೆ ಬೆಳ್ಳಿಯ ಬಟ್ಟಲುಗಳನ್ನು ಬಹುಮಾನವಾಗಿ ಕೊಡಲಾಗುವುದು ಎಂದು ತಿಳಿಸಿದೆ.

॥ಶ್ರೀಜಗದ್ಗುರು ಸಂತತಿತಾಧ್ಯೋ ವಿಜಯತೇ॥

ಶ್ರೀಕಾಶೀ ಜಗದ್ಗುರು ವಿಶ್ವಾರಾ ಪೀಠದ ನೂತನ

ಪಟ್ಟಾಧಿಕಾರಮಹೋತ್ಸವ ಕಾಲದಲ್ಲಿ

ಶ್ರೀಶೈಲ ಜಗದ್ಗುರು ಶ್ರೀ ವಾ ೀಕಸಂತತಾಧ್ಯ

ಶಿವಾಚಾರ್ಯಮಹಾಸ್ವಾಮಿಗಳವರು ಕೆಳಗಿನಂತೆ ಕಳುಹಿಸಿದ

ಶುಭ ಸಂದೇಶ

ಶ್ರೀ ಶಾಲಿವಾಹನ ಶಕೆ ೧೮೭೦ ನೆಯ ಸನ ಧಾರೀ ಸಂವತ್ಸರದ ಕಾರ್ತೀಕ ಶುದ್ಧ ತ್ರಯೋದಶಿ ರವಿವಾರ (ತಾರೀಖು ೧೬-೧೧-೧೯೪೮ನೆಯ ಇಸ್ವಿ) ಸೂರ್ಯೋದಯಾನಂತರ – ಘಟಿಗೆ ನಿಮಿಷಕ್ಕೆ ಸಲ್ಲುವ ಧನುರ್ಲಗ್ನ ಶುಭಾಂಶದಲ್ಲಿ, ಶ್ರೀ ರಂಭಾಪುರೀ ಮತ್ತು ಶ್ರೀ ಉಜ್ಜಯಿನೀ ಜಗದ್ಗುರು ಮಹಾಸಾಮರ ನೇತೃತ್ವದಲ್ಲಿ ಶ್ರೀ ವಿಶ್ವಾರಾಧ್ಯ ಸಿಂಹಾಸನದಲ್ಲಿ ಶ್ರೀ ವಿಶ್ವನಾಥ ಪಟ್ಟಾಭಿಷಿಕ್ತರಾದ ಜಗದ್ಗುರು ವಿಶ್ವಾರಾಧ್ಯರು ಕಾಶೀ ಪೀಠದ ಶ್ರೀ ವಿಶ್ವೇಶ್ವರ ಶಿವಾಚಾರ್ಯರು ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರಾಗಿ ಶ್ರೀ ವಿಶ್ವಾರಾಧ್ಯ ಸಿಂಹಾಸನವನ್ನಲಂಕರಿಸುತ್ತಿರುವ ಶುಭ ಸಮಯದಲ್ಲಿ ನಾವು ಅನಿವಾರ್ಯಕಾರಣಗಳಿಂದ ಅನುಪಸ್ಥಿತರಾಗಬೇಕಾಗಿ ಬಂದುದಕ್ಕಾಗಿ ನನಗೆ ತೀವ್ರವಾ ವಿಷಾದವೆನಿಸಿದೆ. ನೂತನ ಜಗದ್ಗುರು ಪಟ್ಟಾಧಿಕಾರ ಮಹೋತ್ಸವವನ್ನು ನಾನಾಭಾಗಗಳಿಂದ ಬಂದು ಬಾಗವಹಿಸಿರುವ ಬೆಳ್ಳು ಏಕಕಾಲದಲ್ಲಿ ಶ್ರೀಕಾಶೀಪೀಠದ ವಿಶ್ವನಾಥನ ಸಿಂಹಾಸನದಲ್ಲಿ ಶ್ರೀ ವಿಶ್ವಾರಾಧ್ಯ ಸಿಂಹಾಸನವನ್ನು ಅಲಂಕರಿಸುತ್ತಿರುವ ಶುಭ ಸಮಾಜ

ಸಾದರ ಸ್ವೀಕಾರ

ಬನಾರಸ (ಕಾಶಿ) ಜಂಗಮವಾಡಿ ಮಠದ ವೀರಶೈವ ವಿದ್ವತ್ಸಂಘದಿಂದ ವೇ|| ಸಂ|| ಗುರುಸಿದ್ಧಸ್ವಾಮಿಗಳು ಮುದೇನೂರು ಬ್ರಹ್ಮನ್ನಿಕ ಇವರ ಸಂಪಾದಕತ್ವದಲ್ಲಿ ನೂತನವಾಗಿ ಹೊರಡುವ "ವಿಪಂಚೀ" ಎಂಬ ಪಾಣ್ಮಾಸಿಕ (ಶಿವರಾತ್ರಿ) ಮೊದಲನೇ ಸಂಚಿಕೆಯು ನಮ್ಮ ಕೈ ಸೇರಿದೆ ಇದರಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ವಿಷಯವಾಗಿಯೂ ವೀರಶೈವಧರ್ಮದ ವಿಷಯವಾಗಿಯೂ ಪಂಡಿತರಿಂದ ಪರಿಶೋಧಿಸಿ ಬರೆಯಲ್ಪಟ್ಟ ಅನೇಕ ಲೇಖನಗಳಿದ್ದು ಕಲಿಕಾಲದ ಜನರ ಮನದ ಕಲ್ಮಷವನ್ನು ತೊಳೆದು ಪಾವನನನ್ನಾಡುವ ಜ್ಞಾನೋದಕವು ಹೊರಸೂಸುತ್ತಿದೆ ಸನ್ಮಾತನ ಧರ್ಮಪರಿಪಾಲನೆಗಾಗಿ ಜನ್ಮವೆತ್ತಿದ ಈ ಪತ್ರಿಕೆಯು ಧರ್ಮಾಭಿಮಾನಿಗಳ ಉದಾರಾಶ್ರಯದಿಂದಲೂ ಹೆಚ್ಚಾದ ಚಂದಾದಾರರಿಂದಲೂ ಅಭಿವೃದ್ಧಿಯನ್ನು ಪಡೆದು ವಿದ್ವತ್ಸಂಘದ ಕೀರ್ತಿಯನ್ನು ಜಗತ್ತಿನಲ್ಲಿ ಪಸರಿಸಿ ಶ್ರೀಜಗದ್ಗುರು ವಿಶ್ವಾರಾಧ್ಯರ ಕೃಪೆಯಿಂದ ಚಿರಸ್ಥಾಯಿಯಾಗಿ ಬಾಳಲೆಂದು ಕೋರುತ್ತೇನೆ

ಸಂಪಾದಕರು

ವಾಚಕಮಹಾಶಯರಲ್ಲಿ ವಿನಂತಿ

ನಾಗನೂರು ಬೃ|| ವೇ|| ಸಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮೈಸೂರಿನಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಿಂದ ಹೊರಡುತ್ತಿರುವ "ಪಂಚಾಚಾರ್ಯಪ್ರಭಾ" ಎಂಬ ವಾರಪತ್ರಿಕೆಯು ವ್ಯಾರಂಭವಾಗಿ ಇದೇ ಖರನಾಮಸಂವತ್ಸರದ ವೈ|| ಶು|| ಪಂಚಮೀಗೆ ೨೪ ವರ್ಷಗಳು ಮುಗಿದು ೨೫ ನೇ ವರ್ಷವು ಪ್ರಾರಂಭವಾಗುತ್ತದ ಇದು ಜನ್ಮನೆತ್ತಿದಂದಿನಿಂದ ಪಂಡಿತರ ನೇತೃತ್ವದಲ್ಲಿ ಗುರುವರ್ಗದ ಸೇವೆಯನ್ನು ಸಲ್ಲಿಸಿ ವೀರಶೈವ ಧರ್ಮದ ಸನಾತನತ್ವವನ್ನೂ, ವೈದಿಕತ್ವವನ್ನೂ ಜನತೆಯಲ್ಲಿ ಬೀರಿ ಧರ್ಮಜಾಗೃತಿಯನ್ನು ಮಾಡಿ ತನ್ನ ಹೆಸರನ್ನು ಪ್ರಕಾಶಪಡಿಸುತ್ತ ಬಂದಿರುವುದರಿಂದ ಅದರ ಶ್ರೇಯೋಭಿವೃದ್ಧಿಗಾಗಿ ಇದೇ ವೈ|| ಶು|| ೫ ದಿವಸ ರಜತಮಹೋತ್ಸವನ್ನು ಮಾಡಬೇಕಾಗಿ ನಿಶ್ಚಯಿಸಿದೆ ಆದಕಾರಣ ವಾಚಕಮಹಾಶಯರು ಎಂದಿನಂತೆ ಪತ್ರಿಕೆಗೆ ಪ್ರೋತ್ಸಾಹಕೊಟ್ಟು ಸಾರೋದ್ಧಾರವಾಗಿ ನಡೆಯಲೆಂದು ಹರಸಿ ಈ ಶುಭ ಸಮಯದಲ್ಲಿ ಸ್ವೀಕಾರಾದಿಗಳನ್ನು ಸಲ್ಲಿಸಿ ನವಚೈತನ್ಯವನ್ನುಂಟುಮಾಡುವರೆಂದು ಅಪೇಕ್ಷಿಸುತ್ತೇನೆ

—ಸಂಪಾದಕರು.

ಸ್ವೀಕಾರ

ಧಾರವಾಡ ಡಿ|| ಗರಗದ ಶ್ರೀ ಬಳೆಗಾರ ವೀರಪ್ಪನವರು ತಮ್ಮ ಗೃಹದಲ್ಲಿ ಪುಣ್ಯತಿಥಿ ಹಾಗೂ ಜಯಂತಿಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪ್ರೇಷಣ ಕ್ಕಾಗಿ 8 ರೂ. ಗಳನ್ನು ಸಮರ್ಪಿಸಿದ್ದಾರೆ

ಧಾರವಾಡ ಡಿ|| ಗರಗ ವಾಸಿಗಳಾದ ಬಳೆಗಾರ ವೀರಪ್ಪನವರ ಸಹೋದರಿಯರಾದ ಶ್ರೀಮತಿ ಬಸಮ್ಮನವರು ತಮ್ಮ ವಯಸ್ಸಿನ ೭೦ ನೇ ವರ್ಷದಲ್ಲಿ ತಾ|| (೧೧-೧-೫೧ ನೆ ಬುಧವಾರ) ಶಿವಾಧೀನರಾದ ಸಮಯಕ್ಕೆ ಪ್ರಭಾಪ್ರೇಷಣಕಾಗಿ ಸದರಿ ವೀರಪ್ಪನವರಿಂದ 2 ರೂ ಗಳು ಸಮರ್ಪಿಸಲ್ಪಟ್ಟಿವೆ

ಬೆಂಗಳೂರು ಡಿ|| ಕಾಳಾರಿ ಜಂಗಮ ಮಠದ ವೀರ ಭದ್ರಸ್ವಾಮಿಗಳವರಿಂದ ನೆರವೇರಿದ ಶಿವಗಣಾರಾಧನೆಯ ಸಮಯದಲ್ಲಿ ಪ್ರಭಾಪ್ರೇಷಣಕ್ಕಾಗಿ ಅರ್ಪಿಸಿದ 2 ರೂ ಗಳು ಸದರಿ ಸ್ವಾಮಿಗಳವರಿಂದ ತಲ್ಪಿರುತ್ತವೆ.

ಬೆಳಗಾಂವ ಡಿ|| ಸತ್ತಿಗೇರಿ ಗ್ರಾಮದ ಮಾಲೀ ಪಾಟೀಲ ನೀಲಕಂಠಪ್ಪನವರು ಶಿವೈಕ್ಯರಾದ ಸಮಯದಲ್ಲಿ ಪ್ರಭಾಪ್ರೇಷಣಕ್ಕಾಗಿ ಸಮರ್ಪಿಸಿದ 1 ರೂ. ಅಲ್ಲಿಯ ಪಟ್ಟಿದಸ್ವಾಮಿಗಳವರಿಂದ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ವರ್ತಮಾನಸಂಗ್ರಹ

ಸೋಮನಾಥ ದೇವಾಲಯದಲ್ಲಿ ವಿಗ್ರಹದ ಪ್ರತಿಷ್ಠಾಪನೆ

ಜಗತ್ಪ್ರಸಿದ್ಧವಾದ ಸೋಮನಾಥ ದೇವಾಲಯದಲ್ಲಿ ಮೇ ೧೧ ನೇ ತಾ|| ಸೋಮನಾಥೇಶ್ವರ ವಿಗ್ರಹದ ಪ್ರತಿಷ್ಠಾಪನಾ ಮಹೋತ್ಸವವು ನಡೆಯುವುದು. ಅಂದು ಪ್ರತಿಷ್ಠಾಪನೆ ಮಾಡುವ "ಲಿಂಗ" ವು ಜಯಪುರದಿಂದ ಆಗಲೇ ತರಿಸಲಾಗಿದೆ. ಕಪ್ಪುಶಿಲೆಯಿಂದ ಕೆತ್ತಿರುವ ಲಿಂಗವು ಎಳೂವರೆ ಅಡಿ ಉದ್ದವಾಗಿದೆ. ದೇವಾಲಯದಲ್ಲಿ ಪ್ರತಿಷ್ಠೆ ಮಾಡುವ ಇತರ ವಿಗ್ರಹಗಳೂ ಆಗಲೇ ಬಂದಿವೆ

ಪಾಕಿಸ್ತಾನದಲ್ಲಿ ಮೊಗಲರ ಪದ್ಧತಿ ಜಾರಿಗೆ ಬಂದಿದೆ

ಪೊಗಲ್ ಅರಸರು ದರ್ಬಾರ್-ಇನ್-ಖಾಸ್‌ನಲ್ಲಿ ಕುಳಿತು ಖುದ್ದಾಗಿ ಸಾರ್ವಜನಿಕರ ಅಹವಾಲನ್ನು ಕೇಳುತ್ತಿದ್ದರಷ್ಟೆ ಮೊಗಲರ ಕಾಲದ ಪದ್ಧತಿಯನ್ನು ಪಂಜಾಬಿನ (ಪಾಕಿಸ್ತಾನ್) ಮುಖ್ಯಮಂತ್ರಿ ಮಿಯಾನ್ ಮಹಮದುದ್ ದೌಲತಾನರವರು ಮತ್ತೆ ಜಾರಿಗೆ ತರಲಿರುವರಂತೆ! ಪ್ರತಿ ಶನಿವಾರ ಸಂಜೆ ತನ್ನು ಬಂಗಲೆಯಲ್ಲಿ ಪ್ರಧಾನರು "ಮಲಕತ್-ಇ-ಆಂ" ಏರ್ಪಡಿಸಿರುವರಂತೆ!

ರಿಕ್ಷಾವಲ್ಲಿ ಸೋಗುವುದು ಅಪರಾಧ

ದೆಹಲಿಯ ಮುನಿಸಿಪಲ್ ಗಡಿಯೊಳಗೆ ಮನುಷ್ಯರಿಂದ ಎಳೆಯಲ್ಪಡುವ ರಿಕ್ಷಾಗಳಲ್ಲಿ ಹೋಗುವುದು ಅಪರಾಧವೆಂದು ಪರಿಗಣಿಸಲಾಗುವುದೆಂದು ಘೋಷಿಸಲಾಗಿದೆ ಈ ಆಜ್ಞೆಯ ಪರಿಣಾಮವಾಗಿ ೨೭೪ ರಿಕ್ಷಾಗಳು ಪ್ರಯೋಜನವಿಲ್ಲದಂತಾಗಿದೆ

ಸುಭಾಸ್ ಚಂದ್ರಬೋಸ್ ಬದುಕಿಲ್ಲ

ಸುಬಾಸ್ ಬಾಬುಗಳು ೧೯೪೫ ನೇ ಆಗಸ್ಟ್ ೧೮ ರಲ್ಲಿ ಮಡಿದಿದ್ದಾರೆಂಬ ಬಗ್ಗೆ ಜಪಾನಿನ ಮಿಲಿಟರಿ ವೈದ್ಯಾಧಿಕಾರಿಗಳಿಂದಲೂ, ಇತರ ಕಡೆಗಳಿಂದಲೂ ಸಮರ್ಥನೆ ದೊರೆತಿದೆ ಅವರು ಸುಟ್ಟ ಗಾಯಗಳಿಂದ ಸತ್ತಿರುವರೆಂದು ಜಪಾನ್ ಮಿಲಿಟರಿ ವೈದ್ಯರು ಮಾಡಿರುವ "ಡೆತ್ ಸರ್ಟಿಫಿಕೇಟ್" ನಲ್ಲಿ ತಿಳಿಸಿವ್ವಾರೆ ಎಂದು ಶ್ರೀ ಬಿ ವಿ ಕೇಸ್ಕರ್‌ರವರು ಕಳೆದವಾರ ಪಾರ್ಲಿಮೆಂಟಿನಲ್ಲಿ ತಿಳಿಸಿದರು

ಸುಭಾಸ್ ಚಂದ್ರಬೋಸರ ಚಿತಾಭಸ್ಮ

ಸುಭಾಸ್ ಚಂದ್ರಬೋಸರ ಚಿತಾಭಸ್ಮವನ್ನು ೧೯೪೫ ನೇ ಆಗಸ್ಟ್ ೧೫ ರಂದು ಟೋಕಿಯೋವಿನ ದೇವಾಲಯವೊಂದರಲ್ಲಿ ಇಡಲಾಗಿತ್ತೆಂದೂ, ಈಗಲೂ ಆ ಭಸ್ಮ ಅಲ್ಲೇ ಇರುವುದಾಗಿಯೂ ಐ ಎನ್ ಎ ದಳದ ಮೇ|| ಜನರಲ್ ಭೋನ್ಸ್ಲೆಯವರು ಭಾರತ ಸರ್ಕಾರಕ್ಕೆ ತಿಳಿಸಿದ್ದಾರೆಂದೂ ಆ ಬಗ್ಗೆ ಸರಿಯಾದ ಸುದ್ದಿ ತಿಳಿಸಲು ಸರ್ಕಾರಿ ಪ್ರಯತ್ನ ಪಡುತ್ತಿರುವುದಾಗಿಯೂ, ಇದಕ್ಕೆಂತ ಹೆಚ್ಚಿಗೆ ಯಾವ ವಿವರವನ್ನೂ ಕೊಡಲು ಸಾಧ್ಯವಿಲ್ಲ ವೆಂದೂ ಡಾ|| ಕೇಸ್ಕರ್‌ರವರು ಕಳೆದವಾರ ಪಾರ್ಲಿಮೆಂಟಿನಲ್ಲಿ ಕಾಮತ್ ಕೇಳಿದ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಬೊಂಬಾಯಿ ನಗರದ ಲಾಯ್ಡ್ಸ್ ಬ್ಯಾಂಕಿನಲ್ಲಿ ಭಾರಿ ದರೋಡೆ

ಬೊಂಬಾಯಿ ನಗರದ ಹಾರ್ನ್‌ಬಿ ರಸ್ತೆಯಲ್ಲಿರುವ ಲಾಯಿಡ್ಸ್ ಬ್ಯಾಂಕ್ ಶಾಖೆಗೆ ಕಳೆದ ಶುಕ್ರವಾರ ಯಾರೋ ದುರಾತ್ಮರು ಬಂದೂಕ ಸಹಿತ ಸುಗ್ಗಿ ಟ್ಯಾಕ್ಸಿ ಡ್ರೈವರನ್ನು ಗುಂಡಿಕ್ಕಿಕೊಂದು ೧೨ ಲಕ್ಷ ರೂ. ಗಳನ್ನು ಅತಿ ಹರಿಸಿಕೊಂಡು ಓಡಿಹೋದರೆಂದು ವರದಿಯಾಗಿದೆ.

ಪ್ರಕರಣದ ವಿವರ

ಕಳೆದ ಶುಕ್ರವಾರ ಸ್ಥಾಪನಾಲ ಸುಮಾರು ೧೧ಗಂಟೆ ಸಮಯದಲ್ಲಿ ಲಾಯಿಡ್ಸ್ ಬ್ಯಾಂಕಿನ ಹಿಂಭಾಗದ ದ್ವಾರದಲ್ಲಿ ರಿಸರ್ವ್ ಬ್ಯಾಂಕಿಗೆ ಕಳುಹಲು ಹಣದ ಪೆಟ್ಟಿಗೆಗಳನ್ನು ಟ್ಯಾಕ್ಸಿಯೊಂದಕ್ಕೆ ತುಂಬುತ್ತಿದ್ದರು. ಇಬ್ಬರು ಕ್ಯಾಷಿಯರ್‌ಗಳೂ ಒಬ್ಬ ಜವಾನನೂ ಈ ಕೆಲಸವನ್ನು ನೋಡಿಕೊಳ್ಳುತ್ತಿದ್ದರು. ಟ್ಯಾಕ್ಸಿಯು ಹೊರಡುವುದರಲ್ಲಿದ್ದಾಗ ಆಗಂತುಕನೊಬ್ಬನು ಹರಾತ್ತನೆ ಬಂದು ಡ್ರೈವರನಿಗೆ ಟ್ಯಾಕ್ಸಿ ನಿಲ್ಲಿಸುವಂತೆ ಆಜ್ಞೆಮಾಡಿದನು ಡ್ರೈವರನು ಅವನ ಮಾತನ್ನು ಕೇಳಲಿಲ್ಲ ಆಗಂತುಕನು ಡ್ರೈವರನ ಎದೆಗೆ ಗುರಿಯಿಟ್ಟು ಗುಂಡುಹಾರಿಸಿದನು. ನಂತರ ಆಗಂತುಕನೂ ಅವನ ಅನುಯಾಯಿಗಳೂ ೬ ಸಲ ಗುಂಡು ಹಾರಿಸಿ ಟ್ಯಾಕ್ಸಿಯಲ್ಲಿದ್ದ ಹಣದ ಸಮೇತ ಓಡಿ ಹೋಗಿರುವರು.

ಈ ಸಂಬಂಧವಾಗಿ ಪೋಲೀಸ್ ಉನ್ನತಾಧಿಕಾರಿಗಳೂ, ಸಿ ಐ ಡಿ. ವರ್ಗದವರು ಮುಂಬೈನ ನಾನಾಕಡೆಗಳಲ್ಲಿ ತೀವ್ರಶೋಧನೆ ನಡೆಸುತ್ತಿದ್ದಾರೆ ದರೋಡೆ ನಡೆಸಿದ ಐದು ಮಂದಿಯಲ್ಲಿ ಈವರೆವಿಗೂ ಒಬ್ಬರೂ ಪತ್ತೆಯಾಗಿಲ್ಲವೆಂದು ವರದಿಯಾಗಿದೆ

ಈ ದರೋಡೆ ಸಂದರ್ಭದಲ್ಲಿ ಗುಂಡಿನೇಟಿನಿಂದ ಮಡಿದ ಟ್ಯಾಕ್ಸಿ ಡ್ರೈವರ್ ಲಾರೆನ್ಸ್‌ಕ್ವೆಡಾರಸ್ ಎಂಬಾತನಿಗೆ ಮುಂಬೈನ ನಾನೂರು ಟ್ಯಾಕ್ಸಿಡ್ರೈವರುಗಳೂ, ಕ್ಲೀನರುಗಳು ಇತರ ಮೋಟಾರ್ ಕೆಲಸಗಾರರುಗಳು ನೇರಿ ಇಂದು ಮೆರೋಚಿತ ಅಂತ್ಯಕ್ರಿಯೆ ನಡೆಸಿದರು. ಮೃತದೇಹವನ್ನು ಭಾರಿ ಮೆರವಣಿಗೆಯಲ್ಲಿ ಕೊಂಡೊಯ್ದು ಹೈನ್ಸ್ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಸಮಾಧಿಮಾಡಿದರು

೧೦ ಸಾವಿರ ರೂ. ಬಹುಮಾನ

ಮುಂಬೈನ ಲಾಯಿಡ್ಸ್ ಬ್ಯಾಂಕಿನಲ್ಲಿ ನಡೆದ ೧೨ ಲಕ್ಷ ರೂ. ಗಳ ಭಾರಿ ದರೋಡೆಯ ಸಂಬಂಧದಲ್ಲಿ ಕಾರು ಹುಡುಕುವವರಿಗೂ ಅಧ್ಯಾ ಧಕಾಯಿತಿಗಳನ್ನು ಹಿಡಿದು ಕೊಡುವವರಿಗೂ ೧೦ ಸಾವಿರ ರೂ. ಗಳ ನಗದು ಬಹುಮಾನ ಕೊಡುವುದಾಗಿ ಮುಂಬೈ ಕಮಿಷನರು ಪ್ರಕಟಣೆಯೊಂದನ್ನು ಹೊರಡಿಸಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ-ಪೋಲೀಸರು ನಡೆಸುತ್ತಿರುವ ತನಿಖೆಯಲ್ಲಿ ಸಾರ್ವಜನಿಕರೂ ಸಹಕಾರಿಗಳಾಗಬೇಕೆಂದು ಕೋರಿದ್ದಾರೆ.

ಅಮೆರಿಕನ್ ಕಾಂಗ್ರೆಸ್ಸಿನ ಸಂಯುಕ್ತ ಅಧಿವೇಶನದಲ್ಲಿ ಜನರಲ್ ಮೆಕಾರ್ಥರ್‌ರವರ ಭಾಷಣ

ಯೂರೋಪ್ ಖಂಡದಲ್ಲಿ ಕಮ್ಯೂನಿಸ್ಟ್ ನೀತಿಯನ್ನು ತಡೆಗಟ್ಟಲು ನಾವು ಮಾಡುತ್ತಿರುವ ಪ್ರಯತ್ನಗಳು ವಿಫಲವಾದ ಹೊರತು ಏಷ್ಯಾದಲ್ಲಿ ಕಮ್ಯೂನಿಸ್ಟರನ್ನು ತೃಪ್ತಿಪಡಿಸಲಾಗದು ಎಂತಹ ಪರಿಸ್ಥಿತಿಯಲ್ಲಾಗಲೀ ಫಾರ್ಮೋಸಾ ದ್ವೀಪವನ್ನು ಕಮ್ಯೂನಿಸ್ಟರ ಹತೋಟಿಗೆ ಒಪ್ಪಿಸಲಾಗದೆಂದು ನಾನು ಈ ಹಿಂದ ಸ್ಪಷ್ಟಪಡಿಸಿದ್ದೇನೆ. ಮಿಲಿಟರಿ ಆವಶ್ಯಕತೆಯ ದೃಷ್ಟಿಯಿಂದ ಇದು ಅಗತ್ಯ ನೆಂಬುದಾಗಿ ಜನರಲ್ ಮೆಕಾರ್ಥರ್‌ರವರು ಅಮೆರಿಕಾ ಕಾಂಗ್ರೆಸ್ಸಿನ ಸಂಯುಕ್ತ ಅಧಿವೇಶನದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಅಮೆರಿಕೆದ ಸ್ಥಾನಮಾನಗಳಿಗೆ ಧಕ್ಕೆ

ಫಾರ್ಮೋಸಾ ಕಮ್ಯೂನಿಸ್ಟರ ವಶವಾದರೆ ಫಿಲಿಫೈನ್ಸ್ ಮತ್ತು ಜಪಾನ್ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಘೋರ ಪ್ರಮಾದ ಜರಿದೋದುವುದು ಅಲ್ಲದೆ ಅದರಿಂದ ನಮ್ಮ ರಾಷ್ಟ್ರದ ಗಡಿ ಕ್ಯಾಲಿಫೋರ್ನಿಯಾ ಅಥವಾ ವಾಷಿಂಗ್‌ಟನ್‌ವರೆಗೆ ಸಂಕುಚಿತವಾಗುವುದು.

ಚೀನಾ ವಿರುದ್ಧಕ್ರಮ ಅಗತ್ಯ

ಕೊರಿಯಾ ಯುದ್ಧದಲ್ಲಿ ನವಚೀನಾಪ್ರಧೇಶ ರಾಜತಾಂತ್ರಿಕ ನಿರ್ಧಾರಗಳಿಗೆ ಎಡೆ ಕೊಟ್ಟಿದೆ. ಚೀನಾ ಕಮ್ಯೂನಿಸ್ಟರನ್ನು ಸೋಲಿಸಲು ಚೀನದಮೇಲೆ ನೌಕಾದಿಗ್ಬಂಧನೆ, ಮೇಲೆ ವಿಮಾನ ಕಾರ್ಯಾಚರಣೆ, ಫಾರ್ಮೋಸಾ ರಾಷ್ಟ್ರೀಯ ಚೀನೀಯರ ಮೇಲಿರುವ ನಿರ್ಬಂಧಗಳನ್ನು ತೆಗೆದುಹಾಕುವುದೇ ಮೊದಲಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಾನು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದುದಕ್ಕಾಗಿ ಕೆಲವರು ನನ್ನನ್ನು ದ್ವೇಷಿಸುತ್ತಿದ್ದಾರೆ. ನಿಜ ಹೇಳುವುದಾದರೆ ನನ್ನ ಅಭಿಪ್ರಾಯಗಳನ್ನು ಅಮೆರಿಕಾ ಸೈನ್ಯಾಪತಿಯ ಮುಖಂಡರೂ ಅನುಮೋದಿಸಿದ್ದಾರೆ.

ವಿಜಯಕ್ಕಾಗಿ ಯುದ್ಧ

ಅಂತರ್ರಾಷ್ಟ್ರೀಯ ವಿವಾದಗಳ ಪರಿಹಾರಕ್ಕೆ ಯುದ್ಧ ಅನುಸರಣೀಯವಲ್ಲವೆಂದು ಎಂದೆ ೇ ನಾನು ಹೇಳಿರುವೆನು. ಆದುದರಿಂದ ಯುದ್ಧವನ್ನು ನಿರ್ಮೂಲಿಸಬೇಕೆಂದು ಅಭಿಪ್ರಾಯಪಟ್ಟಿರುತ್ತೇನೆ. ಆದರೆ ಅನಿವಾರ್ಯವಾದ ಮೇಲೆ ಯುದ್ಧವನ್ನು ಬಲವಂತದಿಂದ ಹೇರಿಸಿದರೆ ಶೀಘ್ರವೆ ವಿಜಯವನ್ನು ಸಾಧಿಸಲು ಪ್ರಯತ್ನಿಸಬೇಕು ಮುನ್ಯಾವ ಕಾಲವಿಳಂಬಮಾಡಲಾಗದು ಕದನವಿರಮಿಕೆಯನ್ನು ತಿಳಿಸಬೇಕೆನ್ನುವವರೂ ಕೆಲವರಿದ್ದಾರೆ. ಇದರಿಂದ ಯುದ್ಧ ಅನಿವಾರ್ಯವೆಂಬ ಸಂಗತಿಯನ್ನು ಅವರು ನುತೆಪಿಪ್ಪಾರೆ

ನನ್ನ ಆಶೆ ನಿರಾಶೆಯಾಯಿತು

ನಾನು ೫೨ ವರುಷಗಳ ಹಿಂದೆ ಸೈನಿಕನ ಕೆಲಸವಲ್ಲಿ ಸೇರಿದೆ. ಆಗ ನನ್ನ ಮನಸ್ಸಿನಲ್ಲಿ ಮೂಡಿದ್ದ ಆಕೋತ್ಪರಗಳೆಲ್ಲವೂ ಈಗ ಬಾಡಿಹೋಗಿವೆ. ದೇವರು ನನಗೆ ವಿಧಿಸಿದ ಕರ್ತವ್ಯವನ್ನು ಪಾಲಿಸಲು ಪ್ರಯತ್ನಿಸಿದ್ದೇನೆ. ಈ ಕರ್ತವ್ಯದಲ್ಲೇ ವಯೋವೃದ್ಧನಾಗಿದ್ದೇನೆ. ಈಗ ನಾನೂ ಬಾಡಿಹೋಗಲಿದ್ದೇನೆ. ನಿನ್ಮೆಲ್ಲರಿಗೂ ಗುಡ್‌ಬಾಯ್– ಎಂದರು.

ನ್ಯೂಯಾರ್ಕಿನಲ್ಲಿ ಮೆಕಾರ್ಥರ್‌ರವರಿಗೆ ಅತ್ಯದ್ಭುತ ಸ್ವಾಗತ

ಅಮೆರಿಕದ ಇತಿಹಾಸದಲ್ಲಿ ಹಿಂದೆಂದೂ ಇಲ್ಲದಂತೆ ಕಳೆದ ೨೦ ನೇ ತಾರೀಕಿನ ದಿನ ನ್ಯೂಯಾರ್ಕಿನ ೭೫ ಲಕ್ಷ ಪ್ರಜೆಗಳು ನಗರದ ಪ್ರಮುಖ ಬೀದಿಗಳಲ್ಲಿ ಕಿಕ್ಕಿರಿದು ನೆರೆದು ಇಂದು ಇಲ್ಲಿಗೆ ಆಗಮಿಸಿದ ವೀರಯೋಧ ಜ|| ಡಗ್ಲಾಸ್ ಮೆಕಾರ್ಥರ್‌ರವರಿಗೆ ಅತ್ಯದ್ಭುತಸ್ವಾಗತ ನೀಡಿದರು.

೧೯೪೫ ರಲ್ಲಿ ಜಪಾನ್ ಹೋರ್ವರವರು ಯೂರೋಪಿನ ಕದನದಲ್ಲಿ ಜಯಭೇರಿ ಹೊಡೆದು ಹಿಂದಿರುಗಿದಾಗ ೪೦ ಲಕ್ಷ ಮಂದಿ ಅವರಿಗೆ ಸ್ವಾಗತ ನೀಡಿದ್ದರು.

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦	೬	೦
ಶ್ರೀರೇಣುಕಾಚಾರ್ಯರ ಲಿಂಗಾನತಾಪದ ಫೋಟೋ (ನಾನಾವಿಧವರ್ಣಗಳಿಂದ ಮುದ್ರಿತವಾಗಿರುವುದು)ಸೈಜು ೧೪×೧೦ ಬೆಲೆ	೦	೬	೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦	೪	೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾನತಾಪದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦	೩	೦
" " " ಚಿಕ್ಕ ಸೈಜು ಬೆಲೆ ...	೦	೧	೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದುವ ಫೋಟೋ	೦	೧	೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಸಟ್ಕಾಭಿಷೇಕ ಮಾಡುವ ಫೋಟೋ	೦	೧	೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦	೧	೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦	೧	೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧವರ್ಣದ್ದು) ..	೦	೪	೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦	೧	೬
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦	೧	೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦	೧	೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಶಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦	೧	೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾಗಿರುವುದು) ಚಿಕ್ಕ ಸೈಜು ೧ಕ್ಕೆ	೦	೩	೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾಗಿರುವುದು) ದೊಡ್ಡ ಸೈಜು ೧ಕ್ಕೆ	೦	೪	೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಸ್ವಾಮಿಯ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦	೧	೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಿಡದ ಸುಂದರ ಫೋಟೋ ೧ಕ್ಕೆ	೦	೧	೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦	೧	೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦	೧	೬
ಬೆಂಗಳೂರು ಕಂಟೊನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦	೧	೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ...	೦	೩	೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧	ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧	ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) ...	೧	ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧	ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೨	ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) ...	೨	ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) .	೨	ಆಣೆ
ಬಸವಾದಿಸಿಜತತ್ವದರ್ಪಣ (೪ನೆಯ ಆವೃತ್ತಿ) .	೨	ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) ...	೨	೬ಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ...	೨	ಆಣೆ
ಶಿವಶಕ್ತಿವಿಲಾಸ	೨	ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨	ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	೨	ಆಣೆ
ಪಂಚಾಚಾರ್ಯಪ್ರಕಾಶ	೩	ಆಣೆ
ಪಂಚಾಚಾರ ಪ್ರಕಾಶಿಕಾ	೩	ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩	ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪	ಆಣೆ
ಲಿಂಗಧಾರಣವಿಧಿ	೪	ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪	ಆಣೆ
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ	೪	ಆಣೆ
ಶೈವೋಪಸಿಕಸ್ತ್ರೀಯಃ (ಸಂಸ್ಕೃತ) (೩ನೆಯ ಆವೃತ್ತಿ)	೫	ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪	ಆಣೆ
ವೈದಿಕವಾಙ್ಮಯರಹಸ್ಯ	೪	ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಶ್ಚಿರೀಕರಣ (೩ನೆಯ ಆವೃತ್ತಿ)	೬	ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬	ಆಣೆ
ಸಿದ್ಧಾಂತ ಶಿಖಾಮಣಿ (ಮೂಲಸೂತ್ರ. ಚಿಕ್ಕಸೈಜು)	೮	ಆಣೆ
ಶಿವಾದ್ವೈತಕಪರಿಭಾಷಾ (ಸಂಸ್ಕೃತ)	೮	ಆಣೆ
ವೀರಶೈವಮಹಾತ್ಮರು	೮	ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	೮	ಆಣೆ
ಆಗಮಪರಿಜ್ಞಾನ	೮	ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮	ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮	ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨	ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .	೧೨	ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨	ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧	ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧	ರೂ.
ವಿನೇಕಮುಕ್ತಾವಳಿ	೧	ರೂ.
ವಿಚಾರಸಾರಾವಳಿ	೧	ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಗಿರುವುದು. ೩ನೆಯ ಆವೃತ್ತಿ)	೧೫	ರೂ.
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೨	ರೂ.
ವೀರಶೈವರತ್ನ (೫ನೆಯ ಆವೃತ್ತಿ. ೪೦ ಸುಚಿತ್ರದ ಫೋಟೋಗಳಿರುವುವು)	೨	ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨	ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨	ರೂ.
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂರ್ಯಾಗಮಗಳಿಂದ ಕೂಡಿರುವುದು)	೨	ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮	ರೂ.
A brief life-sketch of Pandit Sri Kashinatha Shastriji (*English*)	4	As.
The Philosophical Aspect of Virasaivism (*English*) ...	8	As.
Speeches by Pandit Shri Kashinatha Shastriji (*English*)	12	As.
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ...	೩	ಆ.
ವೀರಶೈವಧರ್ಮ (ಮರಾಠಿ) .. .	೧	ರೂ.
ಮಹಾಗಾರವಣೋಪನಿಷತ್ (ವೀರಶೈವಮಾಹ–ಸಂಸ್ಕೃತ)	೨	ಆ.
ಸಂಧಿಕೌಶ್ವರಕಾರಿಕಾ (ಸಂಸ್ಕೃತ)	೨	ಆಣೆ.

ವ್ಯವಸ್ಥೆಯವರು—ಶ್ರೀಪಂಚಾಚಾರ್ಯರ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited, Printed and Published by Brahmmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯೋ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾಶಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ. ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ. ಪಿ. ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೦ ನೇ ಏಪ್ರಿಲ್ ೧೯೫೧ [ಸಂಚಿಕೆ ೫೪

ಸತ್ಪ್ರವ್ಯವಹಾರ

[ಚಾಕ್ಕೀದಾರರು ಅಭಿಪ್ರಾಯ ಪರುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಸಾವಧಾನ ಪತ್ರಿಕೆಯಿಂದ ಸಾವಧಾನ

ಸಾವಧಾನ ಪತ್ರಿಕೆಯಲ್ಲಿ ತಾ॥ ೬-೪-೧೯೫೧ ನೇ ಸಂಚಿಕೆಯಲ್ಲಿ "ಸ್ಪಷ್ಟವಾದಿ" ಎಂಬ ಹೆಸರಿನಿಂದ ಒಂದು ಲೇಖ ಪ್ರಸಿದ್ಧವಾಗಿದಯಷ್ಟೇ? ಈ ಲೇಖದ ಮೂಲ ಉದ್ದೇಶವೇನೆಂದರೆ ಸ್ವರ್ಗವಾಸಿ ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳಿಂದ ರಚಿತವಾದ "ವೈದಿಕ ಶಿವಪೂಜಾವಿಧಿ"ಯನ್ನು ಖಂಡಿಸುವದೇ ಆಗಿದೆ

ಅರ್ಥ ತಿಳಿಯದಲೇ ಮಂತ್ರಗಳನ್ನು ಪಠಿಸುವದರಿಂದ ಏನು ಪ್ರಯೋಜನವೆಂದೂ ಮತ್ತು ಕೆಲವು ಮಂತ್ರಗಳು ನಮ್ಮ ವೀರಶೈವರಿಗೆ ಸಂಬಂಧವಿಲ್ಲವೆಂದೂ, ಶ್ರೀ ರುದ್ರಪಠಣದಿಂದ ಇಷ್ಟಲಿಂಗಾಭಿಷೇಕ ಮಾಡಬಾರದೆಂದೂ ಬರೆದಿರುವದನ್ನು ವಿಚಾರಿಸಿದಲ್ಲಿ ಇಂಥ ಭಕ್ತಿಭಾವ ಶೂನ್ಯರು ಹುಟ್ಟಿಯೇ ವೀರಶೈವ ಮತವೇ ತಳಬುಡವಿಲ್ಲದ್ದಾಗಿ, ಧರ್ಮಾಚರಣೆಯ ಪರಂಪರೆಯು ನಾಶವಾಗಿ ವೀರಶೈವ ಮತದ ವಿಶಾಲ ಭಾವನೆ ಅಡಗಿ, ಸಮಾಜದ ಇಂದಿನ ದುರ್ದೆಶೆಗೆ ಸಾಕ್ಷಿಯಾಗಿದೆ

ಸರ್ವರೂ ಶಿವಪೂಜಾ ಕಾಲಕ್ಕೆ ಉಪಯೋಗಿಸತಕ್ಕ ಷೋಪಚಾರಿಕ ಮಂತ್ರಗಳನ್ನು ತಿಳಿಯಬೇಕು. ಈ ಮಾತು ಒಪ್ಪುವ ಮಾತು. ಶಿಕ್ಷಣ ಪಡೆದವರು ಹಾಗೆ ಮಾಡಲೇ ಬೇಕು. ಇನ್ನು ಶಿಕ್ಷಣ ಹೊಂದದೇ ಶಿವಪೂಜಾಚರಣೆಗಳನ್ನು ಆಚರಿಸುವ ಕೆಲವರು ಮಂತ್ರಗಳ ಅರ್ಥವಾಗದಿದ್ದರೂ ಭಕ್ತಿಭಾವಗಳಿಂದ ಗುರುವಿನ ಉಪದೇಶ ಹೊಂದಿ ತಮ್ಮ ಭಕ್ತಿಭಾವಗಳನ್ನು ತಮ್ಮ ಇಷ್ಟಲಿಂಗದಲ್ಲಿ ಒಲಿಸಿಕೊಂಡವರನೇಕರುಂಟು. ಹಾಗೂ ವೀರಶೈವ ಧರ್ಮವು ಭಕ್ತಿಪ್ರದಾನ ಮತವೆಂಬುದು ಭಕ್ತಿಶೂನ್ಯ 'ಸ್ಪಷ್ಟವಾದಿ"ಯರಂಥಾ ಅನ್ವೇಷಣಬುದ್ಧಿಗೆ ಹೊಳೆಯುವದೆಂತು.

ಭಸ್ಮದ ವಿಷಯವಾಗಿ ಬರೆಯುವದನ್ನು ವಿಚಾರಿಸುವಾ.—ವೀರಶೈವರು ಗೋಮಯದ ಭಸ್ಮವನ್ನೇ ಧರಿಸತಕ್ಕವರು ಮತ್ತು ಬಸವಾ ಬಸವಾ ಎನುತ ಧರಿಸಬೇಕು. ಹೀಗೆ ಮಾಡದೇ "ವಿಭಾನಿ ತಾನಿ ಶಿವಮಂತ್ರ ಪವಿತ್ರತಾನಿ" ಎಂಬ ಮಂತ್ರವನ್ನು ಶೈವರು ಆಂಥಾನು ಸ್ಮರಣದಿಂದ ಏಕೆ ಉಚ್ಚರಿಸಬೇಕೆಂದು ಬರೆದಿರುವರು. ಭಸ್ಮದ ಮಹಿಮೆ ಲೀಲೆಗಳು ಶಿವನ ಮಹಿಮೆ ಲೀಲೆಗಳಂತೆ ಅಪಾರವಾಗಿರುವವು. ಅಂದಮೇಲೆ ನಾವು ಧರಿಸತಕ್ಕ ಭಸ್ಮವು ಗೋಮಯವಾದದ್ದೇ ಇದ್ದು, ಇಂಥ ಭಸ್ಮವನ್ನು ಎಲ್ಲ ವೀರಶೈವರು ಧರಿಸುತ್ತಾರೆ. ಧರಿಸುವಾಗ್ಗೆ ಭಸ್ಮದ ಲೀಲೆಗಳನ್ನು ಹಾಡುತ್ತಾ ಧರಿಸುವರೇ ವಿನಃ ಸುಡಗಾಡದಲ್ಲಿಯ ಬೂದಿಯನ್ನು ಯಾರೂ ಧರಿಸುವದಿಲ್ಲಾ.

ಬಸವನ ನಾಮವನ್ನಾಗಲೀ, ಶಿವನ ನಾಮವನ್ನಾಗಲೀ, ಭಸ್ಮದ ಲೀಲೆಯನ್ನಾಗಲೀ ಪಾಡುತ್ತ ಭಸ್ಮನನ್ನು ಧರಿಸುತ್ತ ಶಿವಜ್ಞಾನ ಸಂಪಾದನೆಗೆ ಅರ್ಹನಾದನೆಂದು ಪವಿತ್ರ ಭಾವನೆ ತಾಳುವದೇ ಭಸ್ಮಧಾರಣೆಯ ಮುಖ್ಯ ಉದ್ದೇಶವಿದೆ. ಶಿವಮಂತ್ರಗಳಿಂದ ಪವಿತ್ರವಾದ ಭಸ್ಮವು ದೈವಲೀಲೆಗಳನ್ನು ಬದಲಿಸತಕ್ಕ ಭಸ್ಮವೆಂದೂ, ಭಸ್ಮದ ನಾಮೋಚ್ಚಾರಣೆಯಿಂದ ವೀರಶೈವ ಧರ್ಮಕ್ಕೆ ಯಾವ ಹಾನಿ ಇಲ್ಲೆಂದೂ ವಾಚಕರೇ ಊಹಿಸಬಹುದು ಮತ್ತು ವೀರಶೈವರು ಸ್ವಕೀಯ ಘನಲೀಲೆಯುಳ್ಳವರಿರುವದರಿಂದ ಈ ಮಂತ್ರವನ್ನೇಕೆ ಉಚ್ಚರಿಸಬೇಕೆಂದು ಬರೆದಿರುವರು. ಈ ಅವಸ್ಥೆಯನ್ನು ಸ್ವತಃ ನೀವು ಹೊಂದಿರುವಿರಾ? ಮಾಯೆಯ ಬಂಧನದಿಂದ ಮುಕ್ತರನ್ನಾಗಿ ಮಾಡೆಂದು ಪರಮಾತ್ಮನನ್ನು ಮರೆಹೊಕ್ಕ ಶರಣರ ವಚನಗಳೆಷ್ಟೋ ಉಂಟು. ಅವನ್ನೆಲ್ಲ ಉದಹರಿಸಬೇಕಿಲ್ಲ. ನೀವು ಬರೆದ ಅವಸ್ಥೆಯನ್ನು ಹೊಂದಿದ ಮೇಲೆ ಮಂತ್ರತಂತ್ರಗಳ ಪಾಗೂ ಪೂಜೆಯ ಪ್ರಸಂಗಗಳೇ ಬೇಕಿಲ್ಲ. ಹೀಗಿರುವಾಗ ದೊಡ್ಡ ಉದಾಹರಣೆಗಳನ್ನು ತೆಗೆದುಕೊಂಡು ಅಂಥ ಆಚಾರವಿಲ್ಲದೇ ಆ ಅವಸ್ಥೆಯನ್ನು ಹೊಂದದೇ, ವ್ಯರ್ಥಶಾಸ್ತ್ರವಾಕ್ಯಗಳನ್ನು ಉಪಯೋಗಿಸುವುದು ಉಚಿತವಲ್ಲ.

ಬಲ್ವವಳದ ಮಂತ್ರವನ್ನು ಖಂಡಿಸಿರುವಿರಿ ಈ ಮಂತ್ರದ ಅರ್ಥವಾದರೂ ಏನೆಂಬುದನ್ನು ವಾಚಕರೆದುರಿಗಿಡುವದು ಉಚಿತವೆನಿಸದಿರಲಾರದು. ತ್ರಿದಲಂ ತ್ರಿಗುಣಾಕಾರಂ ತ್ರಿನೇತ್ರಂಚ ತ್ರಿಯಾಯುಧಂ । ತ್ರಿಜನ್ಮ ಪಾಪಸಂಹಾರಂ ಏಕಬಿಲ್ವಂ ಶಿವಾರ್ಪಣಂ ॥

ಮೂರು ಜನ್ಮದ ಪಾಪವನ್ನು ಸಂಹಾರ ಮಾಡತಕ್ಕ ಬಿಲ್ವಪತ್ರೆಯ ಒಂದು ದಳವನ್ನು ಶಿವನಿಗೆ ಅರ್ಪಣವೆನ್ನುವುದರಲ್ಲಿ ನನ್ನ ಪಾಪವನ್ನು ಎಂದು ಅರ್ಥಮಾಡಿಕೊಂಡಿರುವಿರಿ ಬಿಲ್ವಪತ್ರೆಯಲ್ಲಿ ಮೂರು ಜನ್ಮದ ಪಾಪನಾಶಕ ಶಕ್ತಿಯಿದೆ. ಇಂಥ ಪತ್ರೆಯನ್ನು ಅರ್ಪಣ ಮಾಡುತ್ತೇನೆಂದು ಬಿಲ್ವಪತ್ರೆಯು ಸ್ತುತಿಸುವಲ್ಲಿ ಈ ವಿಷಯವನ್ನು ಬೆಳೆಸಿ, ಭಕ್ತರ ಭಕ್ತಿಭಾವಗಳನ್ನು ಕದಡುವ ನಿಮ್ಮ ಬುದ್ಧಿ ವಿಚಿತ್ರವೇ ಸರಿ. ಇಂಥ ಮಂತ್ರಗಳು ಶ್ರೀ ಕುಮಾರಸ್ವಾಮಿಗಳಿಂದ ರಚಿತವಾದ ಶಿವಪೂಜಾವಿಧಿಯಲ್ಲುಂಟು ಮತ್ತು ಶ್ರೀ ರುದ್ರಪುರುಷ ಸೂಕ್ತದಿಂದ ಲಿಂಗಯ್ಯನಿಗೆ ಅಭಿಷೇಕವೂ ಉಂಟು. ಆ ಶಿವಪೂಜಾವಿಧಿಯನ್ನೇಕೆ ಖಂಡಿಸಿಲ್ಲೋ? ತಿಳಿಯದು. ಲಿಂಗಾಭಿಷೇಕವು ಶ್ರೀ ರುದ್ರಾಧ್ಯಯನದಿಂದ ಮಾಡುವುದು ಪರಂಪರೆಯಿಂದಲೂ, ಶಾಸ್ತ್ರಾಧಾರದಿಂದಲೂ ಬಂದಿರುವುದು. ಶ್ರೀರುದ್ರಪಠಣದ ಮಹಿಮೆಯು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಆಂಗೀರಸ ಸ್ಮೃತಿಯು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ವರ್ಣಿತವಾಗಿದೆ. ವೇದಸ್ಮೃತಿಗಳಲ್ಲೆಲ್ಲ ಶ್ರೀರುದ್ರಪಠಣ ರುದ್ರಾಭಿಷೇಕದಿಂದ, ಸಂಸಾರಬಂಧನದಿಂದ ಮುಕ್ತರಾಗಿ ಶಿವತ್ವವನ್ನು ಹೊಂದುತ್ತಾರೆಂದು ಹೇರಳವಾಗಿ ಉಲ್ಲೇಖಗಳಿದ್ದರೂ, ನೈತ್ಯದಲ್ಲಿ ಶ್ರೀ ರುದ್ರಪಠನೋತ್ತರವಾಗಿ ಲಿಂಗಯ್ಯನ ಅಭಿಷೇಕವನ್ನು ಎಷ್ಟೊ ವೀರಶೈವ ಮಹಿಮಾಶಾಲಿಗಳು ಮಾಡುತ್ತಾ ಲಿಂಗಾನಂದ ಪೂಜಾನುಭವವನ್ನು ಹೊಂದಿ ಜೀವನ್ಮುಕ್ತರಿನಿಸಿದ ಅನೇಕ ಶಿವಾನುಭವಿಗಳುಂಟು. ಇಂಥವರಿಗೆಲ್ಲ ಪೂಜಾಡಂಬರಿಗಳೆಂತಲೂ, ಭಕ್ತರ ದುಡ್ಡು ಸೆಳೆಯುವ ರೆಂತಲೂ, ಬರೆದಿರುವುದನ್ನು ನೋಡಿದರೆ ಶ್ರೀ ರುದ್ರ ನಿಂದಕನಾದ ನಿನಗೆ ಆ ರುದ್ರನೇ ಶಾಸನಮಾಡದಿರಲಾರನು. ಇದರಿಂದ ಮಹಿಮರ ನಿಂದಕನಾದ ನಿನ್ನ ಹೀನ ಪಾಪಿಷ್ಠ ಮನೋಭಾವನೆಯ ವ್ಯಕ್ತತೆಯೇ ಹೊರ್ತು ಆದರ ಕಟುಫಲದ ಭೋಗವ್ತ ತಪ್ಪಿದ್ದಲ್ಲ ವೆಂಬುದನ್ನೂ ನೀನು ನೆನಪಿನಲ್ಲಿಟ್ಟುಕೊಂಡು ಇನ್ನು ಮುಂದೆ ಇಂಥ ಲೇಖಗಳನ್ನು ಬರೆದು ಸಮಾಜದಲ್ಲಿ ಅಸಮಾಧಾನತೆಯ ಜ್ವಾಲೆಯನ್ನು ಹುಟ್ಟಿಸಬೇಡೆಂದು ನಿನಗೆ ಎಚ್ಚರಿಕೆಯನ್ನು ಕೊಡದಿರಲಾರೆವು.

ಯಥಾರ್ಥವಾದಿ.

'ಸಾಹಿತ್ಯದ ಸುಗ್ಗಿ' ಮತ್ತು ಶ್ರೀಜಗದ್ಗುರು ವಿಶ್ವಾರಾಧ್ಯ ಶಿಲಾವಿಗ್ರಹ ಪ್ರತಿಷ್ಠಾಪನೆ, ನೋರಬ

ಶ್ರೀ ಬಾಲಬ್ಯಹಸ್ಪತಿ ಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಇಲ್ಲಿಯ ಶ್ರೀ ಜಡೆಯಮಠದಲ್ಲಿ ತಾ॥ ೪-೫-೫೧ ನೆಯ ಶುಕ್ರವಾರದಿಂದ ತಾ॥ ೧೧-೫-೫೧ ರವರೆಗೆ ಕನ್ನಡನಾಡಿನ ಸುಪ್ರಸಿದ್ಧರಾದ ಶ್ರೀಗಳವರಿಂದಲೂ ಪಂಡಿತರಿಂದಲೂ ವಿವಿಧ ಕಲಾಕೋವಿದರಿಂದಲೂ ಸಾಹಿತಿಗಳಿಂದಲೂ ಪರಿಣಾಮಕಾರಕವಾದ ಕಾರ್ಯಕ್ರಮಗಳು ಜರುಗಲಿವೆ. ಇದರ ಸ್ಮಾರಕವಾಗಿ ಈಗಾಗಲೇ ರಚಿತವಾಗಿರುವ ಶಿಲಾಮಂದಿರದಲ್ಲಿ ಅಕ್ಷಯ ತೃತೀಯ ಮಹಾಶುಭಮುಹೂರ್ತದಲ್ಲಿ ಶ್ರೀಜಗದ್ಗುರು ವಿಶ್ವಾರಾಧ್ಯಭಗವತ್ಪಾದರ ಶಿಲಾವಿಗ್ರಹ ಪ್ರತಿಷ್ಠೆಯು ವಿಜೃಂಭಣೆಯಿಂದ ನೆರವೇರಲಿರುವದು. ಸದ್ರಿ ಭವ್ಯವಿಗ್ರಹವು ಮೈಸೂರಿನ ಜಗತ್ಪ್ರಸಿದ್ಧ ಶಿಲ್ಪಿಗಳಾದ ಶ್ರೀ ಶಿಲ್ಪಿಸಿದ್ಧಲಿಂಗಸ್ವಾಮಿಗಳಿಂದ ಸಿದ್ಧವಾದುದಾಗಿದೆ. ಇದಕ್ಕೆಲ್ಲ ಶ್ರೀ ವೇ॥ಬ್ಯ॥ ಮಹದೇವಯ್ಯನವರು, ಪಂಚಾಚಾರ್ಯ ಪ್ರಭಾ ಸಂಪಾದಕ, ಮೈಸೂರು ಅವರ ಸಾಹಸವಿಶೇಷನೇ ಮುಖ್ಯವಾಗಿದೆ. ಈ ಮಹನೀಯರು ಮಹಾಚಾರ್ಯರ ಸೇವೆಗಾಗಿ ದುಡಿಯುತ್ತಲಿರುವದು ಚಿರಸ್ಮರಣೀಯವಾದುದು. ಮೈಸೂರಿನಿಂದ ಈ ವಿಗ್ರಹವು ಬಂದಕೂಡಲೆ ೧೦೧ ಜೊತೆ ಅಲಂಕೃತ ವೃಷಭಗಳನ್ನು ಹೂಡಿದ ರಥದಲ್ಲಿ ಮೆರೆಸಲಾಗುವುದು ಈ ಮಂಗಲಕಾರ್ಯಕ್ಕೆ ವಿವಿಧಭಾಗಗಳಿಂದ ಸುವಿಖ್ಯಾತರಾದ ಮಾನ್ಯ ಭಕ್ತವೃಂದವರು ಆಗಮಿಸಲಿದ್ದಾರೆ. ಆದ್ದರಿಂದ ಈ ಪರ್ವಸಮಯದಲ್ಲಿ ಸರ್ವ ಆಸ್ತಿಕಮಹಾಶಯರು ಅಗತ್ಯವಾಗಿ ಆಗಮಿಸಿ ಮಹಾತ್ಮಾ ಶ್ರೀಜಡೆ ಮಹಾತಿವಯೋಗಿಯ ಕೃಪೆಗೆ ಪಾತ್ರರಾಗಬೇಕಾಗಿ ಆಶಿಸುತ್ತೇವೆ. ಕಾರ್ಯಕಾರಿಮಂಡಲ, ನೋರಬ.

ವಿ.ಸೂ.—ದಾವಣಗೆರೆಯಿಂದ ನೋರಬಕ್ಕೆ ಈಗ ಬಸ್ ಸರ್ವಿಸ್ ಉಂಟು.

ll ಶ್ರೀಜಗದ್ಗುರು ಪರಾತಂತ್ರ್ಯೋ ವಿಜಯತೇ ॥

ಶ್ರೀಕಾಶೀ ಜಗದ್ಗುರು ವಿಶ್ವಾರಾಧ್ಯಪೀಠದ ನೂತನ ಪಟ್ಟಾಭಿಷೇಕಮಹೋತ್ಸವಕಾಲದಲ್ಲಿ

ಶ್ರೀಶೈಲ ಜಗದ್ಗುರು ಶ್ರೀ ನಾಗೀಶಪಂಡಿತಾರಾಧ್ಯ ಶಿವಾಚಾರ್ಯಮಹಾಸ್ವಾಮಿಗಳವರು ಕಳುಹಿಸಿದ

ಶುಭ ಸಂದೇಶ

[ಸಕಲಶಾಸ್ತ್ರಪುರಾಣಪಾರಂಗತರೂ ಸಮಸ್ತ ಜಗದ್ಗುರುಗಳಿಗೆ ಮಾರ್ಗದರ್ಶಕರೂ ಆಗಿರುವ ಶ್ರೀಶೈಲ ಜಗದ್ಗುರು ಶ್ರೀ ನಾಗೀಶಪಂಡಿತಾರಾಧ್ಯ ಶಿವಾಚಾರ್ಯಮಹಾಸ್ವಾಮಿಗಳವರು ಕಳುಹಿಸಿದ]

ನಾವು ಕಂಡ ಜಗದ್ಗುರುಗಳು

ಶ್ರೀ ವಿಶ್ವಾರಾಧ್ಯ ಜಗದ್ಗುರು ಪೀಠದ ಅತಿ ಪ್ರಾಚೀನ ಗುರುಪರಂಪರೆಯನ್ನು ಸ್ಮರಿಸಿ ನೋಡಿದ ಜಗದ್ಗುರು ನಮಗೆ ಲಭಿಸಿಲ್ಲವೆಂದರೆ ಇತಿಹಾಸದ ಪುಟದಲ್ಲಿ ಅಳಿಸಿ ಹೋದ ಅನೇಕ ಜಗದ್ಗುರುಗಳನ್ನು ಕಾಣುವ ಸುಯೋಗವು ನಮಗಿಲ್ಲ. ಇತಿಹಾಸ ಮುಖೇನ ಲಭಿಸಿರುವ ವಿಶ್ವಾರಾಧ್ಯ ಪೀಠದ ಜಗದ್ಗುರುಗಳಲ್ಲಿ ಉಳಿದ ಎಷ್ಟೋ ಪೀಠಾಚಾರ್ಯರಿಗಿಂತ ವಿಶೇಷವಾಗಿ ಮುಗ್ಧಪ್ರಾಣಿಗಳಾಗಿದ್ದ ಜಗದ್ಗುರು ಮಹಾಸ್ವಾಮಿಗಳವರ ಕಾಲದಲ್ಲಿ ಅವರಿಗಿರುವ ಡಾಂಭಿಕರು ಕುಚೇಷ್ಟರಿಗೆ, ಮೌಢ್ಯಾಚಾರಕ್ಕೆ ತ್ಯಕ್ಕೆ ಒಳಪಟ್ಟಿದ್ದರಿಂದ ಇವರ ಕಾಲದಲ್ಲಿ ವಿಶ್ವಾರಾಧ್ಯ ಪೀಠವು ಅನೇಕ ಸಮಸ್ಯೆಗಳಿಂದ ಮುತ್ತಿತ್ತು. ಮರಣಕ್ಕೆ ಯಾವಕ್ಷಣವೂ ಇರಲಿಲ್ಲ ಇಂತಹ ಸಮಸ್ಯಾಕಾಲದಲ್ಲಿ ಮಧ್ಯಸ್ವಾಮಿಯ ಜಗದ್ಗುರು ರಾಜೇಶ್ವರ ಸ್ವಾಮಿಗಳವರು ಕಟ್ಟಿಲರ ಮಾತುಗಳಿಗೆ ಮೋಸಹೋಗಿ ಪೀಠಾಧ್ಯಕ್ಷ ಪಾಂಡಿತ್ಯವನ್ನು ಸ್ಥಾಪಿಸಿದರು ಮುಪ್ಪಿನಲ್ಲಿನಗಳಲ್ಲಿ ವಂಚಸಗಾರರಿಂದ ದುರ್ವ್ಯವಸ್ಥೆಯಿಂದ ವಿಶ್ವಾರಾಧ್ಯಪೀಠ, ವಿಶ್ವಾರಾಧ್ಯ ಪೀಠದ ಮೇಲೆ ಹೊರಾಗಿದ್ದ ಅಲಿವಿನ ಹೊರೆಯನ್ನು ಹೊರಿಸಿತು ಈ ಸಲವನ್ನು ಪರಿತಪಿಸುವುದು ಜಗದ್ಗುರು ರಾಜೇಶ್ವರಸ್ವಾಮಿಗಳವರಿಂದ ಆಗಲಿಲ್ಲ ಆ ಒಳಕ ಶ್ರೀಪೀಠದ ಗಸ್ವಾಮಿಗಳವರಿಗೆ ಈ ಪೀಠದ ಅಧಿಕಾರ ಪ್ರಾಪ್ತವಾಯಿತ ಒಳರ ತಮ್ಮ ಇಡೀ ಆಯುಷ್ಯವನ್ನು ಪರಿಷ್ಕಾರವಷ್ಟೆ ವಿಜಯಿಸಿಲ್ಲಿಯೇ ಕಳೆದರು ತೆ ನೋಲೆ ದುರಾಗ್ರಹಗಳಾದ ಶ್ರೀ ಜಗದ್ಗುರು ಪಟ್ಟಾಭಿರಾಮಸ್ವಾಮಿಗಳು ಶ್ರೀ ರೋಹಣಮಾಡಿದರ ಋಣಬಾಧೆಯು ಇವರನ್ನು ಎಲ್ಲಾವಿಧದಲ್ಲಿಯೇ ಮಾಡಿತು. ಕವರ ಜೀವಿತ ಪರಿಸ್ಥಿತಿಯಲ್ಲಿಯೇ ಇವರು ತಮ್ಮ ಒಡ್ಡಿಗಳಿಂದ ವಿವಿಧ ಚಿತ್ರಗಳನ್ನು ಸಾಲಾವಳಿಯಲ್ಲಿ ಇಟ್ಟಿದ್ದಾರೆ ಸಾಲಾವಳಿಯ ಪ್ರಕಾರ ಎಲ್ಲಿ ಯಾವ ಸಮಯದಲ್ಲಿ ಶ್ರೀಜಗದ್ಗುರು ಸಿಂಹಾಸನಾರೂಢರಾಗಿದ್ದರು ಎಂದು ಕಂಡುಬರುತ್ತದೆ. ಇವರು ಕಾಲವಾದ ಮೇಲೆ ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯರವರು ತಮ್ಮ ಅಂತ್ಯ ಸಮಯದಲ್ಲಿ ಭಕ್ತಿಯಿಂದ ಸೇವಾನಿರತರಾಗಿದ್ದ ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮದ ಹಿರೇಮಠದ ವೇ|| ಪರಮೇಶ್ವರಯ್ಯನವರ ಸುಪುತ್ರರಾದ ಶ್ರೀ ವಿಶ್ವೇಶ್ವರಶಿವಾಚಾರ್ಯರಿಗೆ ಉತ್ತರಾಧಿಕಾರದ ವಿಲ್ ಒರೆದು ಸಮಾಜಕ್ಕೆ ಮುಖೋಪಕಾರವನ್ನು ಮಾಡಿದರು ಈ ನಮ್ಮ ಸಂದೇಶದಲ್ಲಿ ಶ್ರೀಜಗದ್ಗುರು ವೀರಭದ್ರಶಿವಾಚಾರ್ಯರ ಬಗ್ಗೆ ಒರೆಯಲು ಸ್ಥಾನ ಸಾಲದು ನಾಲ್ಕು ಮಾತುಗಳಲ್ಲಿ ಅವರ ಇತಿಹಾಸ ಮುಗಿಯದು ಅವರ ಸಮಗ್ರ ಇತಿಹಾಸವು ರಚಿತವಾದರೆ ಅದು ಒಂದು ಸಾಮಾನ್ಯ ಪುಟಕ್ಕೆ ಮಿತಾಬಹುದು. ಆ ಕಾರ್ಯವನ್ನು ನೂತನಾಧಿಕಾರಿಗಳು ಸಂದಿಶರಿಂದ ಮಾಡಿಸಿ ಗುರುಭಕ್ತಿಯನ್ನು ಪ್ರಕಟಪಡಿಸಬೇಕಾದುದು ಅವರ ಆದ್ಯ ಕರ್ತವ್ಯವೇ ಆಗಿರುತ್ತದೆ

ಆದ ಪೀಠಕ್ಕಾದ ಸಾಲವು ಇನ್ನೂ ತೀರಿಲ್ಲವೆಂಬುದೊ ದು ವಿಚಾರ ಉತ್ಸವಕ್ಕಾಗಿ ಸೆರೆದ ವೀರಶೈವ ಸಮಾಜ ಪ್ರಮುಖರೂ ಇನ್ನಿತರರೂ ಸ್ವಲ್ಪ ಉದಾರ ಮನಸ್ಸನ್ನು ಮಾಡಿದರೆ ಈ ಋಣವು ಅರ್ಧಘಂಟೆಯಲ್ಲಿ ತೀರಿಹೋಗುವುದು ಆ ಒಗ್ಗೆ ನೂತನ ಜಗದ್ಗುರು ಗಳವರ ನಿಸ್ಪೃಹತ್ವದ ಮುಂದೆ ಶ್ರೀ ಮರದ ಪೂರ್ಣ ವರದಿಯನ್ನಿಷ್ಟೊಂದು ಗರಿಬ್ಧರೆಲ್ಲರೂ ಅವರ ಇಚ್ಛೆಯನ್ನು ಪೂರ್ಣಗೊಳಿಸಬೇಕು ಜಗದ್ಗುರು ವಿಶ್ವಾರಾಧ್ಯ ಪೀಠಕ್ಕೆ ಕ್ಷುಲ್ಲಕ ಹೆಚ್ಚುಕಡಿಮೆ ವರ್ಷಕ್ಕೆ ೬೦ ಸಾವಿರ ರೂಪಾಯಿಗಳ ವರಮಾನವಿದೆ ಪ್ರಜಾ ಸರ್ಕಾರವು 'ಜಮೀನ್ದಾರ್ ದಮನ', 'ಇನಾಮು ಗಳನ್ನು ರದ್ದುಗೊಳಿಸುವುದು' ವಂತಾದೆ ಕಾಯಿದೆ ಗಳ ಪ್ರಕಾರವು ವರಮಾನಕ್ಕೆ ತೊಂದರೆಯಾದೀ ತೆಂದು ವನಸ್ಸು ಸಂಕೋಚಗೊಳ್ಳುತ್ತದೆ ಹೀಗೆ ಪೀಠಗಳಿಗೆ ಕಷ್ಟಪರಂಪರೆಗಳು ಕಾದು ಕುಳಿತಿರುವಂತೆ ಕಾಣುತ್ತದೆ

ಪಂಚಪೀಠಗಳ ಏಕೀಕರಣ

ವಿಜೃಂಭಿಸಿರುವ ಯಾವುದೊಂದು ಪೀಠವು ತನಗೆ ಸಮಾನವಾದ ಇನ್ನೊಂದು ಪೀಠದ ಕಷ್ಟನಷ್ಟ ಗಳನ್ನು ನೀವಾಗಿ ಪಟ್ಟು ಅರ್ಥ ಸಂಪತ್ತಿನಿಂದ ಕೂಡಿಲ್ಲ ಸಮಾಜಸ್ಥೈರ್ಯಗಳ ಸಹಾಯದಿಂದಲೇ ಪೀಠಗಳ ರಕ್ಷಣೆ ಯಾಗಬೇಕಾಗಿದೆ ರುಬುಪುರೀ ಪೀಠಕ್ಕುಂಟಾಗಿದ್ದ ಕಷ್ಟಗಳು ಸುಪ್ರಸಿದ್ಧವಾಗಿವೆ ಶ್ರೀಶೈಲಪೀಠದ ಕಷ್ಟ ಸರಿಸ್ಥಿತಿಯು ಎಲ್ಲರಿಗೂ ತಿಳಿದ ಅಂಶವೇ ಆಗಿದೆ ಕಾಶೀ ಪೀಠದ ಕಷ್ಟಸನ್ನಗಳು ಇನ್ನೂ ತೀರುವಂತಿಲ್ಲ

ಜಮೀನ್ದಾರಿಕೆ ಪಲಾಯಾರು ತೊಂದರೆಗಳು ಇದ್ದರೆ ಇರಬಹುದು ಕೆಲಾರಿ ಪೀಠದ ವ್ಯವಹಾರವು ದೀರ್ಘವಾಗಿ ನಡೆವಂತೆ ಇಂದ ಸಮಾಜೋದ್ಧಾರ ಕಾರ್ಯಗಳನ್ನೂ ಜರುಗಿಸುವುದು ಒಳ್ಳೆಯದು. ನಾನಾ ಮುಖಗಳಿಂದ ಪೀಠಗಳಲ್ಲಿ ಸಂಚಯನಾಗತಕ್ಕ ಹಣವನ್ನು ಅಯಾ ಪ್ರಾಂತಗಳ ಸರ್ಕಾರೀ ಬ್ಯಾಂಕುಗಳಲ್ಲಿಟ್ಟು, ಅನಾವಶ್ಯಕವಾದ ಖರ್ಚುಗಳಿಗೆ ಅಸ್ಪದವೀಯದಂತೆ, ಅವಶ್ಯವೆನಿಸಿದಷ್ಟು ಮತ್ತು ಅನಿವಾರ್ಯವೆನಿಸಿದಷ್ಟು ಹಣವನ್ನು ಮಾತ್ರ ತಮ್ಮ ಪೀಠಕ್ಕೆ ವಿನಿಯೋಗಿಸಿ, ಮಿಕ್ಕಿದ ಹಣದಿಂದ ಸಮಾಜದಲ್ಲಿ ಧರ್ಮಪ್ರಚಾರ ಮತ್ತು ವಿದ್ಯಾ ಪ್ರಸಾರ ಇತ್ಯಾದಿ ಮಹತ್ಕಾರ್ಯಗಳನ್ನು ನಡೆಸುತ್ತ ಹೋಗುವುದು ಮೇಲು. ಹೀಗೆ ಸಂಗ್ರಹವಾದ ಹಣ ದಿಂದ ವಿದೇಶ್ಯಸ್ಥ ಪೀಠಗಳ ಉದ್ಧಾರ ಕಾರ್ಯವನ್ನು ಸುಲಭವಾಗಿ ಆಗಬಲ್ಲುದು. "ಶ್ರೀಜಗದ್ಗುರು ಪಂಚಾಚಾರ್ಯ ಭಂಡು" ಎಂಬ ಹೆಸರಿನಲ್ಲಿ ಪಂಚಪೀಠಾಧಿಪತಿಗಳು ಆಚಾರ್ಯರ ಮತ್ತು ಸಮಾಜ ಮುಂದಾಳುಗಳ ಸಹಾಯದಿಂದ ನಿಧಿ ಸಂಗ್ರಹವನ್ನು ಮಾಡುತ್ತ ಹೋಗಬೇಕು. ಈ ಭಂಡಿಧ ಸಂಯಾಜೆ ವಿನಿಯೋಗ ಮತ್ತು ಅಭಿವೃದ್ಧಿಗಳ ಮೇಲ್ವಿಚಾರಣೆಗಾಗಿ ಪಂಚಪೀಠಗಳ ಪ್ರತಿನಿಧ್ಯವನ್ನು ಪಡೆದ ವಿಶ್ವಾಸಿಗಳ್ಕೆವರೆ ಸಮಿತಿಯೊಂದನ್ನೇರ್ಪಡಿಸಬೇಕು. ಈ ಪದ್ಧತಿಯಿಂದ ಎಂತಹ ಗಂಡಾಂತರವನ್ನಾದರೂ ದಾಟಬಹುದು. ಈ ವಿಚಾರವು ಎಲ್ಲ ಪೀಠಾಚಾರ್ಯರಿಗೂ, ಸಮಾಜಕ್ಕೂ ಸರಿ ಕಂಡಿಲ್ಲಿ ಇದನ್ನು ಕೂಡಲೇ ಕಾರ್ಯರೂಪಕ್ಕೆ ಇಳಿಸಬೇಕು (ಸಶೇಷ)

" ವಿಪರ್ಯಯೇ "

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ವರ್ಯ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಸ್ಥಿರ ಗುರು ಪಟ್ಟಾಭಿಷಿಕ್ತ ಶ್ರೀ ಸಿದ್ಧೇಶ್ವರರಾಜ ದೇಶಿಕೇಂದ್ರ ಗುರುಸಾರ್ವಭೌಮ ಶಿವಾಚಾರ್ಯ ಮಹಾಸ್ವಾಮಿನಾಂ ಆಜ್ಞಾಪ್ರಕಾರ ಸನ್ನಿಧಿ ಅಧಿಕಾರಿಸ್ಥಾನದಿಂದ—

ಶ್ರೀಗುರುಭಕ್ತಿಪರಾಣರಾದ ಮದ್ರಾಸು ಬೊಂಬಾಯಿ ಬೆಜಾಂ ಮೈಸೂರು ಅಧಿಪತ್ಯಗಳಿಗೆ ಸೇರಿದ ಪೇಟೇ ಮನೆ ಮುಂತಾದ ಸಕಲ ಗ್ರಾಮಾನುಗ್ರಾಮಗಳ ಪಟ್ಟು ಚರಾಧಿಕಾರಿಗಳೂ ಮಠಸ್ಥರೂ, ಮಠಪತ್ತಿ, ಗಣಾಚಾರಿ ಗೌಡರು, ಶೆಟ್ಟರು, ಬಣಕಾರ ಶಾನುಭೋಗರು, ದೇಸಾಯಿ ದೇಶಪಾಂಡ್ಯರು, ಬುದ್ಧಿವಂತರು, ಶ್ರೀಮಂತರು, ಯಜಮಾನರೂ ಇನ್ನೂ ಮುಂತಾದ ಸಮಸ್ತ ವೀರಶೈವದವರಿಗೂ ಏತನ್ಮತಾನುಯಾಯಿಗಳಾದ ಸಕ್ಷ ವಿಧ ಶ್ರೀವೈದ್ಯವದವರಿಗೂ ಸಹ ಈ ಪ್ರಸಿದ್ಧಪ್ರಕಟನೆ ಪತ್ರಿಕಾದ್ವಾರಾ ಲಿಖಿಸಿದ ಹುಕುಂ ಏನೆಂದರೆ—

ಶ್ರೀ ಜಗದ್ಗುರು ಮಹಾಸನ್ನಿಧಿಯವರು ತಾರೀಖು ೩೫ ೫೧ ನೇ ಶೇದಿ ಗುರುವಾರ ಸರ್ಕೀಟು ಮುಕ್ಕಾಮು ನಿಂದ ಉಜ್ಜಯಿನೀ ಸಂಸ್ಥಾನಮಠಕ್ಕೆ ಮಿತಪರಿವಾರ ದೊಡನೆ ದಯಮಾಡಿಸುತ್ತಾರೆ

ಶ್ರೀಸದ್ಧರ್ಮಸಿಂಹಾಸನಮಠದಲ್ಲಿ ನಡಿಯತಕ್ಕ ಕಾರ್ಯಕ್ರಮಗಳು

೧ ತಾ|| ೭೫-೫೧ ಸೋಮವಾರ (ಖರ ಸಂ|| ವೈಶಾಖ ಶು|| ೧) ಉಷಃಕಾಲ ಸದ್ಧರ್ಮಸಿಂಹಾಸನ ಮರದಲ್ಲಿ ಗಣಪತಿಪೂಜಾ, ಗುರುಪಾದಪೂಜಾ ನಡೆಯುತ್ತದೆ

೨ ತಾ|| ೮-೫೧ ಮಂಗಳವಾರ ಪ್ರಾತಃಕಾಲ ಮರದಲ್ಲಿ ವಿಧ್ಯುಕ್ತಪ್ರಕಾರ ಸ್ವಸ್ತಿವಾಚನಕಾರ್ಯವು ನಡೆಯುತ್ತದ

೩ ತಾ|| ೯-೫೧ನೇ ಬುಧವಾರ ಉದಯ ನಾಂದೀ ಸಮಾರಾಧನಮಹೋತ್ಸವವು.

೪ ತಾ|| ೧೦ ೫-೫೧ನೇ ಗುರುವಾರ ಉದಯದಲ್ಲಿ ಮರದಲ್ಲಿ ಅಂಕುರಾರ್ಪಣೋತ್ಸವವು

೫ ತಾ|| ೧೧-೫-೫೧ ನೇ ಪಂಚಮೀ ಶುಕ್ರವಾರ ಉದಯದಲ್ಲಿ ಸದ್ಧರ್ಮಪೀಠದಲ್ಲಿ ಮಂಟಪ ದೇವತಾ ಪ್ರತಿಷ್ಠಾಕಾರ್ಯವು ಮತ್ತು ವೀರಮಾಹೇಶ್ವರ ಪಟುಗಳ ದೀಕ್ಷಾವಿಚಾರ ನಡೆಯುತ್ತೆ ಆದ್ದರಿಂದ ದೀಕ್ಷಾವಟುಗಳ ಕರ್ತೃಗಳು ತಮ್ಮ ವಟುಗಳೊಡನೆ ಆ ದಿವಸ ೮ ಗಂಟೆಗೆ ಹಾಜರಾಗಿ ಸಂಸ್ಥಾನದ ಧೈರಿಗೆ ಶೇರಿಸಬೇಕು.

೬ ತಾ|| ೧೨-೫-೫೧ನೇ ಹಷ್ಟಿ ಶನಿವಾರ ಉದಯ ೭ ರಿಂದ ೮ ರ ವರಿಗೆ ಮಠದಲ್ಲಿ ಶಿವಲಿಂಗಸಂಸ್ಕಾರ ದೀಕ್ಷಾವಟುಗಳಿಗೆ ಕಂಕಣಧಾರಣ ಮತ್ತು ಉದಯ ೮ ರಿಂದ ೧೦ ಘಂಟೆವರಿಗೆ ಜ್ಞಾನಗುರು ವಿದ್ಯಾಪೀಠದ ಸಂಬಂಧಸಾಧಾರಣ ಸಭೆ ಆರಂಭವಾಗಿ ಮೊಂಬರುಗಳ ಜ್ಞಾನವನೆ ವಿದ್ಯಾಖಂಡಿಕೆಯ ಘಂಟಿಧ ಲೆಕ್ಕ ತಪಿಪೆ ವಗೈರಾ ಕಾರ್ಯ ನಡೆಯುತ್ತವೆ.

೭. ತಾ|| ೧೩-೫-೫೧ ನೇ ಸಪ್ತಮೀ ಭಾಷುವಾರ ಉದಯ ಸದ್ಧರ್ಮಪೀಠದಲ್ಲಿ ಪಂಚಕಲಶಸ್ಥಾಪನೆ, ಜಪವಷ, ದೀಕ್ಷಾವಟುಗಳಿಗೆ ಸಂಸ್ಕಾರ ಶಿವಲಿಂಗಧಾರಣ ಶ್ರೀ ಜಗದ್ಗುರುಗಳಿಂದ ದೀಕ್ಷಾವಟುಗಳಿಗೆ ಮುಂಜಿವ್ರತ ದೇಶ ಭಕ್ತಿಗೆ ಕಾರ್ಯಗಳು ಫಲಿಯುತ್ತವೆ.

ಮಿಟೋ ದಿನ ಸಾಯಂಕಾಲ ಮೂರು ಘಂಟೆಯಿಂದ ಅರು ಘಂಟೆವರಿಗೆ ಹೊಸ ಮ್ಯಾನೇಜಿಂಗ್ ಬಾಡಿ ಕಾರ್ಯ ಕ್ರಮಗಳು ನಡೆಯುತ್ತವೆ.

೮. ತಾ|| ೧೪-೫-೫೧ ನೇ ಆಪ್ಪಮೀ ಸೋಮವಾರ ನೂತನ ದೀಕ್ಷಾವಟುಗಳನ್ನು ವಿದ್ಯಾಪೀಠಕ್ಕೆ ಆರಿಸಿ ಕೊಳ್ಳುವದು.

ಶ್ರೀಮರುಳಸಿದ್ಧೇಶ್ವರ ದೇವಾಲಯದಲ್ಲಿ ನಡೆಯತಕ್ಕ ಕಾರ್ಯಕ್ರಮಗಳು

೧. ತಾ|| ೬-೫-೫೧ ನೇ ಆದಿತ್ಯವಾರ ರಾತ್ರಿ ಶ್ರೀ ಮರುಳಸಿದ್ಧೇಶ್ವರ ಕಂಕಣಧಾರಣ ಮತ್ತು ಸರ್ವಾವಾಹನ ಮಹೋತ್ಸವ.

೨. ತಾ|| ೭-೫-೫೧ ಸೋಮವಾರ ರಾತ್ರಿ ಶ್ರೀ ಸಿದ್ಧೇಶ್ವರಸ್ವಾಮಿಯ ನವಿಲು ವಾಹನ ಮಹೋತ್ಸವ.

೩. ತಾ|| ೮-೫-೫೧ ನೇ ಮಂಗಳವಾರ ಸದರಿ ಸ್ವಾಮಿಯ ಗಜವಾಹನಮಹೋತ್ಸವ.

೪. ತಾ|| ೯-೫-೫೧ ನೇ ಬುಧವಾರ ರಾತ್ರಿ ಸಿಂಹ ವಾಹನಮಹೋತ್ಸವ

೫. ತಾ|| ೧೦-೫-೫೧ ನೇ ಚತುರ್ಥೀ ಗುರುವಾರ ನಂದಿವಾಹನಮಹೋತ್ಸವ.

೬. ತಾ|| ೧೧-೫,೫೧ನೇ ಪಂಚಮೀ ಶುಕ್ರವಾರ ಸಾಯಂಕಾಲ ನಾಲ್ಕು ಘಂಟೆಯಿಂದ ಶ್ರೀಮರುಳಸಿದ್ಧೇ ಶ್ವರನ ರಥೋತ್ಸವ.

೭. ತಾ|| ೧೩-೫-೫೧ನೇ ಷಷ್ಠಿ ಶನಿವಾರ ಸಾಯಂ ಕಾಲ ನಾಲ್ಕು ಘಂಟೆಯಿಂದ ೬ ಘಂಟೆವರೆಗೂ ಶ್ರೀ ಮರುಳಸಿದ್ಧೇಶ್ವರ ಶಿಖರದ ತೈಲಾಭಿಷೇಕಮಹೋತ್ಸವ ಮತ್ತು ರಾತ್ರಿ ೧೦ ಘಂಟೆಯಿಂದ ಶ್ರೀಮರುಳಸಿದ್ಧೇಶ್ವರ ದೇವತೋತ್ಸವ ದೇವಾಲಯದಿಂದ ಹೊರಟು ರಥದ ಹತ್ತಿರ ಬೆಳಗಾಗುವವರೆಗೂ ಮದಾಲ್ಸೆ ನಡೆದು ಮರು ದಿನ ಉದಯದಲ್ಲಿ ದೇವರು ಗುಡಿದುಂಬುವ ಕಾರ್ಯವು ನಡೆಯುತ್ತದೆ

೮ ತಾ|| ೧೫-೫-೫೧ ನೇ ನವಮಿ ಮಂಗಳವಾರ ಶ್ರೀ ಸಿದ್ಧೇಶ್ವರದೇವಾಲಯವನ್ನು ತೊಳೆಯುವದು ಕಂಕಣವಿಸರ್ಜನಾದಿಕಾರ್ಯಗಳು ನಡೆಯುತ್ತವೆ

ಸೂಚನೆ

೧. ಈ ಮೇಲ್ಕಂಡ ಪ್ರಕಾರ ಖರನಾಮ ಸಂವತ್ಸರ ವೈಶಾಖ ಶು|| ೧ ದಿಂದ ನೌಮಿ ಪರ್ಯಂತವಾಗಿ ಸಂಸ್ಥಾನ ಮಠದಲ್ಲಿ ಮತ್ತು ಶ್ರೀಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ಕಾರ್ಯಕ್ರಮಗಳು ನಡೆಯುತ್ತವೆ

೨. ಶ್ರೀ ಮರುಳಸಿದ್ಧೇಶ್ವರದೇವಸೇವೆಯಲ್ಲಿ ಭಾಗ ವಹಿಸುವ ದೇವಭಕ್ತರು ತಾ|| ೧೦-೫ ೫೧ ನೇ ಗುರು ವಾರ ಸಾಯಂಕಾಲ ೮ ಘಂಟೆಗೆ ದೇವರ ಮುಡುಪು ಕಾಣಿಕಾದಿಗಳನ್ನು ತೆಗೆದುಕೊಂಡುಬಂದು ವನಸೇವೆ ಯಲ್ಲಿ ಭಾಗಿಗಳಾಗತಕ್ಕದ್ದು.

೩. ವಿನ್ಯಾಭಿನ್ನಾನಿಗಳೂ ಪೀರದ ಮೆಂಬರಾಗಿ ಬರ ತಕ್ಕವರು ತಾ|| ೧೦-೫-೫೧ ನೇ ತೇದಿ ಗುರುವಾರ ಸಾಯಂಕಾಲಕ್ಕೆ ಸಂಸ್ಥಾನಮಠಕ್ಕೆ ಹಾಜರಾಗಿ ಶ್ರೀಜಗ ದ್ಗುರು ಮಹಾಸನ್ನಿಧಿಯ ಅಪ್ಪಣೆಪ್ರಕಾರ ವರ್ತಿಸ ತಕ್ಕದ್ದು.

೪. ಶಿವದೀಕ್ಷಾ ಪಡೆಯುವ ಅಥವಾ ಕೊಡಿಸುವ ಸದ್ಭಕ್ತರು ತಾ|| ೧೧-೫-೫೧ ನೇ ಶುಕ್ರವಾರ ಉದಯ ಎಂಟು ಘಂಟೆಯೊಳಗಾಗಿ ಮಠಕ್ಕೆ ಆಗಮಿಸಿ ಶ್ರೀ ಮಹಾಸನ್ನಿಧಿಯವರಿಂದ ಅಪ್ಪಣೆಪಡೆದು ದೀಕ್ಷಾಕಾರ್ಯ ದಲ್ಲಿ ಪ್ರವರ್ತರಾಗತಕ್ಕದ್ದು.

೫. ಈ ಕಾರ್ಯಕ್ರಮಗಳಿಗೆ ಆಗಮಿಸುವ ಸಕಲ ದೇಶದ ಪಟ್ಟಣಿಗರಾಧಿಕಾರಿಗಳೂ ವೀರಮಾಹೇಶ್ವರ ಗುರುಸ್ಥಲ ಮಠಾಧಿಕಾರಿಗಳೂ, ಮತ್ತು ಭಕ್ತಾದಿಗಳು ತಾ|| ೧೦—೫—೫೧ ನೇ ಗುರುವಾರ ಸಾಯಂಕಾಲಕ್ಕೆ ಉಜ್ಜಯಿನೀ ಸಂಸ್ಥಾನ ಮಠಕ್ಕೆ ಸರ್ವರು ಆಗಮಿಸಿ ಶ್ರೀ ಮರುಳಸಿದ್ಧೇಶ್ವರದೇವರ ಕೃಪೆಗೆ ಪಾತ್ರರಾಗುವ ದಲ್ಲದೆ ಶ್ರೀಜಗದ್ಗುರುಗಳಿಂದ ಪ್ರತಿಪಾದಿಸಲ್ಪಡುವ ಧರ್ಮೋಪದೇಶವನ್ನು ಕೇಳಿ ದರ್ಶನಾತೀರ್ವಾದವಂ ಪಡೆದು ಪುನೀತರಾಗತಕ್ಕದ್ದು.

ಶ್ರೀಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ
ವಿಜಯಂತು,
ಟಿ. ಎಚ್. ಎಮ್. ಚಿಕ್ಕವೀರಶಾಸ್ತ್ರಿಗಳು,
ಉಜ್ಜಯಿನೀ.

ವರ್ತಮಾನ ಸಂಗ್ರಹ

ಕೊರಿಯಾ ಯುದ್ಧರಂಗ
ಕಮ್ಯೂನಿಸ್ಟರ ಸಹಿಸಲಶಕ್ಯವಾದ ಪ್ರತಿಭಟನೆ

ಕೊರಿಯಾದಲ್ಲಿ ಕಮ್ಯೂನಿಸ್ಟ್ ಸೇನೆಗಳು ೨೫ ನೇ ತಾ|| ದಿನ ರಾತ್ರಿ ಸಿಯೋಲ್‌ಗೆ ಉತ್ತರದಲ್ಲಿ ೨೫ ಮೈಲಿ ಗಳ ದೂರದಲ್ಲಿರುವ ನುನ್‌ಸಾನ್ ನಗರವನ್ನು ಪ್ರವೇಶಿ ಸಿದವೆಂದು ವರದಿಯಾಗಿದೆ. ವಿಶ್ವಸಂಸ್ಥೆ ಪಡೆಗಳು ಕಮ್ಯೂನಿಸ್ಟರ ಪ್ರತಿಭಟನೆಯನ್ನು ತಡೆಯಲಾರದೆ ಹಿಂದೋಡುತ್ತಿವೆಯೆಂದು ವರದಿಯಾಗಿದೆ.

ಹ್ಯಾನ್ ಎಂಬಲ್ಲಿ ವಿಶ್ವಸಂಸ್ಥೆಪಡೆಗಳು ನೂತನ ರಕ್ಷಣಾ ವ್ಯೂಹವನ್ನು ನಿರ್ಮಿಸಿಕೊಂಡಿದ್ದಾರೆ. ಕಮ್ಯೂ ನಿಸ್ಟರು ಒಂದೇಸಮನೆ ಇಂಜಿನ್ ನದಿಯನ್ನು ದಾಟಿ ಬರುತ್ತಿದ್ದಾರೆಂದು ವರದಿಯಾಗಿದೆ.

ಕೊರಿಯಾದಲ್ಲಿ ಶತ್ರುಗಳಿಗೆ ೭,೫೦,೦೦೦ ಸಾವುನೋವುಗಳು

ಕೊರಿಯಾ ಯುದ್ಧವಾರಂಭವಾದಂದಿನಿಂದ ಕಮ್ಯೂ ನಿಸ್ಟರಿಗೆ ೭,೫೦,೦೦೦ ಸಾವುನೋವುಗಳಾಗಿವೆಯೆಂದು ಅಮೆರಿಕಾ ಸೈನ್ಯಶಾಖೆಯ ಮುಖಂಡರಾದ ಲಾಟ್ನ್ ಕಾಲಿನ್ಸ್‌ರವರು ನುಡಿದರು.

೧೫೭ ಗ್ರಾಮಸ್ಥರನ್ನು ಗಲ್ಲಿಗೇರಿಸುವರು

ಕಮ್ಯೂನಿಸ್ಟ್ ಗೆರಿಲ್ಲಾಗಳನ್ನು ಪ್ರತಿಭಟಿಸಿದರೆಂಬ ಆವಾದನೆಯ ಮೇಲೆ ದ|| ಕೊರಿಯಾದ ೧೫೭ ಗ್ರಾಮ ಸ್ಥರನ್ನು ದ|| ಕೊರಿಯಾ ಬೆಟಾಲಿಯನ್ ಕಮ್ಯಾಂಡೆ ರನವರು ಗಲ್ಲಿಗೇರಿಸಲು ಆಜ್ಞೆ ಇತ್ತಿದ್ದಾರೆ.

೧೬ ವಿಶ್ವಸಂಸ್ಥೆ ವಿಮಾನಗಳು ನೆಲಕ್ಕುರುಳಿದುವು

ಏ. ೨೨ ಕ್ಕೆ ಕೊನೆಯಾದ ವಾರದಲ್ಲಿ ಕೊರಿಯಾ ಕದನರಂಗದಲ್ಲಿ ಕಮ್ಯೂನಿಸ್ಟ್ ಜೀಣಿ ಪಡೆಗಳು ೧೬ ವಿಶ್ವಸಂಸ್ಥೆ ವಿಮಾನಗಳನ್ನು ಗುಂಡಿಕ್ಕಿ ಕೆಳಗುರುಳಿಸಿ ದುವಾಗಿಯೂ ನುತ್ತು ಒಂದು ವಿಮಾನಕ್ಕೆ ಜಖಂ ಉಂಟುಮಾಡಿರುವುದಾಗಿಯೂ ನವಚೀಣ ನ್ಯೂಸ್ ಏಜನ್ಸಿ ವರದಿ ತಿಳಿಸಿದೆ.

ವಿಮಾನಗಳ ಡಿಕ್ಕಿಯಲ್ಲಿ ೪೩ ಜನ ಸಮುದ್ರದ ಪಾಲು

ಅಮೆರಿಕದ ಪೂರ್ವತೀರದ ಬಳಿ ಸಮುದ್ರದ ಮೇಲೆ ಕಳೆದ ವಾರ ಹಾರಾಡುತ್ತಿದ್ದ ಎರಡು ವಿಮಾನಗಳಿಗೆ ಡಿಕ್ಕಿಯಾಗಿ ಎರಡೂ ಸಮುದ್ರಕ್ಕೆ ಬಿದ್ದುವು ಒಂದು ವಿಮಾನದಲ್ಲಿದ್ದ ೪೩ ಮಂದಿಯೂ ಮೃತಪಟ್ಟರೆಂದೂ, ಆ ವೈಕಿ ಒಬ್ಬಾಕೆಯ ರವವು ನೀರಿನ ಮೇಲೆ ತೇಲುತ್ತಿ ತ್ತೆಂದೂ ಹೇಳಲಾಗಿದೆ.

ನೂರು ಮಂದಿ ಸಜೀವಸಮಾಧಿ

ಥಾಕ್ಕಾಕ್ಕೆ ೧೦ ಮೈಲಿಗಳ ದೂರದಲ್ಲಿ ನಾರಾಯಣ ಗಂಜ್‌ನಲ್ಲಿ ಕಟ್ಟಲಾಗುತ್ತಿರುವ ಆದಂಜೀ ಸೇತುಬಿನ ಗಿರಣಿಯ ಭಾರಿ ಷೆಡ್ ಒಂದು ೫೦ ಮೈಲಿ ವೇಗದಲ್ಲಿ ಬೀಸಿದ ಬಿರುಗಾಳಿಯಿಂದ ಕುಸಿದು ಬಿದ್ದುದರಿಂದ ಅದ ರಲ್ಲಿದ್ದ ನೂರುಮಂದಿಯೂ ಸಜೀವ ಸಮಾಧಿಯಾಗಿರ ಬಹುದೆಂದು ಊಹಿಸಲಾಗಿದೆ.

ಬ್ಯಾಂಕ್ ದರೋಡೆ ಬಗ್ಗೆ ೧೧ ಜನರ ದಸ್ತಗಿರಿ

ಕಳೆದ ೨೦ನೇ ತಾ|| ಶುಕ್ರವಾರ ಬೊಂಬಾಯಿನ ಲಾಯಡ್ಸ್ ಬ್ಯಾಂಕಿಗೆ ಸೇರಿದ ೧೨ ಲಕ್ಷ ರೂ. ಗಳನ್ನು ದರೋಡೆ ಮಾಡಿದ ಸಂಬಂಧವಾಗಿ ಸಿ.ಐ.ಡಿ. ಯವರು ೧೧ ಜನರನ್ನು ದಸ್ತಗಿರಿ ಮಾಡಿರುತ್ತಾರೆ. ಅವರು ಯಾರೆಂಬುದು ಬಹಳ ರಹಸ್ಯವಾಗಿದೆ.

೧೧೫ ವರ್ಷದ ವೃದ್ಧನ ಮರಣ

ಧಾರವಾಡ ಜಿಲ್ಲೆಯ ಗುಳೇದಗುಡ್ಡದ ಯುನಾನಿ ವೈದ್ಯರಾದ ಜ|| ಗುಲ್‌ಖಾನ್ ಸಾಹೇಬ್ ಬಾದಾಮಿ ಯವರು ಕಳೆದ ಶುಕ್ರವಾರ ತಮ್ಮ ೧೧೫ನೇ ವರ್ಷ ಮಯಸ್ಸಿನಲ್ಲಿ ನಿಧನರಾದರು.

ಗೂಡ್ಸ್ ರೈಲಿನಲ್ಲಿ ದರೋಡೆ

ಬೆಟ್ಟಗುಂಟದಿಂದ ಮದರಾಸಿಗೆ ಬರುತ್ತಿದ್ದ ಗೂಡ್ಸ್ ರೈಲು ಗಾಡಿಯ ಮೇಲೆ ಕಳೆದ ೨೫ ನೇ ತಾ|| ದಿನ ರಾತ್ರಿ ಸಶಸ್ತ್ರ ಧಾಳಿಕಾರರು ತಿರುವತ್ತಿಯೂರ್ ಸ್ಟೇಷ ನ್ನಿನ ಬಳಿ ಧಾಳಿ ಮಾಡಿ ಬೀಡಿ ತಯಾರಿಕೆಗೆ ಬೇಕಾ ಗುವ ಎಲೆಗಳ ಚೀಲುಗಳನ್ನು ಹೊರಗೆ ಹಾಕಿದರು. ಧಾಳಿಕಾರರಲ್ಲಿ ಇಬ್ಬರನ್ನು ಬಂಧಿಸಲಾಯಿತು. ಉಳಿದ ವರು ಓಡಿಹೋದರು. ಅವರು ಸಿಗ್ನಲ್ ತಂತಿಗಳನ್ನು ಹರಿದುಹಾಕಿ ರೈಲನ್ನು ನಿಲ್ಲಿಸಿದರು.

ಈವರ್ಷ ೨೫೫ ಕೋಟಿ ರೂ. ಉಳಿತಾಯ

ಭಾರತ ಸರ್ಕಾರದ ಆಯವ್ಯಯದಲ್ಲಿ ಪ್ರಸಕ್ತ ಸಾಲಿ ನಲ್ಲಿ ೨೨ ರಿಂದ ೨೫೫ ಕೋಟಿ ರೂ. ಗಳ ನಿವ್ವಳ ಉಳಿತಾಯವಾಗುವುದೆಂದೂ, ಕಳೆದ ವರ್ಷದಲ್ಲಿ ನೀರೀ ಕ್ಷಿಸಿದುದಕ್ಕಿಂತಲೂ ಹೆಚ್ಚಾಗಿ ಉಳಿತಾಯವಾಗಿ ಒಟ್ಟು ೧೬೦ ಕೋಟಿ ಮಿಕ್ಕಿದೆಯೆಂದೂ ಹಣಕಾಸಿನ ಸಚಿವ ರಾದ ಶ್ರೀ ಸಿ. ಡಿ. ದೇಶಮುಖ್‌ರವರು ತಿಳಿಸಿರುತ್ತಾರೆ. ಅಭಿವೃದ್ಧಿ ಯೋಜನೆಗಳಿಗಾಗಿ ಮುಂದಿನ ಸಾಲುಗಳಲ್ಲಿ ಹೆಚ್ಚಿನ ತೆರಿಗೆಗಳನ್ನು ವಿಧಿಸುವ ಅವಶ್ಯಕತೆಯಿಲ್ಲವೆಂದು ಅವರು ಹೇಳಿರುತ್ತಾರೆ.

ಗೋಳಗುಮ್ಮಟದ ರಿಪೇರಿಕೆಲಸ ಮುಗಿಯಿತು

ಬಿಜಾಪುರದಲ್ಲಿರುವ ಸುಪ್ರಸಿದ್ಧ ಗೋಳಗುಮ್ಮಟದ ರಿಪೇರಿ ಕೆಲಸವು ಮುಗಿದಿರುತ್ತದೆ. ಬರುವ ತಿಂಗಳಿನಿಂದ ಅದನ್ನು ನೋಡಲು ಸಾರ್ವಜನಿಕರಿಗೆ ಅವಕಾಶವೀಯ ಲಾಗುವುದು.

ಇಂಗ್ಲೇಂಡಿನಲ್ಲಿ ಸಿಗರೇಟಿನ ಬದಲು ನಶ್ಯದ ಬಳಕೆ

ಇಂಗ್ಲೇಂಡಿನಲ್ಲಿ ಸಿಗರೇಟುಗಳ ಮೇಲಿನ ಸುಂಕವು ಬಹಳವಾಗಿರುವುದರಿಂದ ಅಲ್ಲಿನ ಜನರು ಅವುಗಳನ್ನು ಸೇದುವುದನ್ನು ಬಿಟ್ಟು ನಶ್ಯಹಾಕಲು ಆಭ್ಯಾಸಿಸುತ್ತಿದ್ದಾ ರೆಂದು ತಿಳಿದುಬಂದಿದೆ. ನಶ್ಯ ಹಾಕಲು ಅವರಿಗೆ ಸಿಗರೇಟಿನ ಖರ್ಚಿನಲ್ಲಿ ನೂರನೆ ಒಂದು ಭಾಗದಷ್ಟು ಮಾತ್ರ ವೆಚ್ಚವಾಗುವುದೆಂದು ಹೇಳಲಾಗಿದೆ

ಭಾರಿ ಬೆಂಕಿ ಅನಾಹುತ

ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ಏರ್ಪಡಿಸಿದ್ದ, ಅಖಿಲ ಭಾರತ ಕೈಗಾರಿಕಾ ಮತ್ತು ಲಲಿತಕಲಾ ಪ್ರದರ್ಶನಕ್ಕೆ ನಿನ್ನೆ ಭಾನುವಾರ ಮಧ್ಯಾಹ್ನ ೧ ಗಂಟೆಯ ವೇಳೆಯಲ್ಲಿ ಆಕಸ್ಮಿಕವಾಗಿ ಬೆಂಕಿತಗುಲಿ, ಗಾಳಿ ಇದ್ದುದರಿಂದ ಕಾಡುಕಿಚ್ಚಿನಂತೆ ಪ್ರದರ್ಶನ ಪೂರ್ತ ಬೆಂಕಿ ಆವರಿಸಿ ಮುಕ್ಕಾಲು ಗಂಟೆಯಲ್ಲಿ ಸುಂದರವಾದ ಪ್ರದರ್ಶನವು ಬೆಂದು ಬೂದಿಯಾಗಿಬಿಟ್ಟಿತು. ನೂಗದ ಬೆಂಕಿನಿವಾರಕ ಯಂತ್ರಗಳು, ಮಿಲಿಟರಿಯಂತ್ರಗಳು ಎಷ್ಟು ಶ್ರಮಪಟ್ಟರೂ ಬೆಂಕಿಯು ಹತೋಟಿಗೆಬರದೆ ಒಂದು ಅಂಗಡಿಯೂ ಉಳಿಯದಂತೆ ಇಡೀ ಪ್ರದರ್ಶನವೇ ಭಸ್ಮವಾಗಿಬಿಟ್ಟಿತು.

ಈ ಬೆಂಕಿಯು ವಿದ್ಯುಚ್ಛಕ್ತಿಯ ಷಾರ್ಟ್ ಸರ್ಕ್ಯೂಟ್ ನಿಂದ ಆಗಿರಬಹುದೆಂದು ಹಲವರ ಅಭಿಪ್ರಾಯವಾಗಿದೆ. ಮಧ್ಯಾಹ್ನದ ವೇಳೆಯಾಗಿದ್ದರಿಂದ ಪ್ರದರ್ಶನದಲ್ಲಿ ಹೆಚ್ಚು ಜನರಿರಲಿಲ್ಲ. ಆದ್ದರಿಂದ ದೈವವಶಾತ್ ಪ್ರಾಣಾ ಪಾಯವೇನೂ ಸಂಭವಿಸಲಿಲ್ಲ.

ಈ ಬೆಂಕಿ ಅನಾಹುತದಿಂದ ಸುಮಾರು ಒಂದು ಕೋಟಿ ರೂಪಾಯಿಗಳಷ್ಟಾದರೂ ನಷ್ಟವಾಗಿರಬಹು ದೆಂದು ಊಹಿಸಲಾಗಿದೆ. ಈ ಬಗ್ಗೆ ತನಿಖೆ ಕ್ರಮ ನಡೆಯುತ್ತಿದೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಘಾತಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ವ್ಯಾಸದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾಜ ಅಸ್ತ್ರೋಪಸರ್ಗಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಭಕ್ತಿ ಮೊದಲಾದ ಗ್ರಂಥಗಳಿದ್ದಲ್ಲಿ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ಶಿಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರಿಂದ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ನೀವೈದಿಕಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದನ್ನೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನವಿಲ್ಲದಿರುವುದೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಒಯ್ಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರವಾಗುವಂತೆ ಪಂಡಿತ **ಶ್ರೀಕಾಶೀನಾಥಶಾಸ್ತ್ರಿಗಳವರು** ಬಹಳ ಪ್ರಮಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಒಳ್ಳೆ ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಲ್ಲಿ ಪಂಡಿತ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ನೇತ್ಯವಾಗುವುದು ಪ್ರಾರಂಭಾಭ್ಯಾಸಿಗಳಿಗೂ ಬಹು ಶ್ರಮವಹಿಸದೆ ವಿಷಯಾನುಕ್ರಮಣಿಕೆಯೊ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೭೪೩ ಪಟಗಳಿದ್ದು ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಚಿತ್ರಗಳೂ ಜಗದ್ಗುರುಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಪ್ರತಿಯೊಬ್ಬ ವೀರಶೈವನೂ ಅವಶ್ಯವಾಗಿ ಓದಬೇಕು ಬೆಲೆ ೨ ರೂಪಾಯಿ

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಅವ್ಯಾತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦x೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾನತ್ಕಾರದ ಫೋಟೋ (ನಾನಾವಿಧವರ್ಣಗಳಿಂದ ಮುದ್ರಿತವಾಗಿದ್ದುದು) ಸೈಜು ೧೪ x ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಠಪರ್ಯಾಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರು ಲಿಂಗಾವತಾರದ ಫೋಟೋ ಸೈಜು ೧೪ x ೧೦ ಬೆಲೆ ೧ಕ್ಕೆ	೦—೩—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಧೀಪೂರ್ವಕ ಪ್ರಾರ್ಥನೆಯಂತೆ ೫ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧವರ್ಣದ್ದು)	೦—೪—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಸೀತಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ವರ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ವರ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ	೦—೪—೦
ಶ್ರೀ ಜಗದ್ಗುರು ಉಜ್ಜಯನೀ ಪೀಠದ ಮಹಾವೈಭವದ ಅತ್ಯಂತ ಸುಂದರವಾದ ಫೋಟೋ ಬೆಲೆ	೦—೧—೬
ಶ್ರೀ ಜಗದ್ಗುರು ಉಜ್ಜಯನೀ ಪೀಠದ ಅತ್ಯಂತ ವೈಭವನ ಅಚ್ಚಿಡದ ಸುಂದರ ಫೋಟೋ ಬೆಲೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ನಿಂಗಳೂರು ಕಂಪ್ಲೀನಿಂದ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸಪ್ರೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ಆಣೆ
ಉಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಹಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) (೨ನೆಯ ಆವೃತ್ತಿ)	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾನ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಲ್ಲರೆಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರೆ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ.
ವಿವೇಕಮುಕ್ತಾವಳಿ	೧ ರೂ.
ವಿಚಾರಸಾರಾವಳಿ	೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧೫ ರೂ.
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೨ ರೂ.
ವೀರಶೈವರತ್ನ (೫ನೆಯ ಆವೃತ್ತಿ. ೪೦ ಮಹತ್ವದ ಫೋಟೋಗಳಿರುವುವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As.
The Philosophical Aspect of Viraśaivism (*English*) ...	8 As.
Speeches by Pandit Shri Kashinatha Shastriji (*English*)	12 As.
ಲಿಂಗಧಾರಣಚಂದ್ರಿಕಾ (ತೆಲುಗು)	೩ ಇ.
ವೀರಶೈವರು (ಮರಾಠಿ)	೧ ಇ.
ಮಹಾಗಾರವಣೋಪನಿಷತ್ (ವೀರಶೈವಮತ-ತೆಲುಗು)	೧ ಇ.
ಲಿಂಗಧಾರಣಚಂದ್ರಿಕಾ (ತೆಲುಗು)	೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited, Printed and Published by Rrubanmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪರಿಯಾಮಕರ್ ಪರಿಲಸತ್ಪಂಚಾಕ್ಷರೀದೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ವಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ. ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ಏ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ ನೇ ಮೇ ೧೯೫೧ [ಸಂಚಿಕೆ ೫೫

ಪತ್ರವ್ಯವಹಾರ

[ಚಾತ್ಕೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಸ್ಪಷ್ಟವಾದಿಗೆ ಸ್ಪಷ್ಟ ಉತ್ತರ

ಲೇ —ನ್ಯಾಯನಾದಿ

ತಾ॥ ೬-೧೯೫೧ ರ ಗದಗಿನ 'ಸಾವಧಾನ' ಪತ್ರಿಕೆಯಲ್ಲಿ ಸ್ಪಷ್ಟವಾದಿಯೆಂಬಾತನ "ಅರ್ಧಜ್ಞಾನವಿಲ್ಲದ ಅಪ್ರಯೋಜ್ಯಾರವು ವೃಥಾ ಕಂರಪ್ಪೋಭವು" ಎಂಬ ತಲೆಬರೆಹದ ವೃಥಾ ಆಕ್ಷೇಪಭರಿತವಾಗಿ ಲೇಖವೊಂದು ಪ್ರಕಟವಾಗಿರುವುದು ಸರಿಯಷ್ಟೆ. ಆದರಲ್ಲಿ ಮೈಸೂರು ಪಂಚಾಚಾರ್ಯ ಪ್ರೆಸ್ಸಿನಲ್ಲಿ ಮುದ್ರಿತವಾದ "ವೈದಿಕಶಿವಪೂಜಾವಿಧಿ" ಯ ಒಗ್ಗೆ "ಮುಟ್ಟಿ ನೋಡಲೂ ತಕ್ಕದ್ದಾಗಿಲ್ಲ" ಮುಂತಾಗಿ ಬರೆದು ಜನರಲ್ಲಿ ಅವಿಶ್ವಾಸ ಹುಟ್ಟಿಸುವ ದುಷ್ಪ್ರಯತ್ನ ಮಾಡಲಾಗಿದೆ ಸಂಸ್ಕೃತಜ್ಞರಲ್ಲದ ಕೆಲಜನ ಮುಗ್ಧ ವೀರಶೈವರಲ್ಲಿ ಆ ಲೇಖದಿಂದ ಭ್ರಮೆಯುಂಟಾಗಬಹುದಾದ್ದರಿಂದ ಹಾಗಾಗದಿರಲೆಂದು ಆದಕ್ಕೆ ಈ ಕೆಳಗಿನಂತೆ ಉತ್ತರಿಸಲಾಗಿದೆ

ಧರ್ಮಾವತಾರಿಗಳೆಂದು ಪ್ರಸಿದ್ಧರಾದ ನಾಗನೂರ ಬೃಹನ್ಮಠಾಧ್ಯಕ್ಷ ಕೈ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ಜೀವಿಸಿರುವ ವರೆಗೆ ಬಾಯಿಮುಚ್ಚಿಕೊಂಡು ಎಲ್ಲೋ ಮೂಲೆಯಲ್ಲಿ ಬಿದ್ದಿದ್ದ ಈ ಸ್ಪಷ್ಟವಾದಿಗಳಂತೆ ಹವರು ಈಗ ಅವರು ಶಿವಲೋಕವಾಸಿಗಳಾದ ಮೇಲೆ ಅವರು ಪ್ರಕಟಿಸಿದ ಸರ್ವಶಾಸ್ತ್ರಸಮ್ಮತವಾದ 'ವೈದಿಕ ಶಿವಪೂಜಾವಿಧಿ'ಯನ್ನು ವ್ಯರ್ಥವೆಂದು ನಿಂದಿಸುವ ಜಘನ್ಯವೃತ್ತಿಯನ್ನು ಕೈಕೊಂಡಿದ್ದಾರೆ. ಸ್ಪಷ್ಟವಾದಿಯು ಪೂರ್ವಾಪರವಿಚಾರವಿಲ್ಲದೆ ಮನಬಂದಂತೆ ಹುಚ್ಚು ಹುಚ್ಚಾಗಿ ಬರೆದುಬಿಟ್ಟಿದ್ದಾನೆ. ಆ ಲೇಖದ ಆರಂಭದಲ್ಲಿ "ಅರ್ಧಜ್ಞಃ ಸಕಲಂ ಭದ್ರಂ ಅಶ್ನುತೇ ಎಂದು ಶ್ರುತಿ ಸಾರುತ್ತಿದೆ" ಎಂದು ಬರೆದು ಮತ್ತೆ ಕಡೆಗೆ "ಈ ವೇದ ಮುಗ್ಧರು" "ವೈದಿಕಶಿವಪೂಜಾವಿಧಿಯು ಅರ್ಥರಹಿತವಾಗಿದ್ದು ವ್ಯರ್ಥವಾದದ್ದು" ಮುಂತಾಗಿ ಬರೆದು ಸ್ಪಷ್ಟವಾದಿಯು ತನ್ನ ಮಾತನ್ನು ತಾನೆ ಖಂಡಿಸಿಕೊಂಡಿದ್ದಾನೆ. ಇದರಿಂದ ಈತನ ತಲೆಯು ಎಷ್ಟು ಪರಿಪಕ್ವವಾಗಿದೆಯೆಂಬುದನ್ನು ವಾಚಕರೇ ಊಹಿಸಲಿ. ಶ್ರುತಿ, ವೇದ ಶಬ್ದಗಳು ಪರ್ಯಾಯ ಶಬ್ದಗಳೆಂಬುದೂ ಸ್ಪಷ್ಟವಾದಿಗೆ ತಿಳಿಯದೆ ಹೋಯಿತೆ?

ವೀರಶೈವನು 'ಬಸವ ಬಸವ' ಎನುತ ವಿಭೂತಿ ಧರಿಸಬೇಕೆಂದು ಮಹಿಮರಾದ ನಿಜಗುಣರು ಬರೆದಿರುವರೆಂದು ಸ್ಪಷ್ಟವಾದಿಯು ಬರೆದುಬಿಟ್ಟಿದ್ದಾನೆ. ಈ ರೀತಿ ಅಪಪ್ರಚಾರಮಾಡಿ ವೇದಾಗಮಶಾಸ್ತ್ರ ಮರ್ಯಾದಾಪಾಲಕರೂ ಶಿವಯೋಗ ಧುರೀಣರೂ ಆದ ನಿಜಗುಣರ ಹೆಸರಿಗೆ ಕಲಂಕಹಚ್ಚುವುದು ತರವಲ್ಲ.

"ಬಳಸದಿರಿದ್ವೈತವನು ಬಾಹ್ಯದಲಿ, ನಿನ್ನೊಳಗೇಕೋ ಭಾವನೆಯೊಡಗೂಡು । ತಿಳಿದು ಸಮಯನಿಷ್ಠೆಗಲಿ, ವೇದವಿಧಿಭಕ್ತಿಗಳನಗಲದಿರ್" ಎಂದು ಉಸುರಿದ ಆ ಮಹಾನುಭಾವನನ್ನು ಈ ಸ್ಪಷ್ಟವಾದಿಯು ತನ್ನ ಪಕ್ಷಕ್ಕೆ ಎಳೆದುಕೊಳ್ಳುವ ದುಸ್ಸಾಹಸ ಮಾಡಿರುವುದು ಆಶ್ಚರ್ಯವಲ್ಲವೆ? ಶ್ರೀಮನ್ನಿಜಗುಣರು ವಿವೇಕಚಿಂತಾಮಣಿಯಲ್ಲಿ 'ವೀರಶೈವ ಭಸ್ಮಧಾರಣ' ಎಂಬ ವಿಷಯವನ್ನೆತ್ತಿ "ಶ್ರೀಮದ್ವಿಭೂತಿಯನಾಧಾರದಿಂ ತೆಗೆದುಕೊಂಡು ಮೇಲೆ ವಾಮಹಸ್ತದ ಅಂಗುಷ್ಠಾದ್ಯಂಗುಳಗಳಲ್ಲಿ ಯಕಾರಾದಿ ನಕಾರಾಂತವಾದ ಪಂಚಾಕ್ಷರಂಗಳನುಚ್ಚರಿಸುತ್ತ ಆ ವಿಭೂತಿಯನಿರಿಸಿ, ಬಳಿಕ ... ದಕ್ಷಿಣ ಕರದಿಂ ಮುಚ್ಚಿ ಬಲದ ತೊಡೆಯ ಮೇಲಿಟ್ಟು... ... ಮೂಲಮಂತ್ರದಿಂದೇಕಾದಶವಾರ ಮಂತ್ರಿಸಿ । ಅಥವಾ 'ಅಗ್ನಿರಿತಿಭಸ್ಮ' ಎಂಬ ಭಸ್ಮಸೂಕ್ತ, ಕಾಲಾಗ್ನಿರುದ್ರೋಪನಿಷತ್ತು, ಮಾನಸ್ತೋಕ, ತ್ರಿಯಾಯುಷ, ತ್ರ್ಯಂಬಕ ಮಂತ್ರಂಗಳಿಂದೆತ್ತಿ ಬಳಿಕಾವಿಭೂತಿಯಂ ... ಸರ್ವಾಂಗದಲ್ಲಿ ಸಂಪ್ರೋಕ್ಷಿಸಿ ಬಳಿಕಾ ಚಮನಗೊಂಡು ಮತ್ತು ವಿಭೂತಿಯಂ ತೆಗೆದುಕೊಂಡು ಸರ್ವಾಂಗವನ್ನು ದ್ಧೂಳಿಸಿ । ಮತ್ತಮಾ ಭಸಿತಮಂ ಜಲಮಿಶ್ರಿತಮಂ ಮಾಡಿ ಪೂರ್ವೋಕ್ತ ಲಲಾಟಾದಿಸ್ಥಾನಂಗಳಲ್ಲಿ ತ್ರಿಯಾಯುಷ, ತ್ರ್ಯಂಬಕಾದಿ ಪೂರ್ವೋಕ್ತಮಂತ್ರಂಗಳಂ ಜಪಿಸುತ್ತ ತಿರ್ಯಕ್ತ್ರಿವುಂಡ್ರ ಧಾರಣಂಗೈದು" ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ ಇದರಂತೆ ಶಿವದೀಕ್ಷಾಸಂಸ್ಕಾರ, ವೀರಶೈವಪಡಂಗನ್ಯಾಸ, ಪಂಚಬ್ರಹ್ಮನ್ಯಾಸ, ರುದ್ರಾಕ್ಷಧಾರಣಾದಿ ವಿಧಿಗಳನ್ನು ವೇದಾಗಮ ಕ್ರಮಾನುಸಾರವಾಗಿ ಆಯಾ ಮಂತ್ರಗಳನ್ನು ನಿರ್ದೇಶಿಸುತ್ತ ಸ್ಪಷ್ಟಪಡಿಸಿದ್ದಾರೆ. ಸ್ಪಷ್ಟವಾದಿಯು ವಿವೇಕಚಿಂತಾಮಣಿಯನ್ನು ಸರಿಯಾಗಿ ಓದಿ ತಿಳಿದುಕೊಳ್ಳಲಿ! ೧೧ ನೆಯ ಶತಮಾನಕ್ಕಿಂತ ಪ್ರಾಚೀನರಾದ ನಿಜಗುಣರಿಗೂ ಕಲ್ಯಾಣದ ಬಸವಣ್ಣನವರಿಗೂ ಯಾವ ಸಂಬಂಧವೂ ಇಲ್ಲ. ಹೀಗಿರಲು ಶಾಸ್ತ್ರಜ್ಞರಾದ ನಿಜಗುಣರು 'ಬಸವ' ಎಂದು ವಿಭೂತಿ ಧರಿಸಿಕೊಳ್ಳಲು ಹೇಳುವುದು ಅಸಂಭವವು; ಹೇಳಲ್ಲ

ಸ್ಪಷ್ಟವಾದಿ ನಾಮಧಾರಿಯು ಯಾವ ಸ್ವಾರ್ಥ ಹೇತುವಿನಿಂದ ಸಂಸ್ಕೃತಮಂತ್ರಗಳನ್ನು ನಿಂದಿಸುತ್ತಿರುವನೋ ತಿಳಿಯದಾಗಿದೆ (?) ವೀರಶೈವರಿಗೆ ಉಪಾಸ್ಯವೂ ಭವತಾರಕವೂ ಆದ ಪಂಚಾಕ್ಷರ ಮಹಾಮಂತ್ರವೆಂಬ ರತ್ನವು ಯಜುರ್ವೇದವೆಂಬ ದುರ್ಗದಲ್ಲಿದೆ. ಪಂಚಾಕ್ಷರ ಮಂತ್ರವೂ ವೈದಿಕವಾದ್ದರಿಂದ ಇನ್ನು ಮೇಲೆ ಸ್ಪಷ್ಟವಾದಿಯು ಅದನ್ನು ಬಿಟ್ಟುಬಿಡುವನೇನೋ ನೋಡಬೇಕು! ಈ ರೀತಿ ಹಿಂದುಮುಂದು ವಿಚಾರಿಸದೆ ವ್ಯರ್ಥವಾಗಿ ವೇದನಿಂದೆಯನ್ನು ಮಾಡುವ ಸ್ಪಷ್ಟವಾದಿಯ ವರ್ತನವನ್ನು ಕಂಡು, ತಾನು ನಿಂತ ಟೊಂಗೆಯನ್ನೇ ಕಡಿದುಕೊಳ್ಳುವ ಮಡ್ಡುಮನುಷ್ಯನ ಕತೆಯು ಯಾರಿಗಾದರೂ ನೆನಪಾಗಬಹುದಾಗಿದೆ.

"ಏತಾನಿ ತಾನಿ ಶಿವಮಂತ್ರ ಪವಿತ್ರಿತಾನಿ....."

ಎಂಬ ಮಂತ್ರವು ಮೈಸೂರು ವೈದಿಕಶಿವಪೂಜಾವಿಧಿಯಲ್ಲಿಲ್ಲ ಅಲ್ಲಿ ಪಂಚಬ್ರಹ್ಮಮಂತ್ರ, ಅಭಿಮರ್ಶಮಂತ್ರಗಳಿಂದ ಭಸ್ಮವನ್ನು ಅಭಿಮಂತ್ರಿಸಬೇಕೆಂದೂ ಜಮೇಲೆ ಕ್ರಮಪ್ರಕಾರ ಆಯಾ ಮಂತ್ರಗಳಿಂದ ಭಸ್ಮಸ್ನಾನವನ್ನು ಚರಿಸಿ ಜಲಮಿಶ್ರಿತ ಭಸ್ಮವನ್ನು ಮಸ್ತಕಾದಿ ಅವಯವಗಳಲ್ಲಿ ಧರಿಸಿಕೊಳ್ಳಬೇಕೆಂದೂ ಹೇಳಲಾಗಿದೆ. ಈ ವಿಧಾನವು ಶಿವಾಗಮ ಶಿವಸಂಪ್ರದಾಯ ಸಮ್ಮತ ನಾಗಿದೆ.

"ಏತಾನಿ ತಾನಿ ಶಿವಮಂತ್ರ..." ಎಂಬ ಮಂತ್ರವು ಬೇರೆ ಯಾವ ಶಿವಪೂಜಾವಿಧಿಯಲ್ಲಾದರೂ ಇರಬಹುದು ಆದರೆ ಇದರಲ್ಲಿ ಅಸಾಮಂಜಸ್ಯವೇನಿದೆ? ಯಾರೇನು ಮಾಡುವುದು? "ಭಸ್ಮಾನಿ ಕಾಮದಹನಾಂಗ ವಿಭೂಷಿತಾನಿ" ಎಂಬ ಪದಗಳಿಗೆ 'ಕಾಮದಹನದ ಚಿತಾಬೂದಿ' ಎಂದು ಅರ್ಥಮಾಡಿದ ಸ್ಪಷ್ಟವಾದಿಯ ಮಂಕುಬುದ್ಧಿಗೆ ಎಷ್ಟು ಕನಿಕರಪಟ್ಟರೂ ತೀರದಾಗಿದೆ. 'ಕಾಮಾರಿಯಾದ ಪರಶಿವನ ಶರೀರಕ್ಕೆ ಭೂಷಣಗಳಾದ ಭಸ್ಮಗಳು' ಎಂಬುದೇ ಇವುಗಳ ಅರ್ಥವೆಂದು ಸಂಸ್ಕೃತಜ್ಞರಿಗೆ ತಿಳಿಯದಿರದು. ಕಾಮದಹನವಾಗಿ ಯುಗಾಂತರ ಜರುಗಿದ್ದರಿಂದ ಈಗ ಕಾಮದಹನದ ಬೂದಿಯನ್ನು ಹೇಗೆ ಧರಿಸಲು ಸಾಧ್ಯ? ಶಾಸ್ತ್ರೋಕ್ತಿಯಂತೆ ಗೋಮಯದಿಂದ ಸಿದ್ಧವಾದ ಭಸ್ಮವನ್ನೇ ಲೋಕದಲ್ಲಿ ಎಲ್ಲರೂ ಧರಿಸುತ್ತಿದ್ದಾರೆ ಈ ಬಗ್ಗೆ ಸ್ಪಷ್ಟವಾದಿಯು ತಿಳಿಯದೆ ವೃಥಾ ಆಕ್ರೋಶ ಮಾಡಿದ್ದಾನೆಂದು ಸಿದ್ಧವಾಯ್ತು. ಇನ್ನು "ದೈವಲಿಖಿತಾನಿ ದುರತ್ಯಯಾನಿ" ಎಂಬುದರ ಮೇಲಿರುವ ಆಕ್ಷೇಪವನ್ನು ಪರಿಹರಿಸುವಾ: ದೈವಲಿಖಿತ ದುರ್ಲಿಪಿಗಳೆಲ್ಲ ದಿದ್ದರೆ ದೀಕ್ಷೆಯಾದ ಮೇಲೂ ವೀರಶೈವನು ಸಾಂಸಾರಿಕ ತಾಪತ್ರಯದಿಂದ ಬಳಲಿ ಕಣ್ಣೀರಿಡುವುದೇಕೆ? ಶಿವದೀಕ್ಷಾ ಸಂಸ್ಕಾರ, ಭಸ್ಮಧಾರಣಗಳಿಂದ ಸಂಚಿತ ಕರ್ಮಸಂಬಂಧವಾದ ದುರ್ದಶೆಗಳು ಅಳಿವುವಲ್ಲದೆ ಪ್ರಾರಬ್ಧವಲ್ಲವೆಂಬುದನ್ನು ಸ್ಪಷ್ಟವಾದಿಯು ನೆನಪಿನಲ್ಲಿಡಬೇಕು. ಜ್ಞಾನಿಗಳಿಗೂ ಪ್ರಾರಬ್ಧ ಕರ್ಮಜನ್ಯ ಶರೀರ ಭೋಗವಿದಿಗಳು ನಡೆದೇ ಇರುತ್ತವೆ. ತಾನೇ ಅದ್ವಿತೀಯ ಪರಶಿವನಾಗುವೆವು ಮುಕ್ತಾವಸ್ಥೆಯಿಲ್ಲಿ, ಸಾಧನಾವಸ್ಥೆಯಲ್ಲಲ್ಲ. ವೀರಶೈವರು ಸಾಧನಾವಸ್ಥೆಯಲ್ಲಿ ಅದ್ವೈತವನ್ನು ಒಪ್ಪಿಲ್ಲ. ಒಪ್ಪಿದಲ್ಲಿ ಸ್ವಾಮಿಭೃತ್ಯ ಸಂಬಂಧವೇ ಅಳಿದು ಪೂಜೋಪಚಾರಾದಿಗಳು ವ್ಯರ್ಥವಾಗಬೇಕಾದೀತು. ಭಕ್ತಸ್ಥಳದ ಆಚಾರವಿಚಾರಗಳನ್ನು ಅಳವಡಿಸಿಕೊಂಡು ಮಹೇಶಸ್ಥಳವನ್ನು ಮುಟ್ಟಿದವನಿಗೂ ಷಟ್ಸ್ಥಳಸ್ಥಾಪನ ಪರಮಾಚಾರ್ಯರಾದ ರೇಣುಕರು ಅದ್ವೈತವನ್ನು ಉಪದೇಶಿಸಿಲ್ಲ. ಮಹೇಶಸ್ಥಳಾಂತರ್ಗತವಾಗಿ ಅದ್ವೈತನಿರನಭಸ್ಥಳವಿರುವುದನ್ನು ಎಲ್ಲರೂ ಲಕ್ಷಿಸಬೇಕು. ಲಿಂಗಾಂಗಸಾಮರಸ್ಯರೂಪವಾದ ಅದ್ವೈತ ಭಾವವು ಸ್ಥಾನಲಿಂಗಿಸ್ಥಳದಲ್ಲಿ ಅಂಕುರಿಸುತ್ತದೆ. ಶರಣಸ್ಥಳದಲ್ಲಿ ಬಲಿಯುತ್ತದೆ, ಐಕ್ಯಸ್ಥಳದಲ್ಲಿ ಸಿದ್ಧಿಸುತ್ತದೆ.

[೯ ನೇ ಪುಟದನ್ನು ನೋಡಿ]

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು

ವೈಶಾಖ ಶು॥ ೩ ಬುಧವಾರ ವೈಶಾಖ ಶು॥ ೫ ಶುಕ್ರವಾರ



ಸಕಲ ಜೀವಕೋಟಿ ಉದ್ಧಾರಕ್ಕಾಗಿ ಧರ್ಮಪೀಠಸ್ಥಾಪಿತಕ್ಕೆ ಧರ್ಮಪವಿತ್ರಕ್ಷೇತ್ರ ಮುಸ್ಮಕಮಣೀ ಎಂತಲಾದ ಶ್ರೀಪರ್ವತಪ್ರಾಂತದಲ್ಲಿ ವಿರಾಜಿಸುವ ಶ್ರೀಭೀಮನಾಥ ಶ್ರೀಸಿದ್ಧೇಶ್ವರ ಕಾರಣಗಳ ಜನತೆರಿಸಿ ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಓಮಂಡಲದಲ್ಲಿ ಸೆಗಳಿಸಿ ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮ, ಪ್ರಮೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶವನ್ನಾರಾ ಉದ್ಧರಿಸಿ ರೂಕ್ಷಕವ್ಯಾಜ್ಯರಾಗಿರುವರೊ, ಅಂತಹ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಸ್ವಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು **ವೈಶಾಖ ಶು॥ ೩ ಬುಧವಾರ ತಾ॥ ೯—೫—೧೯೫೧ ನೆಯ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವನವನ್ನೂ, ವೈಶಾಖ ಶು॥ ೫ ಶುಕ್ರವಾರ ತಾ॥ ೧೧—೫—೧೯೫೧ ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವನವನ್ನೂ ನೆರವೇರಿಸಬೇಕು** ಈ ಪೂಡಲು ಈ ಪತ್ರಿಕೆಯಲ್ಲಿ ಪ್ರಸಿದ್ಧವಡಿಸಿದಂತ ಭರಹಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣ ಕಾಚಾರ್ಯರ ಹಾಗೂ ವಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀ ಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ ಶುದ್ಧಸಂಪ್ರದಾಯದ ವೀರಶೈವರು ಸದ್ಯ: ಪ್ರಾಪ್ತವಾಗಿರುವ ಆಚಾರ್ಯರ ಜಯಂತೀ ಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

—ಸಂ

॥ ಶ್ರೀಜಗದ್ಗುರು ಪಂಡಿತಾರಾಧ್ಯೋ ವಿಜಯತೇ ।

ಶ್ರೀಶಾಖೀ ಜಗದ್ಗುರು ವಿಶ್ವಾರಾಧ್ಯಪೀಠದ ನೂತನ ಸಪ್ಟೆಂಧಿಕಾರನಮಹೋತ್ಸವಕಾಲದಲ್ಲಿ

ಶ್ರೀಶೈಲ ಜಗದ್ಗುರು ಶ್ರೀ ವಾಗೀಶಪಂಡಿತಾರಾಧ್ಯ ಶಿವಾಚಾರ್ಯಮಹಾಸ್ವಾಮಿಗಳವರು ಕೆಳುಹಿಸಿದ

ಶುಭ ಸಂದೇಶ

ಕಳೆದ ಸಂಚಿಕೆಯಿಂದ ಮುಂದುವರಿಯುದು]

ವೀರಶೈವ ಸಮಾಜ

ವೀರಶೈವ ಸಮಾಜವು ಯುಗಯುಗಾಂತರಗಳಿಂದ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿದೆ ವೇದ ಕಾಲದಲ್ಲಿ ಆವಾ ಅದಕ್ಕೂ ಮೊದಲು ಈ ವೀರಶೈವ ಮತವು ಕೇವಲ ತಾತ್ವಿಕ ಸಿದ್ಧಾಂತದ ಮೇಲೆಯೇ ಪ್ರಚಾರವಾಗಿದ್ದ ಕಾರಣ, ಆ ಕಾಲದ ವೈದಿಕ ಮತ ಗಳೆಲ್ಲವೂ ಈ ಮತದಲ್ಲಿ ಸಮಾನೇಶವಾಗುತ್ತ ಬಂದಂತೆ ಕಾಣುತ್ತದೆ ಶೈವರೂ ಸ್ವಾರ್ತರೂ ತತ್ವಗುರಿಯನ್ನೇ ಪ್ರಧಾನವಾಗಿಟ್ಟುಕೊಂಡು ಈ ಮತಕ್ಕೆ ಸೇರಿದಂತೆ ಇತಿಹಾಸವು ಸಾರುತ್ತದೆ ವೈಷ್ಣವರೂ ಕೂಡ ಈ ವೀರಶೈವ ಮತಕ್ಕೆ ವಿರೋಧವಿಲ್ಲದಂತೆ ವರ್ತಿಸಿದ ಉದಾಹರಣೆಗಳನೇಕವಾಗಿವೆ ಶ್ರೀಕೃಷ್ಣ, ಶ್ರೀರಾಮ ಚಂದ್ರ ಮೊದಲಾದವರೂ ಶಿವೋಪಾಸನೆಮಾಡಿ ಸಿದ್ಧಿಯನ್ನು ಪಡೆದಂತೆ ರಾಮಾಯಣ—ಮಹಾಭಾರತಗಳು ಸಾರಿ ಸಾರಿ ಹೇಳುತ್ತವೆ ಆದ್ದರಿಂದ ವೈಷ್ಣವರಿಗೂ, ವೀರಶೈವರಿಗೂ ಸ್ನೇಹಸೌಹಾರ್ದಗಳು ಬೆಳೆದು ಒರತ್ತಿರುವುದು ಸಹಜವಾಗಿದೆ ಇಂತಹ ವ್ಯಾಪಕವಾದ ವೀರಶೈವ ಸಿದ್ಧಾಂತವನ್ನು ಜೈನಮತದವರೂ ಅತ್ಯಾನಂದ ದಿಂದ ಸ್ವೀಕರಿಸಿದಂತೆ ಐತಿಹಾಸಿಕ ಉಲ್ಲೇಖನೀಯವೇ ಸೈ ರೆಯುತ್ತವೆ ವೀರಶೈವ ಮತದ ಕಾಲಮಾನವನ್ನು ಕಂಡುಹಿಡಿಯ ಹೋದಂತಿಲ್ಲ ಅದು ಮತ್ತೆ ಮತ್ತೆ ಪ್ರಾಚೀನವಾಗುತ್ತಲೇ ಹೋಗುತ್ತಿರುವುದು ಇತಿಹಾಸ ಸಂಶೋಧಕರಿಗೆ ಗೊತ್ತಾದ ಸಂಗತಿಯಾಗಿದೆ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಈ ವೀರಶೈವ ಸಿದ್ಧಾಂತವನ್ನು ಭರತ ಖಂಡದೆಲ್ಲೆಲ್ಲ ಹರಡಿದರೆಂಬುದು ಸುಪ್ರಸಿದ್ಧವೇ ಆಗಿದೆ ಜನ್ಮತ' ಬ್ರಾಹ್ಮಣರಾಗಿದ್ದ ಭಕ್ತಿ ಭಂಡಾರಿ ಬಸವಣ್ಣನವರು ಈ ವೀರಶೈವ ಮತದ ಮಹತ್ವವನ್ನರಿತೇ ವೀರಶೈವ ದೀಕ್ಷೆಯನ್ನು ಹೊಂದಿ, ವೀರಶೈವ ಮತದ ಉನ್ನತಿಗಾಗಿ ಅವಿಚ್ಛಿನ್ನವಾಗಿ ಪ್ರಯತ್ನಿಸಿದ್ದುದು ಎದ್ದುಕಾಣುತ್ತದೆ ವೀರಶೈವ ಮತ ಪ್ರಚಾರಕ್ಕೆ ಗುರುಶಾಖಾಧಿಕಾರವುಳ್ಳ ಜಂಗಮರು ಕಲ್ಯಾಣದ ಭಾಗದಲ್ಲಿ ಕಡಿಮೆ ಬಿದ್ದ ಕಾರಣ, ಬಸವಣ್ಣನವರು ಕಾಶ್ಮೀರಕ್ಕೆ ಕೋರೀಸಿಬ್ಬಯ ವೇಷವನ್ನು ಹಾಕಿಕೊಂಡು ಹೋಗಿ ಅಲ್ಲಿಯ ಅರಸರಿಗೆ ಗೊತ್ತಾಗದಂತೆ ಜಂಗಮರನ್ನು ಕರೆತಂದ ವಿಷಯವು ಬಸವಣ್ಣನವರ ವೀರಶೈವ ಮತಪ್ರಚಾರ ಪ್ರೇಮವನ್ನು ಸ್ಪಷ್ಟ ಪಡಿಸುತ್ತಿದೆ ಇದನ್ನು ಒವಪುರಾಣದಲ್ಲಿ ಕಂಡು ಕೊಳ್ಳಬಹುದು

ಇಂತಹ ಪರಮಪವಿತ್ರವಾದ ವೀರಶೈವ ಮತವು ೧೨ನೆಯ ಶತಮಾನದಿಂದೀಚೆಗೆ ಸಂಸ್ಕೃತಿಯನ್ನು ಮಾರಿ ಉದ್ಯೋಗಕ್ಕೊಂದು ಜಾತಿಯಂತೆ ಭಿನ್ನ ಭಿನ್ನವಾಗಿ ಆಸ್ಪೃಶ್ಯಭೂತಕ್ಕೆ ಆಹುತಿಯಾಯಿತು ಇದರ ಲಾಭವನ್ನು ಸಮಾಜವರ್ತಿಗಳಾದ ಇತರ ಸಹೋದರರು ಪಡೆದುಕೊಂಡರೆಂದು ಒಪ್ಪಲೇಬೇಕಾಗುವುದು ವೀರ ಶೈವರನ್ನು ಹಿಂದೂ ಲಾದಲ್ಲಿ ಶೂದ್ರ ಪಂಕ್ತಿಗೆ ಎಳೆದಿರುವ ಕಾರಣವೇನೆಂಬುದನ್ನು ನಾವು ಇನ್ನೂ ಯೋಚಿಸದಿರುವುದು ಶೋಚನೀಯವಿಚಾರ ನಮ್ಮಲ್ಲಿ ಹಲವಾರು ಕಾರಣಗಳಿಂದ ಏಕ್ಯತೆ ಸಂಭವಿಸುವುದು ಕಷ್ಟಸಾಧ್ಯವಾಗಿ ಬಿಟ್ಟಿದೆ ಆದಕ್ಕಾಗಿ ನಮ್ಮ ವೀರಶೈವ ಮತವು ದಿನೇ ದಿನೇ ಮೂಲೆಗುಂಪಾಗುತ್ತಿರುವುದು ಪ್ರತ್ಯಕ್ಷವಾಗಿದೆ ಒಡಕುಹೊಡೆಯುಗಳ ಜಂಜಾಟದಲ್ಲಿ ಗುರುವಿರಕ್ತರ ಇಬ್ಬಣವೊಂದು ಎನ್ನುಕಾಣುತ್ತದೆ ಈ ಇಬ್ಬಣದಿಂದ ವೀರಶೈವ ಸಮಾಜಕ್ಕೆ ಆದ ಹಾನಿಯು ಅಷ್ಟಿಷ್ಟೆಂದು ಹೇಳಲು ಬರುವಂತಿಲ್ಲ ಈ ಒಡಕು ಕೆಲವರ ಕೇವಲ ಸ್ವಾರ್ಥಸಾಧನೆಗಾಗಿ ವರ್ಷಟ್ಟುದುದೇ ಹೊರತು ಇದರಿಂದ ಸಮಾಜಕ್ಕೆ ತಿಲಮಾತ್ರವೂ ಕಲ್ಯಾಣವಾಗುವಂತಿಲ್ಲ—ಇದನ್ನು ಕರುಣಜಗತ್ತು ಬೇಗ ಅರಿತು ಕೊಂಡಷ್ಟೂ ಶ್ರೇಯಸ್ಕರವು ವಿದ್ಯಾವಂತರಾದ ಗುರು

ವಿರಕ್ತರೂ, ವಿನೇತೆಗಳಾದ ತರುಣರೂ ಈ ಇಚ್ಛಾಶಕ್ತಿಯ ಎಷ್ಟೂ ಬೆಲೆ ಕೊಡದಂತೆ ವ್ಯಾಪಕವಾಗಿ ವಿಕಮಿಸುತ್ತಿದ್ದಂತೆ ಮುಂದೆ ಸಾಗಿದರೇನೇ ಸಮಾಜಕ್ಕೆ ಕಲ್ಯಾಣವಾದೀತು !

ವೀರಶೈವ ಸಮಾಜವು ಸಾಧ್ಯವಿರುವಷ್ಟು ಮಟ್ಟಿಗೆ ಸಮಿಾಪ ಸಂಬಂಧವುಳ್ಳ ತನ್ನ ಒಳ ಪಂಗಡಗಳಲ್ಲಿ ಕೂಡಿ ಕೊಳ್ಳುತ್ತಾ ಹೋದರೆ ಇನ್ನೂ ಮೇಲು ಹಿಂದಿನ ಕಾಲದಲ್ಲಿ ಲಿಂಗವಂತರಾಗಿದ್ದ ಎಷ್ಟೋ ಜನರು ಪರ ಮತೀಯರ ದಬ್ಬಾಳಿಕೆಯ ಕಾಲದಲ್ಲಿ ಇಷ್ಟಲಿಂಗಗಳಿಂದ ದೂರಾಗಿದ್ದಾರೆ ಗುರುಪೀಠದವರು ಸ್ವಲ್ಪ ವಿಶಾಲ ಭಾವನೆಯಿಂದ ಇಂಥವರನ್ನು ಉದ್ದಾರಮಾಡಬೇಕಾ ದುದು ಧರ್ಮವಾಗಿದೆ ಈಗೀಗ ಪ್ರಜಾರಾಜ್ಯವು ಏರ್ಪಟ್ಟಿರುವುದರಿಂದ ವೀರಶೈವ ಸಮಾಜಕ್ಕೆ ಸಿಕ್ಕಿರುವ ಹಕ್ಕು ಬಾಧ್ಯತೆಗಳು ಅತ್ಯಲ್ಪವಾಗಿವೆ ನಮ್ಮ ವೀರಶೈವ ಮುಖಂಡರು ಈ ವಿಷಯವನ್ನು ಹೆಚ್ಚಾಗಿ ಗಮನಿಸಿ ಸರಕಾರೀ ಹುದ್ದೆಗಳಲ್ಲಿ ಪ್ರತಿನಿಸಿಸಬೇಕು ವೀರಶೈವ ಮತಗಳನ್ನು ನಾಲ್ಕು ದಿಕ್ಕುಗಳಿಂದ ರಕ್ಷಿಸಿಕೊಳ್ಳಬೇಕು. ಹಾಗೆ ಮಾಡದೇ ಹೋದರೆ ಸ್ವಲ್ಪ ದಿನಸಗಳಲ್ಲಿ ವೀರಶೈವ ಸಮಾಜದ ಸ್ಥಿತಿಯು ನಗಣ್ಯವಾಗಿಒಹುದು

ಮಠಾಧೀಶ್ವರರ ಕರ್ತವ್ಯ

ವೀರಶೈವ ಸಮಾಜದಲ್ಲಿ ಮಠಗಳು ಅಸಂಖ್ಯವಾಗಿವೆ ಈಶ್ವರ ಕೃಪೆಯಿಂದ ಅವುಗಳಿಗೆ ಆಸ್ತಿಗಳೂ ಸಾಕಷ್ಟಿನಿವೆ ವೀರಶೈವ ಸಮಾಜೋನ್ನತಿಗಾಗಿಯೇ ಈ ಮಠಗಳು ನಿರ್ಮಾಣವಾಗಿವೆ ಗುರುಮಠಗಳೂ, ವಿರಕ್ತಮಠಗಳೂ ಸಾಧ್ಯವಾದ ರೀತಿಯಲ್ಲಿ ವೀರಶೈವರ ಮತ್ತು ಇತರ ಸಮಾಜದವರ ಉನ್ನತಿಗಾಗಿ ಶ್ರಮಿಸುತ್ತ ಬರುತ್ತಿರು ವುದನ್ನು ನಾವು ನೋಡಬಹುದಾಗಿದೆ ಮರಾಧೀಶ್ವರರು ಗುರು ವಿರಕ್ತರಂಥ ಚೇಧಭಾವನೆಯನ್ನು ಬಡಿಗಿಟ್ಟು ಧರ್ಮಪ್ರಜಾರ ಮತ್ತು ವಿದ್ಯಾಪ್ರಸಾರಗಳಿಗಾಗಿ ಟೊಂಕ ಕಟ್ಟಿ ನಿಲ್ಲಬೇಕಾದುದು ಅವರ ಇಂದಿನ ಕರ್ತವ್ಯವಾಗಿದೆ ಹೀಗೆ ಪ್ರತಿಯೊಬ್ಬ ಮಠಾಧಿಪತಿಯೂ ಸಾಧ್ಯವಾದ ಮಟ್ಟಿಗೆ ಪ್ರಯತ್ನಿಸುವುದಾದರೆ ನಮ್ಮ ಸಮಾಜವು ವಿದ್ಯಾವೈಭವವನ್ನು ಹೊಂದಿ ಚಿರಕಾಲ ಸುಖಸಮೃದ್ಧಿ ಯಿಂದ ಬಾಳಬಲ್ಲುದು ಮಠಾಧೀಶ್ವರರಲ್ಲಿ ಗುರು ವಿರಕ್ತರೆಂಬ ಅನೈಕ್ಯತೆಯಭಾವನೆ ಒಡಮೂಡಿರುವು ದರಿಂದ ಅನೇಕ ಅನರ್ಥಗಳು ಸಂಭವಿಸಪತ್ತಿವೆ ಆದಕ್ಕಾಗಿಯೇ ಪ್ರಜಾಸರ್ಕಾರವು ಸುರಮಾಣ್ಯಗಳ ಸಂಬಂಧವಾಗಿ ಹೊಸಹೊಸ ಕಾನೂನುಗಳನ್ನು ಒಳಕೆ ಯಲ್ಲಿ ತರಹತ್ತಿದೆ ಮಹಾಧೀಶ್ವರರಲ್ಲಿ ಮುಖ್ಯರಾದವರೂ ವಿಶಾಲಸ್ವಭಾವವುಳ್ಳವರೂ, ವಿದ್ಯಾವಂತರೂ ಇತ್ತ ಗಮನಕೊಟ್ಟಲ್ಲಿ ಪ್ರಜಾಸರಕಾರದಿಂದ ಅನ್ಯಾಯವಾಗಲಿ ಕ್ಕಿಪ್ಪವೆಂದು ನಮಗೆ ಅನ್ನಿಸುತ್ತಿದೆ ಇನ್ನೂ ಅನೈಕ್ಯತೆಯ ಕಹಿ ಫಲವನ್ನೇ ತಿನ್ನುತ್ತಾ ಹೋದರೆ ಪ್ರಜಾ ಸರಕಾರವು ಮಠಮಾನ್ಯಗಳ ಮೇಲೆ ಆಘಾತಮಾಡಲು ಮುಂದಾಗು ವುದೆಂದು ಇಲ್ಲಿ ಸ್ಪಷ್ಟಪಡಿಸಿದೆ ಗತ್ಯಂತರವಿಲ್ಲ

ವಿಕೇಕ್ಯತೆ ವೀರಶೈವ ಸಮಾಜ

ವೀರಶೈವ ಸಮಾಜದಲ್ಲಿ ಅನೇಕಾನೇಕ ಒಡಕುಗಳು ಅವರವರ ಉದ್ಯೋಗ ಅಥವಾ ಇನ್ನು ಬೇರೆ ಕಾರಣ ಗಳಿಂದ ಬಂದಿದ್ದರೂ ಅವೆಲ್ಲವನ್ನೂ ರಕ್ತ ಸಂಬಂಧದ ಮಟ್ಟಿಗೆ ಇಟ್ಟುಕೊಂಡು ವೀರಶೈವ ಸಮಾಜ ಒಂದು ಎಂದು ಕಾರ್ಯತತ್ಪರರಾಗುವುದು ಒಳ್ಳೆಯದು ಹೀಗಾದರೇನೇ ವೀರಶೈವ ಸಮಾಜವು ಕಾಲಕಾಲಕ್ಕೂ ಬಾಲ ಬದುಕಬಲ್ಲುದು ಸ್ವಲ್ಪಕಸಾದ ಒಡಕುಗಳ ಹೆಚ್ಚುಗಾರಿಕೆಯನ್ನೇ ಮುಂದುಮಾಡಿ ನಮ್ಮ ನಮ್ಮ ವರನ್ನೇ ಹೀಯಾಳಿಸುತ್ತ ಹೋದಲ್ಲಿ ಈಗಿನ ಪ್ರಜಾ ರಾಜ್ಯದಲ್ಲಿ ನಮ್ಮ ಸಮಾಜವು ಖಂಡಿತವಾಗಿಯೂ ತಲೆಯೆತ್ತಿ ಬಾಳಲಾರದು ಬಹುಕಾಲದ ಹೋರಾಟ ದಿಂದ ಮೋರಿಯರು ಸ್ವಾತಂತ್ರ್ಯದಲ್ಲಿ ಇತರ ಸಮಾಜ ಗಳಿಗೆ ಯಾವ ಸ್ಥಾನಮಾನಗಳಿವೆಯೋ ಅವೇರೀತಿಯ ಸ್ಥಾನಮಾನಗಳು ನಮ್ಮ ವೀರಶೈವ ಸಮಾಜಕ್ಕೂ ಇವೆ ನಮ್ಮವರು ಸತ್ಯಾಗ್ರಹ ಸಮರದಲ್ಲಿ ದೇಶದ ಸ್ವಾತಂತ್ರ್ಯ ಕ್ಕಾಗಿ ಮಡಿದಿದ್ದಾರೆ ಕಾಂಗ್ರೆಸ್ಸಿನ ಇತಿಹಾಸದಲ್ಲಿ ನಮ್ಮ ದೇಶದ ವೀರ ಚರಿತ್ರೆಗಳು ಎಷ್ಟರಮಟ್ಟಿಗೆ ಬಂದಿವೆ ಯೆಂಬುದನ್ನು ಯಾರೂ ಕಣ್ಣಿರೆದು ನೋಡಿದಂತೆ ಕಾಣುವುದಿಲ್ಲ ಕೆಲವೊಮ್ಮೆ ಕಾಂಗ್ರೆಸ್ ಚಳುವಳಿಯಲ್ಲಿ ಅನ್ನೊಂದು ಅಷ್ಟಸಕ್ಕದ್ದು ಕೇಳಲ ಪರಿಗಣಿಸಿ ಮಾತ್ರ ವಲ್ಲ ಇದರೆ ವಿದೇಶನೆಯಷ್ಟು ಕೂಲಂಕಷವಾಗಿ ಮಾಡದಿರುವುದು ಕೋಚಕ್ಕೀಯವಾಗಿದೆ ಒಪ್ಪಿನೆಯೇಲೆ ನಮ್ಮ ಕಣ್ಣುಂದಿರುವ ಇತರ ಸಹೋದರ ಸಮಾಜ ಗಳಂತೆ ನಮ್ಮ ಸಮಾಜವೂ ಉನ್ನತಶಿಖರದಲ್ಲಿ ಮೆರೆಯು ವಂತಾಗಬೇಕು ಪ್ರತಿಯೊಬ್ಬರೂ ಈ ಶ್ರೇಯಸ್ಸಿಗಾಗಿ ಧಾರ್ಮಿಕದಲ್ಲಿಯೂ, ಸಾಮಾಜಿಕದಲ್ಲಿಯೂ, ರಾಜಕೀ ಯದಲ್ಲಿಯೂ ದುಡಿಯಬೇಕೆಂಬುದೇ ನಮ್ಮ ಬಲವಾದ ಆಶೆ ಶ್ರೀಶೈಲ ಜಗದ್ಗುರು ವೀರದಿಂದ ನಾವು ಹಾರೈಸು ತ್ತಿರುವುದು ಇದಿಷ್ಟನ್ನು ಮಾತ್ರ

ಉಪಸಂಹಾರ

ಪೂಜ್ಯರಾದ ಉಜ್ಜಯಿನೀ ಜಗದ್ಗುರು ಮಹಾಪಾದ ರಿಂದಲೂ, ರಂಭಾಪುರೀ ಜಗದ್ಗುರು ಮಹಾಪಾದ ರಿಂದಲೂ ಅನುಗ್ರಹೀತರಾದ ನೂತನ ಕಾಶೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರು ತಮ್ಮ ಗುರುಗಳಾದ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿ ಗಳವರ ಅಪೂರ್ಣಕಾರ್ಯಗಳನ್ನು ಪೂರ್ಣಗೊಳಿಸ ಲೆಂದೂ, ವಿಶ್ವಾವಿನಯ ಶಾಂತಿ ಸಮಾಧಾನಾದಿ ಸದ್ಗುಣಗಳಿಂದ ಸಕಲ ಜನ ಮಾನ್ಯರಾಗಿ ಬಾಳಲೆಂದೂ, ಶ್ರೀಜಗದ್ಗುರು ವಿಶ್ವಾರಾಧ್ಯ ವೀರವೃಷ ತನ್ಮೂಲಕ ಇತರ ವೀರಶೈವ, ವೀರಶೈವ ಸಮಾಜವೂ ಇವರಿಂದ ಉನ್ನತಿ ಹೊಂದುವಂತಾಗಲೆಂದೂ ಶ್ರೀಕರಣ ಪೂರ್ವಕವಾಗಿ ಬಯಸುವುದಲ್ಲದೆ ದಯಾನುಯನಾದ ನಿಶ್ವನಾಥನೂ, ಮಾತೇಶ್ವರಿಯಾದ ಅನ್ನಪೂರ್ಣಯೂ ನೂತನ ಜಗದ್ಗುರುಗಳವರಿಗೆ ದೀರ್ಘಾಯುರಾರೋಗ್ಯಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವೆವು ಉತ್ತಮ ಭಾಗಿಗಳಾಗಿರುವ ಎಲ್ಲರಿಗೂ ಆಯುರಾರೋಗ್ಯ ಸುಖ ಸಂಪದಭಿವೃದ್ಧಿಯಾಗಲೆಂದು ಆಶೀರ್ವದಿಸುವೆವು

॥ ಶುಭಂ ಭವತು ಶ್ರೀರಸ್ತು ಶಿವಮಸ್ತು ॥

'ವಿಶಂತೀ'

ವರ್ತಮಾನ ಸಂಗ್ರಹ

ಕೊರಿಯಾ ಯುದ್ಧರಂಗ

ಕೊರಿಯಾ ಕದನರಂಗದ ಪಶ್ಚಿಮ ಯುದ್ಧಮುಖ ದಲ್ಲಿ ಕಮ್ಯೂನಿಸ್ಟರ ಪ್ರತಿಭಟನೆ ಜೋರಾಗಿದೆಯೆಂದೂ ಅವರು ವಿಶ್ವಸಂಸ್ಥೆ ಪಡೆಗಳೊಡನೆ ಹೋರಾಟ ನಡೆಸುತ್ತಾ ೩೮ನೇ ರೇಖೆಯನ್ನು ಬಿಟ್ಟುಬಂದಿಲ್ಲವೆಂದು ವಾರ್ತೆ ತಿಳಿಸಿದೆ

ಕೊರಿಯಾದಲ್ಲಿ ಅಮೆರಿಕಕ್ಕೆ ೬೨,೭೯೯ ಸಾವುನೋವುಗಳು

ಕೊರಿಯಾ ಕದನದಲ್ಲಿ ಅಮೆರಿಕಕ್ಕೆ ೬೨,೭೯೯ ಸಾವುನೋವುಗಳಾಗಿವೆ ಈ ವಾರದಲ್ಲೇ ೧,೦೫೫ ಸಾವು ನೋವುಗಳಾಗಿವೆ

ಕೊರಿಯಾದಲ್ಲಿ ಬ್ರಿಟನ್ನಿಗೆ ೧೦೭೪ ಸಾವುನೋವುಗಳು

ಕೊರಿಯಾ ಕದನದಲ್ಲಿ ಬ್ರಿಟನ್ನಿಗೆ ಇತ್ತೀಚೆಗೆ ೧೦೭೪ ಸಾವುನೋವುಗಳಾಗಿವೆ ಇದರಲ್ಲಿ ೪೩ ಸಾವು ಗಳು ೨೫೩ ನೋವುಗಳು, ೭೦೩ ಮಂದಿ ಪತ್ತೆ ಇಲ್ಲದಾಗಿದ್ದಾರೆ

ಹಿಂದೂಸ್ಥಾನ ವಿಮಾನ ಕಾರ್ಖಾನೆ ವಿಸ್ತರಣ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯನ್ನು ೭೩ ಲಕ್ಷ ರೂ ಗಳ ವೆಚ್ಚದಲ್ಲಿ ವಿಸ್ತರಿಸಿ ಆ ಕಾರ್ಖಾನೆಯಲ್ಲಿ ಫೈಟರ್, ಬಾಂಬರ್ ನೊದಲಾದ ಎಲ್ಲ ತರಹ ವಿಮಾನಗಳನ್ನು ತಯಾರಿಸಿ ಲಾಗುವುದೆಂದೂ ಈ ಬಗ್ಗೆ ಸಲಹೆಸೀಡಲು ಮೂರು ಮಂದಿ ವಿದೇಶೀ ಪ್ರತಿನಿಧಿಗಳನ್ನು ನೇಮಿಸಲಾಗಿದೆ ಲಾಗುವುದೆಂದೂ ಸಚಿ ಬಲದೇವಸಿಂಗ್‌ರವರು ಕಳೆದವಾರ ಪಾರ್ಲಿಮೆಂಟಿನಲ್ಲಿ ತಿಳಿಸಿದರು

ಪಾದರಕ್ಷೆಗಳಲ್ಲಿ ೧೨೦ ತೊಲ ಚಿನ್ನ

ಭಾರತ ಪಾಕಿಸ್ತಾನ್ ಗಡಿಯಲ್ಲಿ ಸುಂಕದ ಕಾಖಯ ಗೂಢಚಾರರು ಪಾಕೇಸ್ತಾನದವನೊಬ್ಬನಿಂದ ೧೨೦ ತೊಲ ಚಿನ್ನವನ್ನು ವಶಪಡಿಸಿಕೊಂಡರು ಆತನು ಚಿನ್ನವನ್ನು ಬೂಟ್ಸುಗಳಲ್ಲಿ ಬಚ್ಚಿಟ್ಟು ಭಾರತಕ್ಕೆ ಸಾಗಿಸಲೇಬೇಕೆಂದಿದ್ದನು

ಭಾರತಕ್ಕೆ ರಾಜಪಿಪ್ಪಾ ಮಹಾರಾಜರವರ ಶವ

ರಾಜಪಿಪ್ಪಾ ಮಹಾರಾಜರ ಕಳೇಬರವನ್ನು ವಿಮಾನ ದಲ್ಲಿ ಭಾರತಕ್ಕೆ ತರಲಾಯಿತು ಅವರು ವಿಪ್ಲಿಲ್ ೨೧ನೇ ತಾರೀಖು ಲಂಡನ್‌ನಲ್ಲಿ ನಿಧನರಾದರು. ಅವರಿಗೆ ೫೧ ವರ್ಷ ವಯಸ್ಸಾಗಿತ್ತು

ಪಶ್ಚಿಮ ಪಾಕೇಸ್ತಾನದಲ್ಲಿ ಗಡಿಯಾರವನ್ನು ಒಂದು ಗಂಟೆ ಹಿಂದೆ ತಿರುಗಿಸಬೇಕು !

ಪಾಕಿಸ್ತಾನ ಸರ್ಕಾರದ ಎರಡು ಶಾಖೆಗಳಲ್ಲೂ ಚೀರೆ ಯಾದ ' ಸ್ಯಾಂಡರ್ಸ್ ಟೈಂ'ನ್ನು ನಿಗದಿ ಮಾಡಿಕೊಳ್ಳ ಬೇಕೆಂದು ನಿರ್ಧರಿಸಲ್ಪಟ್ಟಿವೆ ಫಲವಾಗಿ ೧೯೫೧ ನೇ ಅಕ್ಟೋಬರ್ ಒಂದರಿಂದ ಪಶ್ಚಿಮ ಪಾಕೇಸ್ತಾನದ ಗಡಿಯಾರವನ್ನು ' ಬ್ರಿಟಿಷ್ ಗ್ರೀನ್ ಟೈಂ ವಿಚ್'ಗಿಂತ ನಲುತ್ತಾವರೆ ಗಂಟೆ ಮುಂದೆ ಓಡಿಸಲಾಗುವುದು , ಪೂರ್ವ ಪಾಕೇಸ್ತಾನದ ಗಡಿಯಾರವನ್ನು ಗ್ರೀನ್ ವಾಚ್ ಕಾಲಕ್ಕೆಂತ ಆರು ಗಂಟೆ ಮುಂದೋಡಿಸಲಾಗುವುದು. ' ಹೀಗೆ ಮಾಡುವುದರಿಂದ ಪಶ್ಚಿಮ ಪಾಕೇಸ್ತಾನ ಗಡಿ ಯಾರವು ಇಂಡಿಯಾದ ಗಡಿಯಾರಕ್ಕಿಂತ ಒಂದು ಗಂಟೆ ಹಿಂದಿದ್ದಂತಾಗುವುದು, ಆದರೆ ಪೂರ್ವ ಪಾಕೇ ಸ್ತಾನದ ಗಡಿಯಾರವು ಅರ್ಧ ಗಂಟೆ ಮುಂದೋಡಿ ದಂತಾಗುವುದು

ಮೈಸೂರು-ಮದರಾಸ್ ಗಡಿಯಲ್ಲಿ ಚಿನ್ನ ದೊರಕುವುದು

ಕೋಲಾರದ ಚಿನ್ನದ ಗಣಿಯಿಂದಾಚೆ ಅಂದರೆ ಮೈಸೂರು ಗಡಿಯಿಂದ ೧೫ ಮೈಲಿ ಪೂರ್ವದಿಗೂ ಭೂಮಿ ಯಲ್ಲಿ ಚಿನ್ನದ ಅದುರುಗಳು ದೊರಕುವುದೆಂದು ಭಾರತ ಭೂಗರ್ಭ ಇಲಾಖೆಯ ಜಿಯಾಲಜಿಸ್ಟ್ ಶ್ರೀ ಎಸ್ ಕೃಷ್ಣಸ್ವಾಮಿಗಳವರು ತಿಳಿಸಿದ್ದಾರೆ ಕೆ ಜಿ ಎಫ್ ಗೆ ದಕ್ಷಿಣದಲ್ಲಿ ಯಶ್ರಕೊಂಡಾದಿಂದ ನರಳಪಲ್ಲಿಯವರೆವಿಗಿನ ಪ್ರದೇಶದಲ್ಲಿ ಚಿನ್ನದ ಅದುರು ದೊರೆಯುವುದೆಂದು ಅವರು ಅಭಿಪ್ರಾಯಪಿಪ್ರಿದ್ದಾರೆ

ಕಲ್ಕತ್ತಾದಲ್ಲಿ ಭಾರಿ ದರೋಡೆ

ಕಲ್ಕತ್ತೆಯ ಉತ್ತರದಲ್ಲಿರುವ ಉಪನಗರವಾದ ಬರಾನಾ ಗೂರಿನಲ್ಲಿ ಕಳೆದ ೪ನೇ ತಾ|| ಮಧ್ಯಾಹ್ನ ನಾಲ್ವರು ಯುವ ಕರು ಪಿಸ್ತೂಲುಗಳಿಂದ ರಸಾಯನಿಕ ವಸ್ತುಗಳ ಕಾರ್ಖಾ ನೆಯೊಂದರ ನೌಕರಿನಿ ಪೈ ವರನಿನ್ನು ಕೊಂದು ದರ್ವಾನನನ್ನು ಗಾಯಗೊಳಿಸಿ, ೧೧ ೦೦೦ ಸಾವಿರ ರೂ ಗಳೊಡನೆ ಅವೇ ನೌಕರಾದಿನಲ್ಲಿ ಸರಾರಿಯಾಗಿರು ವರು ಪೋಲೀಸರು ತಪಿಪೆಕ್ಕಮ ನಡೆಸುತ್ತಿರುವರು

ಸ್ವೀಕಾರ

ತರೀಕೆರೆ ನೇ|| ವಿರಕ್ತಾರಾಧ್ಯರವರ ಕುಟುಂಬ ಶ್ರೀಮತಿ ಕಾತ್ಯಾಯನಿ ಅವ್ವನವರಿಗೆ ಪುತ್ರರತ್ನ ಜನನ ವಾಗಿ ಜಗದ್ಗುರು ಏಕದ ನಾಮಕರಣದೊಂದಿಗೆ ಶಾಂತಿ ಕರ್ಮ ವನಗ್ರಹ ಪೂಜಾನಂತರದಿಯಾದ ಸಮಯ ದಲ್ಲಿ ಪ್ರಭಾ ಪೋಷಣಕ್ಕಾಗಿ ಸವ ಪಿಸಿದ 2 ರೂ ಗಳು ಶ್ರೀ ಎಮ್. ಆರ್. ವಿರಭದ್ರಯ್ಯ, ಬೀರೂರ ಇವರ ದ್ವಾರಾ ತಲ್ಪಿರುತ್ತವೆ

ಈ ಬೆಲ್ಯಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

[೧ನೇ ಪುಟದಿಂದ ಮುಂದುವರಿದುದು

ಈ ರಹಸ್ಯವನ್ನರಿಯದೆ ಸ್ಪೃಶ್ಯವಾದಿಯು ವೃಥಾ ಆಸ್ಪೃಶ್ಯ ಪ್ರಯಾಸಪಟ್ಟುಕೊಂಡಿರುವುದಕ್ಕಾಗಿ ವಿಷಾದವೆನಿಸುತ್ತದೆ. ಸ್ನಾನ, ಭೋಜನ, ಶಯನ, ಆಸನ, ವಿಹಾರಾದಿಗಳಲ್ಲಿ ಮನುಷ್ಯನಿಂದ ದಿನಾಲೂ ಜಂತುವಧೆಯಾಗುತ್ತಿದೆ. ದೀಕ್ಷೆಯಾದಮೇಲೂ ವೀರಶೈವನು ಲೋಕದಲ್ಲಿ ತಪ್ಪು ನಡೆದು ಪಾಪಿಯಾಗುವ ಸಂಭವವಿರುತ್ತದೆ ಮನಸ್ಸು ಹರಿದಾಡುವ ವರೆಗೆ ಪಾಪಸಂಪರ್ಕವು ತಪ್ಪಿದ್ದಲ್ಲ. ದೀಕ್ಷೆಹೊಂದಿದ ವೀರಶೈವರಲ್ಲಿ ಎಷ್ಟು ಜನರು ತಮ್ಮ ಮನಸ್ಸನ್ನು ಗೆದ್ದಿದ್ದಾರೆ? ಮನುಷ್ಯನು ಉಪಯೋಗಿಸುವ ನೀರು, ಕಟ್ಟಿಗೆ, ತರಕಾರಿ, ಧಾನ್ಯ ಮುಂತಾದ ಪದಾರ್ಥಗಳಲ್ಲಿ ನಿಶ್ಚಯವೂ ಪ್ರಾಣಿವಧೆಯಾಗುತ್ತಿದೆ. ಅಷ್ಟೇಕೆ ಉಸಿರಾಡಿಸುವಾಗಲೂ ಲೆಕ್ಕವಿಲ್ಲದಷ್ಟು ಸೂಕ್ಷ್ಮ ಕೀಟಗಳು ಹತವಾಗುತ್ತವೆ ಸಹಜವಾಗಿ ಜರುಗುವ ಈ ಬಾಹ್ಯ, ಮಾನಸಿಕ ಪಾಪಗಳ ನಿವೃತ್ತಿಗಾಗಿ ವೀರಶೈವನು "ಪ್ರಕೃಷ್ಟ ಪಾಪನಾಶಾಯ" ಎಂದು ತನ್ನ ಆರಾಧ್ಯ ದೈವದ ಪ್ರದಕ್ಷಿಣೆ ಮಾಡಿದರೆ ತಪ್ಪೇನು? ಶಿವೋಕ್ತ ವೇದಾಗಮವಿಧಿಯನ್ನು ಹೀಗೆ ನಿರಾಧಾರವಾಗಿ ಮನಬಂದಂತೆ ಆಕ್ಷೇಪಿಸಿ ಕುಹೋದ್ಯ ಮಾಡುವ ಈ ಸ್ಪೃಶ್ಯವಾದಿಯಂತಹವರು ಪಾಪಿಗಳಲ್ಲ ನೆಂದು ಹೇಗೆ ಹೇಳಲಾದೀತು!

ಭಕ್ತಿಯಿಂದ ಶಿವನಿಗರ್ಪಿಸಿದ ಬಿಲ್ವಪತ್ರೆದಲ್ಲಿ ಶ್ರೀಜನ್ಮ ಪಾಪಗಳನ್ನು ಸಂತರಿಸುವ ಸಾಮರ್ಥ್ಯವಿದೆ ಇದ್ದ ಸಾಮರ್ಥ್ಯವನ್ನೇ ' ಶ್ರೀಜನ್ಮಪಾಪಸಂಹಾರಂ " ಎಂದು ನೈಷ್ಕರ್ಷವಾಗಿ ಹೇಳಿ ಶಿವನಿಗೆ ಅರ್ಪಿಸಿದರೆ ಅನೌಚಿತ್ಯವೇನು ಬಂತು? " ದಧಿಕ್ರಾವ್ಣೋ.... " ಎಂಬ ದಧ್ಯಭಿಷೇಕದ ಮಂತ್ರವು ಕುದುರೆಗೆ ಸಂಬಂಧಿಸಿದ್ದಂತೆ ಆರಣ್ಯ ಪಂಡಿತನಾದ ಈ ಸ್ಪೃಶ್ಯವಾದಿಯ ಮಾತಿಗೆ ಎಷ್ಟು ನಕ್ಕರೂ ತೀರದಾಗಿದೆ ಇಂತಹ ಬುದ್ಧಿಶಕ್ತುಗಳ ಸಂಖ್ಯೆಯು ಹೆಚ್ಚಾಗುತ್ತಿರುವುದರಿಂದಲೇ ವೀರಶೈವರಲ್ಲಿ ದಿನೇ ದಿನೇ ನಾಸ್ತಿಕತೆಯು ಮೂಡುತ್ತಿರುವುದಕ್ಕೆ ಕಾರಣ! " ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ... ' ಎಂದೇ ಮಂತ್ರದ ಅಶ್ವ, ವಾಜಶಬ್ದಗಳಿಗೆ ವೇದಾರ್ಥದ ಗಂಧವನ್ನರಿಯದ ಸ್ಪೃಶ್ಯವಾದಿಯು ಕುದುರೆ ಎಂದೇ ಅರ್ಥಮಾಡಿಕೊಂಡಿದ್ದಾನೆ 'ಅಶ್ವಸ್ಯ' ಎಂದೊಡನೆ ' ಕುದುರೆಯ ' ಎಂದು ಅರ್ಥಮಾಡಿ ಆದರೆ ಮುಂದೆ ಪತ್ರೆ ಆದೀ ಅರ್ಥವನ್ನು ಕೊಡುವ ' ವಾಜಿನ ' ಎಂಬ ಪದವನ್ನು ಕಂಡು ಸ್ಪೃಶ್ಯವಾದಿಯ ತಲೆ ತಿರುಗಿಹೋಗಿರಬೇಕು. ಬುದ್ಧಿಯು ಮಸಣಿನಿಸಿರಬೇಕು. ಆದ್ದರಿಂದಲೇ ' ಅರ್ಥಹೊಳೆಯದ ಮಂತ್ರ ವೇಕೆ? ' ಎಂದು ಮೂದಲಿಸಿದ್ದಾನೆ. ಶ್ರಾದ್ಧವಿಧಿಗಳ ಪಾಠಶಾಲೆಯಲ್ಲಿ ಒಂದೆರಡು ಸಂಸ್ಕೃತದ ಪುಸ್ತಕಗಳನ್ನು ಓದಿರಬಹುದಾದ ಸ್ಪೃಶ್ಯವಾದಿಯಂತಹವರಿಗೆ ಈ ಮಂತ್ರದ ಅರ್ಥ ಹೊಳೆಯದಿರುವುದು ಸಹಜ! ಆದರೆ ಯಾರಿಗೂ ಹೊಳೆಯ ಬಹುದೆ? ದುರ್ದೈವದಿಂದ ತನಗೆ ಅರ್ಥ ಹೊಳೆಯದಿದ್ದ ಮಾತ್ರಕ್ಕೆ ಈ ಮಂತ್ರವೇಕೆ ಆ ಮಂತ್ರವೇಕೆ ಎಂದು ಕೂಗಿಬ್ಬು ಕುಣಿಯುವುದು ಎಷ್ಟು ಸೌಜನ್ಯ?

ವಾಸ್ತವದಲ್ಲಿ " ದಧಿಕ್ರಾವ್ಣೋ... " ಮಂತ್ರಕ್ಕೂ ಕುದುರೆಗೂ ಬಾದರಾಯಣ ಸಂಬಂಧವು ಕೂಡ ಇಲ್ಲ ಇತಿಹಾಸ, ವೃತ್ತಾಗಮಾದಿ ಉಪಬೃಂಹಣ ವಾಕ್ಯಗಳಿಂದಲೂ ನೇದಭಾಷ್ಯಗಳಿಂದಲೂ ಸಂಪ್ರದಾಯಸಿದ್ಧ ಸಮರ್ಥ ಆಚಾರ್ಯರಿಂದಲೂ ವೇದಾರ್ಥವನ್ನು ತಿಳಿದು ಕೊಳ್ಳಬೇಕಲ್ಲದೆ ಮನಬಂದಂತೆ ಅರ್ಥಮಾಡಿದಲ್ಲಿ ಪ್ರಯೋಜನವಿಲ್ಲ. " ಅಶ್ವಸ್ಯ- ವ್ಯಾಪಕಸ್ಯ ವಾಜಿನಃ= ವೇಗವತಃ (ಋಗ್ವೇದ ಭಾಷ್ಯ ೩, ೭, ೧೩) ಎಂದು ಅಶ್ವ, ವಾಜಿ ಶಬ್ದಗಳಿಗೆ ಸಾಯಣಾರ್ಯರು ಅರ್ಥ ಮಾಡಿದ್ದಾರೆ " ಆಕಾಶದಂತೆ ಸರ್ವತ್ರ ವ್ಯಾಪಕನೂ ವೇಗವತ್ತರನೂ ಸರ್ವೋತ್ಕೃಷ್ಟನೂ ಆದ ದೇವರನ್ನು ನಾನು ಸ್ತುತಿಸುತ್ತೇನೆ ಅವನು ನಮ್ಮನಮ್ಮ ಚಕ್ಷುರಾದಿ ಇಂದ್ರಿಯಗಳನ್ನು ಸದ್ವಸ್ತುವಿನಲ್ಲಿ ಪ್ರವರ್ತಿಸುವಂತೆ ಮಾಡಲಿ, ನಮ್ಮ ಆಯುಷ್ಯವನ್ನು ಅಭಿವೃದ್ಧಿಗೊಳಿಸಲಿ" ಎಂಬುದೇ ಈ ಮಂತ್ರದ ತಾತ್ಪರ್ಯ. " ಕುರ್ವನ್ನೇನೇ ಹಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ " ಎಂಬ ಈಶಾವಾಸ್ಯ ಶ್ರುತಿಯಂತೆ ಮನುಷ್ಯರು ತನ್ಮ ತಮ್ಮ ಸಂಪ್ರದಾಯಾನುಸಾರವಾಗಿ ಯಾವಜ್ಜೀವವೂ ಅಗ್ನಿ ಹೋತ್ರ, ಶಿವಪೂಜಾ, ಪರೋಪಕಾರಾದಿ ಸತ್ಕರ್ಮ ಗಳನ್ನು ಈಶಾರ್ಪಣ ಬುದ್ಧಿಯಿಂದ ಆಚರಿಸುತ್ತ ನೂರಾರು ವರ್ಷ ಬಾಳಲಿಚ್ಛಿಸಬೇಕಾದುದರಿಂದ ಆಯುಷ್ಯವನ್ನು ಬಯಸುವುದೇನೂ ಕೆಟ್ಟದಲ್ಲ. ಆದುದರಿಂದಲೇ ಎಷ್ಟೋ ಭಕ್ತಶಿರೋಮಣಿಗಳು ಮುಕ್ತಿಗಾಗಿ ಹಂಬಲಿಸುತ್ತಿರುವುದಿಲ್ಲ. " ಹೊಗೆನು ಕೈಲಾಸವ " " ನೀನೇಕೋ ನಿನ್ನ ಹಂಗೇಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೊ " " ಭವಭವದಲ್ಲಿ ನಿನ್ನ ಭಕ್ತಿಯನ್ನು ಕೊಡು" ಎಂದು ಶರಣರೂ ದಾಸರೂ ಹಾಡಿಕೊಂಡಿದ್ದು ಇದೇ ಅಭಿಪ್ರಾಯದಿಂದ. (ಸಶೇಷ)

ಒಂದೇ ಕೈಗೆ ಬಳೆ ತೊಟ್ಟುಕೊಂಡರು!

ಗುಜರಾತಿನಲ್ಲಿ ಧೀನಜ್ ಎಂಬ ಪಟ್ಟಣವುಂಟು. ಅಲ್ಲಿನ ಹೆಂಗಸೊಬ್ಬಳಿಗೆ ಕನಸಿನಲ್ಲಿ ದೇವತೆಯು ಊರಿನ ಹೆಂಗಸರೆಲ್ಲಾ ಇನ್ನು ಮುಂದೆ ಒಂದೇ ಕೈಗೆ ಬಳೆ ತೊಟ್ಟು ಕೊಳ್ಳಬೇಕೆಂದು ಹೇಳಿದಳಂತೆ. ಬೆಳಗಾಗುತ್ತಲೇ ಆಕೆ ಎಲ್ಲರಿಗೂ ತಿಳಿಸಿದಾಗ ಊರಿನ ಹೆಂಗಸರೆಲ್ಲಾ ದೇವತೆಗೆ ಎಲ್ಲಿ ಕೋಪಬರುವುದೋ ಎಂದು ಹೆದರಿ ಒಂದು ಕೈಗೆ ಮಾತ್ರ ಬಳೆ ತೊಟ್ಟುಕೊಳ್ಳುತ್ತಿದ್ದಾರೆಂಬ ವಿಚಿತ್ರ ಪ್ರಸಂಗ ಹೊರಬಿದ್ದಿದೆ.

ಸರ್ವೋತ್ಕೃಷ್ಟವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	.....	.....	೧ ಆಣೆ
ಸನ್ಯಾಸಾಶ್ರಮವಿಮರ್ಶ ೩ನೆಯ ಆವೃತ್ತಿ ಸಂಸ್ಕೃತ	.....	.....	೧ ಆಣೆ
ಪಂಚಮೀಕಲಿ ಪ್ರಕಟಕಾರ ೪ನೆಯ ಆವೃತ್ತಿ	.....	.....	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯರ ಕೀರ್ತನ	.....	.....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೧ನೆಯ ಆವೃತ್ತಿ	.....	.....	೨ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ)	.....	.....	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	.....	.....	೨ ಆಣೆ
ಋಷಿಪ್ರತಿಸಿಷ್ಟತರ್ಪಣ (೪ನೆಯ ಆವೃತ್ತಿ)	.....	.....	೨ ಆಣೆ
ಶ್ರೀರೇಣುಕಾಚಾರ್ಯರತಕ (೭ನೆಯ ಆವೃತ್ತಿ)	.....	.....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	.....	.....	೨ ಆಣೆ
ಶಿವಶಕ್ತಿವಿಲಾಸ	.....	.....	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	.....	.....	೨ ಆಣೆ
ಬಿಲ್ವಮಾಹಾತ್ಮ್ಯ (೭ನೆಯ ಆವೃತ್ತಿ)	.....	.....	೨ ಆಣೆ
ಪಂಚಾಚಾರ್ಯಪ್ರಕಾಶ	.....	.....	೩ ಆಣೆ
ಪಂಚಾಚಾರ ಪ್ರಕಾಶಿಕಾ	.....	.....	೩ ಆಣೆ
ಶ್ರೀಗುರುತತ್ತ್ವಸದಗಳು (೩ನೆಯ ಆವೃತ್ತಿ)	.....	.....	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	.....	.....	೪ ಆಣೆ
ಲಿಂಗಧಾರಣವಿಧಿ	.....	.....	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	.....	.....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	.....	.....	೪ ಆಣೆ
ಕೈವೋಪನಿಷತ್ಪ್ರಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ)	.....	.....	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	.....	.....	೪ ಆಣೆ
ವೈದಿಕಾಹ್ನಿಯರಹಸ್ಯ	.....	.....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	.....	.....	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	.....	.....	೬ ಆಣೆ
ಸಿದ್ಧಾಂತ ಶಿಖಾಮಣಿ (ಸೂಲಮಾತ್ರ, ಚಿತ್ರಸಹಿತ)	.....	.....	೪ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	.....	.....	೪ ಆಣೆ
ವೀರಶೈವಮತಾತ್ಪರ್ಯರು	.....	.....	೪ ಆಣೆ
ಒಸವಧ್ಯಾಂತದಿವಾಕರ (೩ನೆಯ ಆವೃತ್ತಿ)	.....	.....	೪ ಆಣೆ
ಆಗಮಪರಿಜ್ಞಾನ	.....	.....	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೪ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	.....	.....	೪ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	.....	.....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	.....	.....	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	.....	.....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	.....	.....	೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	.....	.....	೧ ರೂ.
ವಿನೇಕಮುಕ್ತಾವಳಿ	.....	.....	೧ ರೂ.
ವಿಚಾರಸಾರಾವಳಿ	.....	.....	೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಗಿದ್ದು, ೩ನೆಯ ಆವೃತ್ತಿ)			೧೫ ರೂ.
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	.....	.....	೨ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುವು)			೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟಿದೆ)	.....	.....	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	.....	.....	೨ ರೂ.
ಶಿವಾಗಮಸಂಗ್ರಹ (ಚಿಂತ್ಯಾಖ್ಯಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)			೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	.....	.....	೪ ರೂ.
A brief life-sketch of Pandit Sri Kashinatha Shastriji (*English*)			4 As.
The Philosophical Aspect of Virasaivism (*English*)	...		8 As.
Speeches by Pandit Shri Kashinatha Shastriji (*English*)			12 As.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	.....	.....	೩. ಕ.
ವೀರಶೈವರತ್ನ (ಮರಾಠಿ)	.....	.....	೨ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	.....	.....	೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ)	.....	.....	೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು

Edited, Printed and Published by Bruhanmath Mahadevaiah at Shri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶನಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮತಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ. ಸಂಪಾದಕರು— ನಾಗನೂರು ಬೃ॥ ಮಹಾದೇವಮ್ಮನವರು ೨ ಪಿ ಖರ್ಚು ಸೇರಿ ೩ ರೂ ೬ ಆಣೆ.

ಸಂಪುಟ ೨೫] ಸೋಮವಾರ ತಾ॥ ೧೪ ನೇ ಮೇ ೧೯೨೧ [ಸಂಚಿಕೆ ೧

ಶ್ರೀಜಗದ್ಗುರು ಪಂಚಾಚಾರ್ಯರ ಲಿಂಗಾವತಾರ

ಶ್ರೀಮದ್ರೇವಣಸಿದ್ಧಸ್ಯ ಕೊಲ್ಲಿಪಾಕಪುರೋತ್ತಮೇ ।
ಸೋಮೇಶಲಿಂಗಾಜ್ಜನನಮಾವಾಸಃ ಕದಳೀಪುರೇ ॥೧॥
ತದ್ವನ್ಮರುಲಸಿದ್ಧಸ್ಯ ಏಟಪಲ್ಲೇತ್ರೇ ಮಹತ್ತರೇ ।
ಸಿದ್ಧೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರೇ ॥೨॥
ದ್ರಾಕ್ಷಾರಾಮಾಖ್ಯಸುಕ್ಷೇತ್ರೇ ರಾಮನಾಥಾಖ್ಯಲಿಂಗತಃ ।
ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ ॥೩॥
ಸುಧಾಕುಂಡಾಖ್ಯಸುಕ್ಷೇತ್ರೇ ಮಲ್ಲಿಕಾರ್ಜುನಲಿಂಗತಃ ।
ಜನನಂ ಪಂಡಿತಾರ್ಯಸ್ಯ ನಿವಾಸಃ ಶ್ರೀಗಿರೌ ಶಿವೇ ॥೪॥
ಕಾಶ್ಯಾಂ ವಿಶ್ವೇಶಲಿಂಗಾಜ್ಜ ವಿಶ್ವಾರಾಧ್ಯಸ್ಯ ಸಂಭವಃ ।
ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ ॥೫॥
ಏತೇ ಯುಗಚತುಷ್ಕೇತು ಸಂಚಾರಾಧ್ಯಾ ಯಥಾವಿಧಿ ।
ಮನು ಲಿಂಗಮುಪೋದ್ಭೂತಾ ಯೋಕೆವಿಶ್ರುತಕೀರ್ತಯಃ॥೬॥

ಸಂದೇಶಗಳು

ಶ್ರೀಕಾಶೀಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಂದೇಶ

ಪಂಚಾಚಾರ್ಯ ಪ್ರಭೆಯ ೨೫ ವರ್ಷಗಳಿಂದ ಬಾಳಿಲಿ

ಶಾಲಿವಾಹನಶಕ ೧೮೭೩ ನೇ ಖರ ಸಂವತ್ಸರ ವೈಶಾಖ ಶು ಪಂಚಮಿ ತಿಥಿಗೆ "ಪಂಚಾಚಾರ್ಯ ಪ್ರಭಾ" ಪತ್ರಿಕೆಗೆ ೨೪ ವರ್ಷಗಳು ಪೂರ್ತಿಸಿ ೨೫ನೇ ವರ್ಷವು ಪ್ರಾರಂಭವಾಗುವ ವಿಷಯವು ಅರಿಕೆಯಾಗಿ ಅತ್ಯಂತ ಸಂತೋಷವಾಯಿತು. ಕಳೆದ ೨೪ ವರ್ಷಗಳ ದೀರ್ಘ ಅವಧಿಯಲ್ಲಿ ಅವಿಶ್ರಾಂತವಾಗಿ ಪ್ರಭೆಯಿಂದ ಜರುಗಿದ ತತ್ವಪ್ರಚಾರಕಾರ್ಯವು ಮಹತ್ತೋಮಹೀಯವಾಗಿದೆ. ವರ್ಣನಾತೀತವಾಗಿದೆ. ವೀರಶೈವರನ್ನು ಆತ್ಮವಿಶ್ವಾಸಿಯೆಂಬ ಕಾರ್ಯತ್ಪೆಲೆಯಿಂದ ಕೊಂಚಮಟ್ಟಿಗೆ ಅ॥ ಸ್ಮರಣಾಪಜ್ಞಾನವೆಂಬ ಬೆಳಕಿನೆಡೆಗೆ ಒಯ್ದು ನಿರ್ಮಲಕೀರ್ತಿಯು ಪ್ರಭೆಗೇ ಸಲ್ಲಬೇಕು. ಪಂಚಾಚಾರ್ಯ ಪ್ರಭೆಯ ರಜತೋತ್ಸವದ ಈ ಶುಭಸಂದರ್ಭದಲ್ಲಿ ನಾನೆ॥ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಮಧುರಸ್ಮೃತಿಯು ನಮ್ಮ ಅಂತಃಕರಣವನ್ನು ಆವರಿಸಿದೆ. ೨೫ ಉದಾತ್ತವರುಷವನ್ನು ತನ್ನ ಅಂತರಂಗದಲ್ಲಿ ಕಂಡ ಜಗದ್ಗುರು ಪಂಚಾಚಾರ್ಯರ ಪ್ರಭೆಯು ಒಂದಂಶಕ್ಕೆ ಬಹಿರಂಗದಲ್ಲಿ ಒಂದು ಪತ್ರಿಕಾರೂಪವನ್ನು ಕೊಟ್ಟಿದ್ದಾ ನೆನ್ನಬಹುದು.

ಸನಾತನ ವೇದಾಗಮಧರ್ಮವನ್ನು ಪ್ರತಿಪಾದಿಸುವಲ್ಲಿ ಪ್ರಭೆಯು ನಿರ್ದಾಕ್ಷಿಣ್ಯವಾಗಿ ಶಿತರ್ಮಾಡಿದೆ. ಇದಕ್ಕಾಗಿ ಸಕಲ ಹಿಂದುಗಳೂ ಅವರಲ್ಲಿ ವಿಶೇಷವಾಗಿ ವೀರಶೈವರೂ ಪ್ರಭೆಗೆ ಕೃತಜ್ಞರಾಗಿರಬೇಕಾಗಿದೆ.

ಪ್ರಭೆಯ ದೃಷ್ಟಿಯು ಇನ್ನೂ ಒಹು ದೂರದಲ್ಲಿದೆ. ಅದರ ಮಾರ್ಗವು ನಿಷ್ಕಂಟಕವಾಗಲಿ. ಇಲ್ಲಿಯವರೆಗಿನಂತೆ ಇನ್ನು ಮುಂದೆಯೂ ಪ್ರಭೆಯು ಪ್ರಭೆಯಿಂದಲೇ ಬಾಳಲಿ. ಪಂಚಾಚಾರ್ಯ ಪ್ರಭೆಯು ನಿರಂತರವಾಗಿ ಜನಜೀವನದ ಪ್ರಭೆಯಾಗಿರಲೆಂಬುದೇ ನಮ್ಮ ಹಾರೈಕೆಯಾಗಿದೆ.

ಅಜ್ಞಾನಾಂಧ ತಮೋಧ್ವಂಸಕರೀ ಸಚ್ಚಿನ್ಮುದಾಕರೀ।
ಶ್ರೀಪಂಚಜಗದಾಚಾರ್ಯಪ್ರಭಾ ಜಯಂತು ಸರ್ವದಾ॥

❁

ಶ್ರೀಶೈಲಜಗದ್ಗುರು ವಾಗೀಶಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಂದೇಶ

ಅಮೊಂದು ಕಾಲ, ಪರೋಕ್ಷಸರ್ವವನ್ನು ಸಹಿಸದ ಪರದೇಶಿಯವರಿಂದ ಒಡಮೂಡಿ ಬಂದುದು ನಮ್ಮ ನಮ್ಮವರೇ ತಮ್ಮ ತಮ್ಮ ಕಾಲುಗಳ ನೆಲೆ ಕಲ್ಲು ಹಾಕಿಕೊಂಡು ಬಾಧೆಪಡುತ್ತಿದ್ದರು ವೀರಶೈವಸಿದ್ಧಾಂತಜ್ಞಾನಸರೂರಂದ ಆ ಕಾಲದ ಕೆಲ ಪರಮಭೀರುಗಳು ಇದೇ ಒಳ್ಳೆಯ ಸಮಯವೆಂದು ಪರಮಸ್ಫೆದಿಕರಾದ ವೀರಶೈವರನ್ನು ಶೂದ್ರರೆಂದು ಸಾರಿ ಹಿಂದೂ ಲಾದಲ್ಲಿಯೂ ಒರೆಯಿಸಿಬಿಟ್ಟರು. ಶಿವಮಾನ್ಯವಾದ ನುಲ್ಲಪ್ಪನವರಂತಹ ದಮಗಾಭಿಮಾನಿಗಳು ವೀರಶೈವರ ಬ್ರಾಹ್ಮಣ್ಯವನ್ನೆ ನೆದಿಕತ್ವಗಳನ್ನು ಆಂಧವರಿಗೆ ತೋರಿಸಿಕೊಡಲು ವೀರಶೈವಧರ್ಮಗ್ರಂಥಗಳ ಪ್ರಕಟಣೆಗೆ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಬೇಕಾಯಿತು.

ನಿಜವಾದ ವೀರಶೈವಸಿದ್ಧಾಂತದ ಪ್ರಕಾಶಕ್ಕಾಗಿ ತಮ್ಮ ದೇಶ ಸರ್ವಸ್ವವನ್ನೇ ಧಾರೆಯೆರೆದ ಮಹನೀಯರಲ್ಲಿ ಶ್ರೀಪಂಚಾಚಾರ್ಯ ಪ್ರಭೂಪಂಸ್ಥೆಯ ಸಂಸ್ಥಾಪಕರಾದ ಪಂಡಿತವರ್ಯ ಶ್ರೀ ವೇ॥ ಕಾಶೀನಾಥಶಾಸ್ತ್ರಿಗಳವರು ಅಗ್ರಗಣ್ಯರು. ಅವರ ನೇತೃತ್ವದಲ್ಲಿ ಪ್ರಭೆಯು ವೀರಶೈವವೈದಿಕವಾಙ್ಮಯೀಸೇವೆಯನ್ನು ಅಪಾರವಾಗಿ ಮಾಡಿದೆ. ಅಖಂಡವಾಗಿ ೨೫ ವರ್ಷ ಸೇವೆ ಸಲ್ಲಿಸಿರುವ ಇದರ ರಜತಮಹೋತ್ಸವವನ್ನು ನೆರವೇರಿಸುವುದು ಅವಶ್ಯಕವಾಗಿದೆ. ದುಃಖದ ವಿಷಯವೆಂದರೆ ಇದರ ಸಂಸ್ಥಾಪಕರು ಕಣ್ಣಿರೆಯಾಗಿರುವುದು. ಆದರೂ ಕೈಲಾಸವಾಸಿ ಪಂಡಿತರ ಕೀರ್ತಿಕಾಯವು ಅವರ ಭೌತಕಾರ್ಯಗಳಿಂದ ಅಮರವಾಗಿರುವುದರಿಂದ ಅವರು ಇರುವರೆಂತಲೇ ಭಾವಿಸಿ ಪ್ರಭೆಯ ರಜತಮಹೋತ್ಸವವನ್ನು ನಾವೆಲ್ಲರೂ ನೆರವೇರಿಸೋಣ! ಪಂಡಿತರ ಶಾಶ್ವತ ಸ್ಮಾರಕಕ್ಕಾಗಿ ಅವರು ಪ್ರಜಾಹಿತಕ್ಕಾಗಿ ಆಕೀರ್ಣವಾದಿಸಿ ಹೋಗಿರುವ ಪ್ರಭಾಸಂಸ್ಥೆಯ ಉನ್ನತಿಗಾಗಿ ಮನಃಪೂರ್ವಕವಾಗಿ ಯತ್ನಿಸೋಣ!

●

ಶ್ರೀಕೇದಾರನಾಥ ಭಾವಿಜಗದ್ಗುರು ಸಂ॥ ವಿಶ್ವನಾಥಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಂದೇಶ

ಯಾವ ಮಹಾತ್ಮನು ಶ್ರೀಜಗದ್ಗುರು ಪಂಚಾಚಾರ್ಯರ ಪ್ರಭೆಯನ್ನು ಸಮಸ್ತ ವೀರಶೈವ ಮತೀಯರಿಗೆ ಪ್ರಕಾಶಗೊಳಿಸಿದನೋ, ಯಾವ ಮಹಾತ್ಮನಿಂದ ವೀರಶೈವ ಮತತತ್ವಗಳು ನಾನಾ ಭಾಷೆಗಳಲ್ಲಿ ಪ್ರಕಟವಾಗಿ ಹಬ್ಬಿಸಲ್ಪಟ್ಟವೋ ಅಂಥ ಮಹಾತ್ಮ ಪೂ॥ ಶ್ರೀಕಾಶೀನಾಥಶಾಸ್ತ್ರಿಗಳಿಂದ ಸ್ಥಾಪಿಸಲ್ಪಟ್ಟ "ಪಂಚಾಚಾರ್ಯ ಪ್ರಭಾ" ಪತ್ರಿಕೆಯು ಇದುವರೆಗೂ ನಿರ್ವಿಘ್ನವಾಗಿ ಧರ್ಮಸೇವೆಯನ್ನು ಮಾಡುತ್ತ ಇಪ್ಪತ್ತುನಾಲ್ಕು ವರ್ಷಗಳನ್ನು ಪೂರೈಸಿ ಸದ್ಯ ೨೫ ಶು. ಪಂಚಮಿ ನುತಿಗೆ ತನ್ನ ಇಪ್ಪತ್ತೈದನೆಯ ವರ್ಷದಲ್ಲಿ ಅಡಿಇಟ್ಟು ರಜತಮಹೋತ್ಸವದ ಆನಂದಸುಧಾರಸವನ್ನು ಅನುಭವಿಸುತ್ತಿರುವದು ಬಹಳ ಸಂತೋಷ. ಇನ್ನು ಮುಂದೆಯಾದರೂ ಇದೇ ರೀತಿ ಧರ್ಮಸೇವೆಯನ್ನು ಮಾಡುತ್ತಾ ರಜತೋತ್ಸವದ ಸುಧಾರಸಪಾನದಿಂದ ಮಕ್ಕಳಾಗಿ ಆಚಂದ್ರಾರ್ಕಪರಿಯಂತ ಜಗದ್ವಿಖ್ಯಾತವಾಗಿ ಸಕಲ ವೈಭವಗಳಿಂದ ನೆಲೆದು ಬಾಳಲು ಶ್ರೀ ಶ್ರೀ ೧೦೦೮ ಜಗದ್ಗುರು ಎಕೋರಾಮೇಶ್ವರರು ಚಿರಜೀವತ್ವವನ್ನು ದಯಪಾಲಿಸಲೆಂದು ಆಶಿಸಲಾಗಿದೆ.

❁

ಕಲಬುರ್ಗಿ ಚಾವಾಪುರಿ ಹಿರೇಮಠದ ಶ್ರೀ॥ ಷ॥ ಬ್ರ॥ ಕಾಂತವೀರತಿನಾಚಾರ್ಯಸ್ವಾಮಿಗಳು

ವೇ॥ ಪಂ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಸ್ಥಾಪಿತವಾದ ಪಂಚಾಚಾರ್ಯ ಪ್ರಭಾ ಪತ್ರಿಕೆಯು ಈಗ ೨೪ ವರ್ಷಗಳ ವರೆಗೆ ಅವಿಚ್ಛಾಂತವಾಗಿ ಮುಡಿದು ವೀರಶೈವ ಧರ್ಮದ ನಿಜತತ್ವವನ್ನು ಪ್ರಕಾಶಗೊಳಿಸಿ ನವಚೈತನ್ಯವನ್ನುಂಟು ಮಾಡಿದ್ದಕ್ಕೆ ಪಂಡಿತರ ಅತ್ಯಬಲ, ವಿದ್ವತ್ತು, ಧೈರ್ಯ, ಸಾಹಸ, ಬ್ರಹ್ಮಚರ್ಯ ನಿಷ್ಠೆಗಳೇ ಕಾರಣಗಳಾಗಿವೆ. ಇಂಥ ಮಹಾಪುರುಷನು ಇನ್ನೂ ಕೆಲವುಕಾಲವಿರಬಹುದಾಗಿತ್ತು. ಆದಲ್ಲಾ ಈಶ್ವರೇ ನಂಕಲ್ಪ. ಅವರ ತರುವಾಯ ಅವರ ಸಹೋದರರಾದ ಬ್ರ॥ ಮಹಾದೇವಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರಡುತ್ತಿರುವ ಪಂಚಾಚಾರ್ಯ ಪ್ರಭಾ ಪತ್ರಿಕೆಯು ರಸಭರಿತ ಫಲಗಳನ್ನೂ ಕೊಡಹತ್ತಿದೆ. ಪ್ರಭೆಯಲ್ಲಿ ಧಾರ್ಮಿಕ ರಹಸ್ಯಗಳೂ ಅಲ್ಲಲ್ಲಿ ನಡೆದ ಹೊಸ ವಿಷಯಗಳೂ ರಾಜಕೀಯ ವಿಚಾರಗಳೂ ವರ್ತಮಾನಸಂಗ್ರಹಗಳೂ ಜನರಿಗೆ ತಿಳಿಯುವಂತೆ ಪ್ರಕಟಿಸಲ್ಪಟ್ಟು ಹೊರಡುತ್ತಿರುವದನ್ನು ನೋಡಿ ಮಹದಾನಂದವನ್ನೆನಿಸಿದ್ದಲ್ಲದೆ ಇದೇ ವೈಶಾಖ ಶು॥ ೫ ಮಿತಿಗೆ ನಡೆಯಲಿರುವ ರಜತೋತ್ಸವವನ್ನು ಕಳಿ ಆನಂದವು ಮತ್ತಿಷ್ಟು ಉಬ್ಬೇರಹತ್ತಿದೆ. ಸಂಪಾದಕರಾದ ವೇ॥ ಬ್ರ॥ ಮಹಾದೇವಶಾಸ್ತ್ರಿಗಳು ಇದೇ ಪ್ರಕಾರ ಕರ್ತವ್ಯ ನಿಷ್ಠರಾಗಿ ಧರ್ಮದಿಂದ ಪತ್ರಿಕೆಯನ್ನು ಹೊರಡಿಸುತ್ತ ಹೋದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಆಶೀರ್ವಾದದಿಂದ ಪತ್ರಿಕೆಯು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ನೀವು ನಡೆಸುವ ರಜತೋತ್ಸವದ ಕಾರ್ಯವು ನಿರ್ವಿಘ್ನವಾಗಿ ನಡೆದು ನಿಮ್ಮ ಪತ್ರಿಕೆಯು ಇನ್ನು ಮುಂದೆ ದಿಗ್ವಿಜಯ ಪಡೆದು ಸಪಲಿ ಬಾಳಲೆಂದು ಹೃತ್ಪೂರ್ವಕವಾಗಿ ಹರಸುತ್ತೇನೆ.

ಕಂದ ಪ್ರಭೆಪಡು ಪಂಚಾಚಾರ್ಯ ಪ್ರಭೆಯಿಂದತಿ।
ಶುಭವತ್ಸರವಾಂತುಮೆರೆವ ರಜತೋತ್ಸವದಂ॥
ವಿಭವವನಡೆಸುವರೆಲ್ಲಾ।
ವಿಬುಧರು ನೆರೆನೆರೆದು ಬಹಳ ಸಂಭ್ರಮದಿಂದ ॥೧॥

ಇಂದಿನ ಬೆಳ್ಳಿಯ ಹುಬ್ಬಕೆ।
ಬಂದಿಹ ಪ್ರಭೆ ಮುಂದೆನಡೆವ ವಜ್ರೋತ್ಸವಕೆ॥
ಚಂದದಿಒರೆಂದಾಶಿಸಿ।
ಕಂವರನಂ ಭಜಿಸುತ್ತ ಜಯವಬಯಸುವೆನೀಗ ॥೨॥

ವರಗುಣಿ ಮಹಾದೇವಾಖ್ಯರ।
ಕರದಿಂ ಸಚ್ಚಿಯೆ- ಕಲೆಯುಂ ಬೆಳೆಯುತಿಬಂದೀ॥
ಧರೆಯೋಳ್ಪಂಚಾಚಾರ್ಯರ।
ಗುರುಚರಿತೆಯುಂ ಸೊಗಸಿನಿಂದೆ ರಾಜಿಸುತಿರಲಿ ॥೩॥

❁

ಕಂದ॥ ಪಂಚಾಚಾರ್ಯ ಪ್ರಭೆಯಂ।
ಸಂಚಿಸಿ ಸಸ್ಯಾಗ ವನ್ನು ತೋರುವ ಪ್ರಬೆಯಂ॥
ಪಂಚಾನನ ಪರಮೇಶಂ।
ಪಂಚಮಿಯಾಚಾರ್ಯಗೊಲಿದು ಪಾಲಿಸೆ ಪದಪಿಂ ॥೧॥

ಇಂದು ಪಂಚಾಚಾರ್ಯ ಪ್ರಭಾಪತ್ರಿಕೆಗೆ ೨೪ ವರುಷಗಳು ಪೂರ್ತಿ ಸಂದಿವೆ. ಶ್ರೀ ಪಂಚಜಗದ್ಗುರುಗಳವರ ಅಪರಾವತಾರವೆನ್ನಿಸಿ ಲೋಕಪೂಜ್ಯರಾಗಿ ಮೆರೆದ ಪೂ॥ ಕಾಶೀನಾಥಶಾಸ್ತ್ರಿಗಳವರ ಅಮೋಘ ಕರ್ತೃತ್ವಶಕ್ತಿಯಿಂದ ಜನ್ಮಿಸಿ ಅಜೀರಾತ್ರಿ ವಿರಾಮವಿಲ್ಲದೆ ಹೋರಾಡಿ ಊರೂರೂ ಮೀರಿ ಸ್ವಕರ್ತವ್ಯನಿಷ್ಠೆಯಿಂದ ಜಗತ್ಪ್ರಸಿದ್ಧವೇ ಬೆರಗುಗೊಳಿಸಿ ಜಗದುಪಕಾರಿಯಾದ ಪ್ರಭಾವಜಾತಿಯು ತುಂಬ ಯಶಸ್ವಿನಿಯೆಂದು ಎಲ್ಲೆಲ್ಲಿಯೂ ಕೀರ್ತಿವೆತ್ತಿದ್ದಾಳೆ. ಅವಳ ಅಮರ ಮನೋಹರ ಮೃದುಮಧುರ ವಾಣಿಯಿಂದ ಧನ್ಯರಾಗುತ್ತಿರುವ ನಾವು ನಿಜವಾಗಿಯೂ ಭಾಗ್ಯಶಾಲಿಗಳಲ್ಲವೇ!

ಸದ್ಯ: ಮಹಾದೇವನ ದಿವ್ಯನಾಮಿಗಳ ಅತುಲ ಸಾಹಸದ ಸಂಪಾದಕತ್ವ ಮೂಲಕ ಇಮ್ಮಡಿಮುಮ್ಮಡಿಯಾಗಿ ಅಕೆಯ ಪ್ರಭೆಯು ಪ್ರಥಮಸ್ಫುರಿತ ಪೆಚ್ಚೆ ಪ್ರನಪಿಸುತ್ತಿದೆ ಪಸರುತ್ತಿದೆ. ಅಜ್ಞಾನಾಂಧಕಾರದಲ್ಲಿ ಬಳಲುವವರನ್ನು ಕೈಪಿಡಿಯುಸುಜ್ಞಾನವನ್ನಿತ್ತು ಪಾವನಗೊಳಿಸುತ್ತಿದೆ. ಕೋಪತಾಪಸಂಗಳಿಗೆ ತತ್ತರಿಸದೆ ತಾಪಸಿಯಂತೆ ಹಿಗ್ಗುಕುಗ್ಗಿಗಳಿಗೆ ಬಗ್ಗದೆ ತನ್ನ ಚರಮಗುರಿಯನ್ನು ಸಾಧಿಸುತ್ತಿದೆ. ಇಂತು ಇತೋಧ್ಯತಿಶಯವಾಗಿ ಪಂಚಾಸ್ಯನ ಪವಿತ್ರ ಸಿದ್ಧಾಂತವನ್ನು ಬಿತ್ತಿ ಬೆಳೆಯುವಿದೆ ಪಂಚಾಚಾರ್ಯರ ಯಶಃಪ್ರಭೆಯನ್ನು ಪ್ರತ್ಯಕ್ಷವಾಗಿ ಪ್ರಕಾಶಗೊಳಿಸುತ್ತ ಪ್ರಪಂಚೋಪಕಾರಿಯಾಗಿ ಪ್ರಭೆಯು ಪ್ರಕಾಶಿಸಲಿ! ಮಾನ್ಯ ಸಂಪಾದಕರವರ್ಯ ಶ್ರೀವರ್ಯ ಸರ್ವಾಗಿವಾಗಲಿ!! ಶ್ರೀಮತ್ಪಾರ್ವತೀಪರಮೇಶ್ವರರು ಪ್ರಸನ್ನರಾಗಲಿ!!! ಹರಗುರುಭಕ್ತರು ಹರಸಲಿ!!!! ಜಗವು ಸುಖಿಸಲಿ!!!!

ಗಂಗಾಧರಶಿವಾಚಾರ್ಯ, ಜಡಿಮಠ ಮೊರಬ

ರಜತಮಹೋತ್ಸವದ ಸಮಯಪಲ್ಲಿ ಮೈಸೂರು ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರಿ ಗಳವರು ಕಳುಹಿಸಿದ ಸಂದೇಶ—

ಮಹಸ್ತೀಯರೇ, ಶ್ರೀಪಂಚಾಚಾರ್ಯ ಮುದ್ರಣಾಲಯದ ಇಪ್ಪತ್ತೈದನೆಯ ವಾರ್ಷಿಕದ **ರಜತಮಹೋತ್ಸವದ** ಸುಸಮಯದಲ್ಲಿ ಇದರ ಪ್ರಸ್ತುತಮ ಸ್ಥಾಪಕರಾಗಿ ದಿವಂಗತರಾಕ ಕೀರ್ತಿಶೇಷರಿಸಿರುವ ಪಂಡಿತ ಶ್ರೀ ಕಾಶೀನಾಥಧರಾಶಾಸ್ತ್ರಿಗಳವರ ವಿಷಯವಾಗಿ ಕೆಲವು ಮಾತು ಗಳನ್ನಾಡುವುದಕ್ಕಾಗಲಿ, ಹಲವು ಪುಟಿಗಳ ಲೇಖನವನ್ನು ಒರೆಯುವುದಕ್ಕಾಗಲಿ ಹೆಚ್ಚು ಶ್ರಮವಾಗಲಾರದು ಅವರ ವೈಕ್ತಿಕ್ಕ ಬಹು ದೊಡ್ಡದು ಆಗಾಧವಾದ ಪಾಂಡಿತ್ಯದ ಜೊತೆಗೆ ಸೌಜನ್ಯ ಸೌಶೀಲ್ಯಾದಿಗಳು ಸೇರಿ ಅವರ ಪ್ರತಿಭೆಯನ್ನು ಜಗದ್ವಿಖ್ಯಾತವನ್ನಾಗಿ ಮಾಡಿದ್ದುವು ಆನಾದಿಯಾಗಿ ಕಂಡುಬರುತ್ತಿರುವ ಈ ಪ್ರಪಂಚದಲ್ಲಿ ಪ್ರತಿದಿನವೂ ಕೋಟ್ಯಂತರ ಪ್ರಾಣಿಗಳು ಜನಿಸಿ ಲಯವನ್ನೂ ಪಡೆಯುತ್ತಿರುವುವು ಇಂತಹ ಜನನಮರಣರೂಪ ಕಾರ್ಯವು ಮಾನವವರ್ಗದಲ್ಲಿದ್ದರೂ ಅನೇಕ ಮಹಾಪುರುಷರು ತಮ್ಮ ಅದ್ಭುತ ಶಕ್ತಿಸಾಮರ್ಥ್ಯಗಳಿಂದ ಕೀರ್ತಿಕಾಯರಾಗಿ ಬಹುಕಾಲ ಪ್ರಪಂಚದಲ್ಲಿ ಜನತೆಗೆ ಸ್ಫೂರ್ತಿಯನ್ನೆರೆಸಿರಿಯರು "ಶತೇಷು ಜಾಯತೇ ಶೂರಃ। ಸಹಸ್ರೇಷು ಚ ಪಂಡಿತಃ। ವಕ್ತಾ ದಶಸಹಸ್ರೇಷು ದಾತಾ ಭವತಿ ವಾ ನವಾ" ಎಂಬ ಒಂದು ಸುಭಾಷಿತದಂತೆ ನೂರಿರಲ್ಲಿ ಒಬ್ಬ ಶೂರನೆನಿಸಿದರೆ ಸಾವಿರಕ್ಕೆ ಒಬ್ಬ ಪಂಡಿತನಾಗುವನು, ಪಂಡಿತರೆಲ್ಲರೂ ಜೋಧ್ಧರಂಗಳಾರರು ಹತ್ತುಸಾವಿರ ಪಂಡಿತರಲ್ಲಿ ಎಲ್ಲೋ ಒಬ್ಬನಿಗೆ ಮಾತ್ರ ವಕ್ತೃತ್ವಶಕ್ತಿ ಲಭಿಸುವುದು ಸಿಸ್ವಾರ್ಥಭಾವನೆಯಿಂದ ದಾನಮಾಡುವವನು ಪ್ರಪಂಚದಲ್ಲಿ ದೊರೆತುಬಾರ ಕಷ್ಟ ಇಂತಹ ಸುಭಾಷಿತಗಳು ಜನಜೀವನದಲ್ಲಿ ಬಹುವಾಡುವ ಒಂದು ಅನುಭವದ ಮಾತು ಗಳಾಗಿವೆ ಪಂಡಿತ ಕಾಶೀನಾಥಶಾಸ್ತ್ರಿಗಳು ಈ ಶ್ಲೋಕಕ್ಕೆ ಒಂದು ದೃಷ್ಟಾಂತರೂಪದಲ್ಲಿರುವರು ಅವರ ಪಾಂಡಿತ್ಯದ ಬಗ್ಗೆ ಆ ಸಾಮಾನ್ಯರಿಗೆ ತಿಳಿದಿರಲಾರದು ತಿಳಿಯಲು ಸಾಧ್ಯವೂ ಇಲ್ಲ ವೀರಶೈವ ಮತದ ಶಕ್ತ್ಯೈಗಳನ್ನು ಶೋಧಿಸಿ ಆದರಲ್ಲಿರುವ ಸಾಧಕಬಾಧಕಗಳನ್ನು ನಿರ್ಣಯಿಸಿಯೆಂದ ವಿವರಿಸಿ, ಆಧ್ಯಾಪಕರಿ ಹಿಡಿದು ಧರ್ಮಬಾಹಿರರೆನಿಸಿರುವ ಕೆಲವು ವ್ಯಕ್ತಿಗಳನ್ನು ಖಂಡಿಸಿ ಮಾತನಾಡುವ ಸಾಮರ್ಥ್ಯ, ಸಾಮ ನೋಡಿದ್ದರಲ್ಲಿ ಶ್ರೀಕಾಶೀನಾಥಶಾಸ್ತ್ರಿಗಳಗಲ್ಲದ ಮತ್ತಾರಿಗೂ ಬರ ಲಾರದು ವೈಸೂರು ಶ್ರೀಮನ್ಮಹಾರಾಜರರು "ಜಯಚಾಮರಾಜೇಂದ್ರ ಗ್ರಂಥಮಾಲಾ" ಎಂಬ ಶಿರೋನಾಮೆಯಿಂದ ಆಚ್ಚು ಹಾಕಿಸಿದ 'ಶ್ರೀಶಿವರಹಸ್ಯ' ಎಂಬ ಗ್ರಂಥವನ್ನು ಮೊಟ್ಟಮೊದಲಿಲು ಪೂರ್ಣವಾಗಿ ಓದಿ ಅದರಲ್ಲಿ ಆಡಿಮುತ್ತುಗಳಂತಿರುವ ವೈವಧರ್ಮ ಪ್ರತಿಪಾದಕಗಳಾದ ವಚನಗಳನ್ನು ಉದ್ಧರಿಸಿದ ಶ್ರೀಕಾಶೀನಾಥಶಾಸ್ತ್ರಿಗಳವರ ಪ್ರಖರಿಗೆ ನಾನು ಅನೇಕ ವೇಳೆ ಅಶ್ಚರ್ಯಚಕ್ಕಿರುವೆನು ವೀರಶೈವ ಮತದ ಧಾರ್ಮಿಕ ಗ್ರಂಥಗಳನ್ನು ಓಹಳ ಸಾಹಸದಿಂದ ಪ್ರಕಾಶಕ್ಕೆ ತಂದವರೆಂದರೆ ಶ್ರೀ ಶಾಸ್ತ್ರಿಗಳೇ ಅವರಿಗೆ ಈಗ ವೀರಶೈವ ಜನಾಂಗವೇ ಕೃತಜ್ಞತೆಯನ್ನು ಅರ್ಪಿಸ ಬೇಕಾಗಿದೆ ಗ್ರಂಥದಲಲ್ಲಾಗಲಿ, ಭಾವಚಿಗಳಲ್ಲಾಗಲಿ, ಲೇಖನಗಳಲ್ಲಾಗಲಿ ಶ್ರೀ ಕಾಶೀನಾಥಶಾಸ್ತ್ರಿಗಳು ತೋಧ ನೆಗೆ ಸೊರಬರೆಂದರೆ, ವ್ಯಕ್ತಿಗಳ ಜಾತಿ, ಭೇದ, ವಯಸ್ಸು ಇವುಗಳನ್ನಾವುದನ್ನೂ ಗಮನಿಸದ ನಿಷ್ಕೃಷ್ಟ ಪಾತವಾಗಿ ಸ್ಪಾಧಿಪ್ರಾಯವನ್ನು ದಹರಿಸುತ್ತಿದ್ದರು ಒಂದೊಂದು ವೇಳೆ ಅವರು ಕೆಲವು ದೇವತಾಸ್ತೋತ್ರ ಗಳನ್ನು ಸ್ವಯಂ ಕಲ್ಪಿಸಿ ನನ್ನೊಡನೆ ಸರಸವಾಗಿ ಮಾತನಾಡುತ್ತಾ, ಅವರಿದೇ ಆದ ಒಂದು ರಾಗಚ್ಚಾಯೆಯಿಂದ ಹಾಡಿದಾಗ, ನಾನು ಈ ಸ್ತೋತ್ರಗಳು ಕಾಳಿದಾಸನಂತಹ ಮಹಾಕವಿಯೊಬ್ಬನಿಂದ ರಚಿತವಾಗಿರಬೇಕು ಎಂಬ ಸಂಶಯಪಡುತ್ತಿದ್ದೆನು ನಿಜಾಂಶವನ್ನರಿತ ಮೇಲೆ ಶಾಸ್ತ್ರಿಗಳು ಎಂತಹ ಕವಿಗಳು, ಇವರಿಂದ ಮತ್ತಾವುದಾದರೂ ಸಾಹಿತ್ಯ ಗ್ರಂಥಗಳು ಜನತೆಗೆ ದೊರೆಯಬಾರದೇ ಎನ್ನಿಸುತ್ತಿದ್ದಿತು. ಆದರಲಿ ಅವರ ಲ್ಲಿದ್ದ ಒಂದು ತ್ಯಾಗಮಯಿತ್ವ ಅಥವಾ ನಿರಾಡಂಬರದ ಜೀವನದ ವಿಷಯವಾಗಿ ಒಂದು ಸಣ್ಣ ಪ್ರಸಂಗ ನೋಡಿಸ್ಸು ಇಲ್ಲಿ ಹೇಳುವೆನು ಒಮ್ಮೆ ಅರಮನೆಯ ಉನ್ನತಾಧಿಕಾರಿಗಳೊಬ್ಬರು ಶ್ರೀ ಶಾಸ್ತ್ರಿಗಳವರನ್ನು ಕರೆಸಿಕೊಂಡು "ಶಾಸ್ತ್ರಿಗಳೇ, ತಾವು ಬಹು ದೊಡ್ಡ ಪಂಡಿತರು ಅನೇಕ ಧರ್ಮಾಕ ಗ್ರಂಥಗಳನ್ನು ಒಲಿದಿದ್ದೀರಿ ನಿಮಗೆ ರಾಜಾಸ್ಥಾನದಲ್ಲಿ "ಮಹಾವಿದ್ವಾನ್" ಎಂಬ ಪದವಿಯನ್ನು ಕೊಟ್ಟು ಗೌರವಿಸಬೇಕೆಂಬ ಆಸೆ ನಮಗಿದೆ ಅದನ್ನು ನೀವು ಸ್ವೀಕರಿಸಬೇಕು" ಎಂದು ಕೇಳಿದಾಗ, ಶ್ರೀ ಶಾಸ್ತ್ರಿಗಳು ಒಹು ವಿನಯದಿಂದ "ಸ್ವಾಮಿ, ಲೋಕದಲ್ಲಿ ಇನಗಿಂತಲೂ ಹೆಚ್ಚಿನ ವಿದ್ವಾಂಸರಿರಬಹುದು ಈ ಬಹುಮಾನವನ್ನು ಮತ್ತಾರಿಗಾದರೂ ಕೊಡಿ. ನನ್ನ ಪಾಂಡಿತ್ಯದಿಂದ ಉಸ್ಸರಿನು ಪ್ರಪ್ರಯೋಜನವಾದರೆ ಸಾಕು ಇತರರ ಹೊಗಳಿಕೆ ನನಗೆ ಬೇಡ ಇದೇ ಪದವಿಯನ್ನು ಮತ್ತಾರಾದರೂ ಕೊಟ್ಟರೆ ಅವರು ಹೆಚ್ಚಿ ಸಂತೋಷಪಡುವರು" ಎಂದು ಹೇಳಿ ಕೊನೆಗೂ ಆ ಮಹಾವಿದ್ವತ್ಪದವಿಯನ್ನು ಅಂಗೀಕರಿಸಲಿಲ್ಲ ಇದು ನನ್ನೆದುರಿಲ್ಲಿಯೇ ನಡೆದ ಪ್ರಸಂಗ ಇದರಿಂದ ಶಾಸ್ತ್ರಿಗಳು ಯಾವ ರೀತಿಯ ಜೀವಿಸಿದವರೆಲ್ಲ ಅಸಯಿಟ್ಟಿದ್ದರು ಎಂಬುದು ವ್ಯಕ್ತವಾಗುವುದು ಇನ್ನು ಶಾಸ್ತ್ರಿಗಳು ಎಂತಹ ದೇಶಾಭಿಮಾನಿಗಳು ಎಂಬುದಕ್ಕೆ ಕೆಲವು ನಿದರ್ಶನಗಳನ್ನು ಕೊಡುತ್ತೇನೆ ಒಂದು ದಿವಸ ಶಿವರಹಸ್ಯದಲ್ಲಿದ್ದ ಕೆಲವು ಶಿವಸ್ತೋತ್ರಗಳನ್ನು ನಾನೇ ಅವರ ಮುಂದೆ ಒಬ್ಬ ಆ ಸ್ತೋತ್ರಗಳು ಎಂತಹ ಭಾವಗಳಿಗಾಗಿವೆ ಎಂದು ಹೊಗಳಿದೆನು ಕೂಡಲೆ ಅವರು ಆ ಸ್ತೋತ್ರಗಳನ್ನು ಗುರುಮುಖದಿಂದಿಕೊಂಡರು ಏಕೆಂದರೆ ಈ ಸ್ತೋತ್ರಗಳು ನಮ್ಮ ದೇಶದ ಎಲ್ಲ ಜನರ ಬಾಯಿಂದಲೂ ಬರುವಂತೆ ಮಾಡ ಬೇಸು ನಮ್ಮವರು ಆಜ್ಞಾನಿಗಳು ನಮ್ಮ ವಿದ್ಯೆಯನ್ನು ನಾವು ಅವರಿಲ್ಲಿ ಕುಂಬೇಕು' ಎಂದು ಹೇಳಿದರು ಮತ್ತೊಂದು ದಿನ ಅಂದರೆ ಶ್ರೀ ಶಾಸ್ತ್ರಿಗಳು ದೇಶಜಾಗ್ರಣ ಮೂಡಿನ ಮೂರು ತಿಂಗಳಿಗೆ ಮುಂಚೆ ಭರತಖಂಡದ ವಿಚಾರವಾಗಿ ಮಾತನಾಡುತ್ತಾ ನಮ್ಮ ಭಾರತೀಯರು ಎಂತಹ ದೈವಭಕ್ತರು ಮತ್ತು ಸಾಹಸಿಗಳು ಎಂಬುದನ್ನು ಸೂಚಿಸುವ ಮಕ್ಕೇಶ್ವರ ಲಿಂಗದ ವಿಷಯವಾಗಿ ತಾವು ನಡೆಸಿದ ಶೋಧನೆಗಳನ್ನು ನನ್ನೊಡನೆ ತಿಳಿಸಿದರು ಅಸ್ಸೇ ಅಲ್ಲ ' ಈಗಿನ ಇಂಡೋನೇಷ್ಯಾ, ಜಾವಾ, ಸುಮಾತ್ರಾ, ಆಸ್ಟ್ರೇಲಿಯ ಮುಂತಾದ ಹೊರದೇಶ ಗಳೆಲ್ಲಾ ಭಾರತೀಯ ಸಂಸ್ಕೃತಿಗೆ ಒಳಪಟ್ಟವುಗಳು ಆ ದೇಶಗಳಲ್ಲೆಲ್ಲಾ ಶೈವಮತವು ಹಿಂದೆ ಒಹುವಾಗಿ ಹರಡಿದ್ದಿತ. ಈಗಲೂ ಹಿಂದಿನ ಅವಶೇಷಗಳು ದೇವಾ ಲಯದ ರೂಪದಲ್ಲಿ ಗ್ರಂಥದ ರೂಪದಲ್ಲಿ ನಮಗೆ ಅಲ್ಲಲ್ಲಿ ದೊರೆಯುತ್ತಿವೆ' ಎಂಬ ಅಂಶವನ್ನು ಚಾರಿತ್ರಿಕ ವಾಗಿ ಹಾಗೂ ಪುಕ್ಕಟ್ಟೆ ವಸ್ತುಗಳ ಮೂಲಕವಾಗಿ ಜನತೆಗೆ ತಿಳಿಸಬೇಕೆಂದು ಅನೇಕ ಲೇಖನಗಳನ್ನು ಬರೆದು ಶ್ರೀ ಶಾಸ್ತ್ರಿಗಳವರೇ ಸ್ವಂತವಾಗಿ ಓದಿದರು ಅದರ ಕೆಲವು ಭಾಗ ಮಾತ್ರ ಪಂಚಾಚಾರ್ಯ ಪ್ರಭೆಯಲ್ಲಿ ಅಚ್ಚಾಗಿದೆ ಇದೇ ಉದ್ಯಮವೆದಲ್ಲಿ ಅವರು ಯಶಸ್ವಿ ಯಾಗಿ ಮುಂದುವರಿಯುತ್ತಿದ್ದಾಗಲೇ ವಿಧಿಯು ಶ್ರೀ ಶಾಸ್ತ್ರಿಗಳವರನ್ನು ಪರಮೇಶ್ವರನ ಸನ್ನಿಧಿಗೆ ಕರೆದೊಯ್ದಿತು ಹೀಗೆ ಪಾಂಡಿತ್ಯದಲ್ಲಿ, ಪ್ರತಿಭೆಯಲ್ಲಿ ವಕ್ತೃತ್ವ ದಲ್ಲಿ, ದೇಶಾಭಿಮಾನದಲ್ಲಿ ಬಹಳವಾಗಿ ಮುಂದುವರಿದಿದ್ದ ಸುಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಅಕಾಲ ಮರಣದಿಂದ ಪಂಡಿತ ಪ್ರಪಂಚಕ್ಕೆ ಆದರಲ್ಲಿಯೂ ವೀರಶೈವ ಜನಾಂಗಕ್ಕೆ ವಿಶೇಷ ನಷ್ಟವುಂಟಾಯಿತೆಂಬುದ ರಲ್ಲಿ ಸ್ವಲ್ಪವೂ ಅನುಮಾನವಿಲ್ಲ.

ಇಂದು ಶ್ರೀಮನ್ ಕಾಶೀನಾಥಶಾಸ್ತ್ರಿಗಳವರಿಂದಲೇ ಸ್ಥಾಪಿತವಾಗಿ ಮೈಸೂರು ರಾಜಧಾನಿಯ ಮಧ್ಯದಲ್ಲಿ ವ್ಯಾಕರಿಯಿಂದ ಶೋಭಿಸುತ್ತಿರುವ 'ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನ ಹಾಗೂ ಪಂಚಾಚಾರ್ಯ ಪ್ರಭಾ ಪತ್ರಿಕೆಯ ರಜತಮಹೋತ್ಸವವು ನಡೆಯುತ್ತಿದೆ ಇಪ್ಪತ್ತೈದು ವರ್ಷಗಳ ಪರ್ಯಂತ ಸರ್ವತೋಮುಖವಾಗಿ ಬೆಳೆದು ನವತಾರುಣ್ಯದಿಂದ ಮೆರೆಯುತ್ತಿರುವ ಈ ಮುದ್ರಣಾಲಯವು ಶ್ರೀಮಾನ್ ಶಾಸ್ತ್ರಿಗಳವರನ್ನು ಎಷ್ಟುಸಾರಿ ಜ್ಞಾಪಿಸಿಕೊಳ್ಳುತ್ತಿದೆಯೋ? ಪಂಚಾಚಾರ್ಯರ ಕೃಪಾಬಲದಿಂದಲೂ, ಶಾಸ್ತ್ರಿಗಳವರ ಉದಾತ್ತಧ್ಯೇಯ ಸಾಧನೆಗಾಗಿಯೂ ಬೆಳೆದುಬಂದ ಇಪ್ಪತ್ತೈದು ವರುಷ ಸ್ಪಿನ ಈ ಮುದ್ರಣಾಲಯು, ದಶರಥನನ್ನು ಕಳೆದು ಕೊಂಡು, ಅವಧಿಂದ ರಾಜ್ಯವನ್ನು ಪಡೆದು ಲೋಕ ರಂಜನೆಮಾಡಿದ ಶ್ರೀರಾಮನಂತೆ, ಸರ್ವಜನರ ಮನ್ನ ನೆಗೂ ಪಾತ್ರವಾಗಿದೆ ಶ್ರೀಮಾನ್ ಶಾಸ್ತ್ರಿಗಳರು ಈಗ ಕಣ್ಮರೆಯಾಗಿದ್ದರೂ ಅವರಿಂದ ಪ್ರತಿಷ್ಠಿತರಾಗಿ ಅವರ ಧ್ಯೇಯಪಾಲನೆಯಲ್ಲಿಯೇ ಒದ್ದಾಡದವರಾಗಿ ನಿರಂತರವ ಅವರ ಸಹೋದರರಾದ ಶ್ರೀಮಾನ್ ಮಹಾದೇವಯ್ಯ ನವರು ಈ ಮುದ್ರಣಾಲಯಕ್ಕೆ ಯಜಮಾನರಾಗಿ ನಿಂತಿ ರುವುದು ನಮ್ಮೆಲ್ಲರಿಗೂ ಸಂತೋಷಕರವಾದ ವಿಷಯ ಶ್ರೀಮಾನ್ ಮಹಾದೇವಯ್ಯನವರು ಮೊದಲಿನಿಂದಲೂ ಆಣ್ಣಂದಿರಲ್ಲಿ ಆಪಾರವಾ ಭಕ್ತಿಯನ್ನಿಟ್ಟು ಬಾಯೆಯಂತೆ ಅವರನ್ನು ಸಾಕಿಸಿರುವ ಈಗ ಭಾಕ್ಯಭಕ್ತಿಯಂದಿಂದ ಶಾಸ್ತ್ರಿ ಗಳವರು ಅರ್ಧಮಾಡಿಬಿಟ್ಟಿರುವ ಸಕಲ ಕಾರ್ಯಕಲಾಪ ಗಳನ್ನು ಸುಗಮವಾಗಿ ಸಮಾಪ್ತಿಗೊಳಿಸುವಂತಹ ಮೇಧಾವಿಗಳಾಗಿದ್ದಾರೆ ಶ್ರೀಮಾನ್ ಮಹಾದೇವಯ್ಯ ನವರು ಸರಳಜೀವಿಗಳೂ ನಿಸ್ವಪಕ್ಷಪಾತಿಗಳೂ ಆದವರಾಗಿ ಶ್ರೀ ಕಾಶೀನಾಥಶಾಸ್ತ್ರಿಗಳವರ ಪೂರ್ಣಾಧ್ಯೇಯವನ್ನು ನಿರ್ವಹಿಸುವವರಾಗಿದ್ದಾರೆ ಮತ್ತು ಆವರಿಂದಲೇ ನಿಯ ಮಿತವಾಗಿ ಸುಶಿಕ್ಷಿತರೆನಿಸಿರುವ ಮೊದಲ ಮುದ್ರಣಾಲಯದ ಕೆಲಸ ಗಾರರು ಅತ್ಯಂತ ಶ್ರದ್ಧೆಯಿಂದ ಇಲ್ಲಿನ ಕಾರ್ಯಕಲಾಪ ಗಳನ್ನು ನಡೆಸಿಕೊಂಡು ಹೋಗುತ್ತಿರುವ ವಿಷಯವು ಅದರಜ್ಞೇಯವಾಗಿದ್ದಾ ಇವರೆಲ್ಲರ ಪೂರ್ಣ ಸಹಾಸ ಭೋಯಿಂದಲೇ ಈ ಎಂದರ್ಣಾಯವು ಹಿಂದಯೂ ಸ್ಪಷ್ಟಮಸ್ತಾಸವನು ಸಡೆಸಿರಿ ಇದರಿ ಸ್ವಾಸ ನ ಕ್ಕೆ ಹಿಕ್ಕೆ ಜತೆ ಪಕಿಕ್ಯ ನಾವು ಕಣ್ಣಾರೆ ಕಂಡು ಜಗತ್ಪ್ರಸಿದ್ಧವಾಗಿರುವ ಪಂಚಾಚಾರ್ಯ ಪ್ರಭೆಯನ್ನು ಪಡೆದ ಜಗತ್ಪ್ರಖ್ಯಾತ ವಾಗಲಿ ಎಂಬ ಪ್ರಸ್ತುತ ಶುಭ ಸಂದರ್ಭದಲ್ಲಿ ಪೂರ್ಣಾಯುರಾರೋಗ್ಯ ಸಂಪದಭಿವೃದ್ಧಿಗಳಿಂದ ಕೂಡಿದ ಶ್ರೀಮಾನ್ ಮಹಾದೇವಯ್ಯನವರಿಗೂ ಅವರ ಕುಟುಂಬವರ್ಗಕ್ಕೂ ಪರಮೇಶ್ವರನು ಇತರರ ಕಾರ್ಯಕರ್ತರಿಗೂ ಜಗದೀಶ್ವರನು ಆಯುರಾರೋಗ್ಯ ವಿಶಸಲಸಿಸನ್ನಂಗಳಗಳನ್ನೂ ಕರುಣಿಸಿ ಸಲಹಲಿ ಎಂಬುದಾಗಿ ಸರ್ವೇಶ್ವರನನ್ನು ಪ್ರಾರ್ಥಿಸುತ್ತೇನೆ

ಓಂ

ಪಂಚಾಚಾರ್ಯಸ್ತುತಿಭೆಯ ಅಭ್ಯುದಯ ಹಾಗೂ ರಜತಮಹೋತ್ಸವದ ಶುಭಸಂದೇಶ

ವೀರಶೈವಮತತ್ಯಾತ್ಮಕರಾದ ಶ್ರೀಜಗದ್ಗುರು ಪಂಚಾ ಚಾರ್ಯರ ಕೀರ್ತಿಯನ್ನು ಪ್ರಕಾಶಪಡಿಸುವದಕ್ಕಾಗಿ ನಾಗನೂರ ಬೃ॥ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳ ವಂದಿಂದ ಮೈಸೂರಿನಲ್ಲಿ ಜನ್ಮವೆತ್ತಿದ ಪಂಚಾಚಾರ್ಯ ಪ್ರಭಾ ಎಂಬ ವಾರಪತ್ರಿಕೆಯು ವೈಶಾಖ ಶು॥ ೫ ಮಿತಿಗೆ ೨೪ ವರ್ಷಗಳನ್ನು ಪೂರೈಸಿ ೨೫ ನೇ ವರ್ಷದಲ್ಲಿ ಕಾಲಿಟ್ಟಿನ್ನ ರಜತಮಹೋತ್ಸವದ ಭಾಗ್ಯವನ್ನು ಪಡೆದುದು ವೀರಶೈವರಿಗೆಲ್ಲಾ ಆನಂದದ ಸಮಯವಾಗಿದೆ ಈ ಆನಂದವನ್ನು ಸಂ॥ ಕಾಶೀನಾಥಶಾಸ್ತ್ರಿಗಳವರು ನೋಡ ಬಹುದಾಗಿತ್ತು ಆದರೆ ನಮ್ಮಗಳ ದುರ್ದೈವದಿಂದ ಆಗಲಿ ಶಿವನಲ್ಲಿ ಬೆರೆತುಹೋದರು ಈ ಮಹಾತ್ಕಾರಿಂದ ಸ್ಥಾಪಿ ತವಾದ ಪಂಚಾಚಾರ್ಯಸ್ತುತಿ ಪುಟಿಯು ಮಿಂಚೆನಂತೆ ಸ್ಪುರಿಸ ವಾದುದ್ದು ಧರ್ಮಪ್ರಭ ಪರಶಿವಪ್ರಭೆ, ಕಾಶೀನಾಥ ಪಂಡಿತರ ಪ್ರತಿಭಾಪ್ರಭೆ, ಜಗದ್ಗುರು ಪ್ರಭೆ ಈ ಪ್ರಕಾರ ಆನಂತ ಪ್ರಭೋದಯದಿಂದ ಪ್ರಸಂಚದಲ್ಲಿ ಅದ್ಭುತ ಶಿವರ್ತನೆಯಾಗಿದೆ ಪ್ರಭೆಯು ೨೪ ವರ್ಷಗಳನ್ನು ಸಹಜವಾಗಿ ಕಳೆದು ೨೫ ನೇ ವರ್ಷದಲ್ಲಿ ಕಾಲಿಡಬೇಕಾ ದರೆ ಶಿವನ ಕೃಪೆಯೂ ಗುರುವಿನ ಆನುಗ್ರಹವೂ ಚೆನ್ನಾ ಗಿರಲೇಬೇಕು ಶಿವಭಜನೆಯನ್ನೂ ಗುರುಭಕ್ತಿಯನ್ನೂ ಧರ್ಮಾಚರಣೆಯನ್ನೂ ಜಗತ್ತಿಗೆಲ್ಲಾ ಬೋಧಿಸಿ ವೀರ ಶೈವ ಧರ್ಮತತ್ವಗಳನ್ನು ಹರಡಿ ಕೀರ್ತಿಕಾಯಿಯಾದ ಪ್ರಭೆಯು ಇದೇ ಪ್ರಕಾರ ಉತ್ತರೋತ್ತರ ಅಭಿವೃದ್ಧಿ ಯನ್ನು ಹೊಂದಿ ಹಳ್ಳಿ ಪಟ್ಟಣಗಳಲ್ಲಿ ತುಂಬಾ ವ್ಯಾಪಿಸಿ ತನ್ನ ನಿರ್ಮಲವಾದ ಪ್ರಭೆಯಿಂದ ಜನರ ಅಜ್ಞಾನವನ್ನು ದೂರಮಾಡಿ ಹೆಚ್ಚು ಪ್ರಕಾಶಿಂದ ಬೆಳಿಯೆಲೆಂದು ಶ್ರೀಜಗದ್ಗುರು ಪಂಚಾಚಾರ್ಯರನ್ನು ಭಜಿಸುತ್ತೇನೆ.

ಸೇವಾಕಂಕರ ಸೊಪ್ಪಿನ ಗುರುಲಿಂಗಪ್ಪ.

ಶುಭಾಶಯ

ನಿಮ್ಮಾ ಪಂಚಾಚಾರ್ಯ ಪ್ರಭಾ ಪತ್ರಿಕೆಗೆ ೨೪ ವರ್ಷ ತುಂಬಿ ೨೫ ವರ್ಷ ಪ್ರಾರಂಭವಾಗುತ್ತಿರುವುದು ಸಂತೋಷ ಪ್ರಭೆಯು ಮೊದಲಿನಂತೆ ಪಂಚಾಚಾರ್ಯ ಜಗದ್ಗುರುವರ್ಯರ ಪ್ರಭೆಯನ್ನು ಬೀರುತ್ತ ಜಗತ್ಪ್ರಕಲ್ಲಿ ಚಿರಸ್ಥಾಯಿಯಾಗಿ ಬಾಳಲೆಂದು ಹಾರೈಸುವೆ

ಪಿ. ಆಯ್. ಪಟೇಲ್, ಜೇವರಗಿ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ಸೈಕಾಖ ಶು॥ ಪಂಚಮಿಗೆ ೩೪ ವರ್ಷಗಳು ತುಂಬಿ ೩೫ ನೆಯ ವರ್ಷವು ಪ್ರಾರಂಭವಾಗಿರುವುದು ವರ್ತಮಾನಕಾಲದಿಂದ ಚಂದಾದಾರರಿಗಿರುವ ನಿರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ ಪಿ ಮಾಡಬೇಕಾಗುತ್ತದೆ ವಿ ಪಿ ಮಾಡುವುದರಿಂದ ನಮಗೂ ತೊಂದರೆಯಾಗುವುದು ಚಂದಾದಾರರಿಗೂ ಅನೇಕ ತೊಂದರೆಗಳುವುದು ಆದ್ದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿ ೧೪ನೆ ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಜೂನ್ ಗ್ರಾನುದಲ್ಲಿ ವರ್ಷದ ಚಂದಾದಾರರಿರುವರೋ ಆ ಗ್ರಾನು ದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟುಗೂಡಿಸಿ ಒಂದೇ ಸಾರಿ ಮನಿಯಾರ್ಡರ್ ಕೂಡಿಸ ಬೇಕು ಹೀಗೆ ಮಾಡುವುದರಿಂದ ನಿರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯವಿಟ್ಟು ಮರೆಯದೆ ತಿಳಿಸಬೇಕು

—ಮಾ

ಪಂಚಾಚಾರ್ಯಪ್ರಭಾ

೧೪ನೆಯ ಮೇ ತಾ ೧೪ ನೇ ಸೋಮವಾರ

ರಜತಮಹೋತ್ಸವ ಹಾಗೂ ನೂತನ ವರ್ಷಾರಂಭ

ಪಂಚಾಚಾರ್ಯ ಪ್ರಭಾ ಪತ್ರಿಕೆಯು ಜನ ವತ್ತಿ ಇದೀ ಖರನಾಮಸಂವತ್ಸರದ ವೈಶಾಖ ಶುದ್ಧ ಪಂಚಮಿಗೆ ೩೪ ವರ್ಷಗಳು ಕಳೆದು ೩೫ ನೇ ವರ್ಷವು ಪ್ರಾರಂಭವಾಯಿತು ಶ್ರೀ ಜಗದ್ಗುರು ಪಂಚಾಚಾರ್ಯರ ಅನುಗ್ರಹದಿಂದ ಈ ಪತ್ರಿಕೆಯು ಯಾವ ಅಡಚಣೆಗಳೂ ಇಲ್ಲದೆ ಸುಗಮವಾಗಿ ಬೆಳೆದು ೩೪ ವರ್ಷಗಳನ್ನು ಪೂರೈಸಿ ೩೫ ನೆಯ ವರ್ಷದ ರಜತಮಹೋತ್ಸವದ ಭಾಗ್ಯವನ್ನು ಪಡೆದಿರುವ ಪರಮಾತ್ಮನ ಕೃಪೆಯೆಂದೇ ಹೇಳಬೇಕಾಗಿದೆ

ಈಗಿನ ನವೀನ ನಾಗರಿಕ ವಾತಾವರಣದ ಹೊಡೆತದಿಂದ ಮೂಲಭೂತವಾದ ಸನಾತನ ಧರ್ಮವನ್ನೇ ಒಳಗೊಂಡ ಸಹಿತ ಅರುಳುತ್ತಿರುವಲ್ಲಿ ಕಾಲೆಳೆಯಂತಿರುವ ಮಿಶ್ರ ಧರ್ಮಗಳು ಉಳಿಯುವುದೆಂತು ನಮ್ಮ ಭರತಖಂಡದಲ್ಲಿ ಯಾವ ವ್ಯಕ್ತಿಯನ್ನು ನೋಡಿದರೂ ರಾಜಕೀಯ ಧ್ಯೇಯ ಸ್ಫೂರ್ತಿಯಿಂದ ಗಳಿಸಿ ಮನದಲ್ಲಿ ಪೂರ್ಣ ತ್ಯಿವೆಯಿಲ್ಲದೆ ಆತ್ಮಿಯಧ್ಯೇಯ ವೇ ಇಲ್ಲದಂತಾಗುತ್ತಿ ಲಿದೆ ಅಧರ್ಮಕ್ಕೆ ಉತ್ತೇಜನಕೊಟ್ಟು ಪವಿತ್ರವಾದ ಧನ ಧರ್ಮಮಾರ್ಗಕ್ಕೆ ಮುಳ್ಳು ಬೇಲಿಯನ್ನು ಕಟ್ಟುತ್ತಿ ದ್ದಾರೆ ಸನಾತನಿಗಳ ಹೃದಯಸ್ತ್ರದಲ್ಲಿ ಈ ಅನಾಚಾರವು ಅಂಕುರಿಸಬೇರಾದರೆ ಕಲಿಕಾಲದ ವೈಚಿತ್ರ್ಯವಲ್ಲದೆ ಬೇರೆಯಲ್ಲ ಇಂಥ ಬಿಕ್ಕಟ್ಟಿನಲ್ಲಿಯೂ ಈ ಪ್ರಭೆಯು ವೀರಶೈವ ಮತದ ನಿಜತತ್ವವನ್ನೂ ಈ ಮತಸ್ಥಾಪಕ ರಾದ ಶ್ರೀಜಗದ್ಗುರು ಪಂಚಾಚಾರ್ಯರ ಅಸಾಧಾರಣ ಮತ್ತು ಮಹತ್ವವನ್ನೂ ಸರ್ವತೋಮುಖವಾಗಿ ಜಗತ್ತಿ ನಲ್ಲಿ ಬೀರಿ ತನ್ನ ನಾಮವನ್ನು ಅನ್ವರ್ಥಕಪಡಿಸಿಕೊಳ್ಳು ವುದರಲ್ಲಿ ಉದ್ಯುಕ್ತವಾಗಿದೆ ಈ ಪತ್ರಿಕೆಯು ಹೊರಡು ವುದಕ್ಕಿಂತ ಮುನ್ನ ವೀರಶೈವಮತವು ಪರಮತೀಯರಿಂದ ಒಂದು ವಿಧವಾದ ಕಳಂಕವನ್ನು ಪಡೆದಿದ್ದಿತು ಈಚೆಗೆ ಈ ಪತ್ರಿಕೆಯಲ್ಲಿ ಹೊರಡುತ್ತಿರುವ ಉದ್ಗಾಮ ಲೇಖ ಗಳನ್ನು ನೋಡಿ ವೀರಶೈವ ಮತನೆಲ ಮಹಾ ವೈಷ್ಣವ ಸನಾತನ ಸೌತ್ರದಲ್ಲಿ ಶೈವದ ವೈಷ್ಣವದಲ್ಲೊಂದಾದ ಮಹಾಫಲವೈಷ್ಣನೆಂದು ಅಖಿಲ ಪಂಡಿತರು ಎನೆ, ಪೂರ್ವಕ ಪ್ರಶಂಸಿಸುತ್ತಿರುವರು

ಕರ್ಣನು ತಾನು ಸಂಸರ್ಗದೋಷದಿಂದ ರಾಧಾ ಪುತ್ರನೆಂದು ತಿಳಿದುಕೊಂಡಿದ್ದರೂ ಹಿತೋಪದೇಶದಿಂದ ಮುಂದೆ ಪಾಂಡುಪುತ್ರನೆಂದು ತಿಳಿದ.ಕೊಂಡಂತೆ ವೀರಶೈವರಲ್ಲಿ ಅನೇಕರು ಪ್ರಭಾ ಪತ್ರಿಕೆಯಲ್ಲಿ ಹೊರ ಡುವ ಹಿತೋಪದೇಶಗಳನ್ನಾಲಿಸಿ ಭ್ರಾಂತಿಯು ಅಡಗಿ ಪಂಚಾಚಾರ್ಯರೇ ಈ ಮತದ ಸಂಸ್ಥಾಪಕರುಗಳೆಂದೂ ಮತಸ್ಥಾಪನೆ ಜಂಗಮರೇ ದಲಿ ನಿರ್ಜಾನವನ್ನು ಪಡೆದರು ಈ ವಿಷಯವಾಗಿ ಕರ್ತವ್ಯವಾದಿದೀಚೆಗೆ ಕೋಲಿದೆ ಪ್ರಕಟಿಸಿ ಬಂದಿರುವ ಲೇಖನಗಳು ದೊಡ್ಡವಾಗಿ ವೇಗಾವಧಿ ತ್ರಯವು ಪ್ರಕಟವಾಗಿ ಮುಸ್ಲಿಮರು ಜನರ ಮನಸ್ಸಿನಲ್ಲಿ ಸತ್ಯ ಕಾಂಶ ರೂಢಿಸಿ ಬಂದಿರುವ ಸರ್ವರೂ ವೀಕ್ಷಿಸಿ ಬಂದಿರುವ ಕಾವರ್ ಕೋಲಿತ್ತ ಪ್ರಭಾ ತ ತವ ತಿಳಿದು ಗ್ರಹಿಸಿ ಬಂದಿರುವುದು ನಮಗೆ ಮೆಚ್ಚಿಕೆಯನ್ನುಂಟುಮಾಡಿದೆ ಈ ಪತ್ರಿಕೆಯು ಪ್ರಕಟಿಸಿದ ಲೇಖನಗಳಿಂದ ಪ್ರಭಾವಿತರಾಗಿ ಪ್ರಭಾ ಪತ್ರಿಕೆಯು ಸಜಾತರಾಷ್ಟ್ರದಲ್ಲಿ ಸ್ಥಾಪಿಸಿರುವ ಧರ್ಮ ಅನಂತರ ಒಳಮನಸ್ಸಿನ ಪೆನ್ನು ಎಂಘರ್ಷಕ ಪಡಿಸಿಕೊಡಿದ ಕೆಲಂ ಹಿರಿ ಮಾರ್ಷ್ಟ್ರ ಆಂಧ್ರ ಉತ್ಕರ್ಷ ಇಷ್ಟಿರುವುದಲ್ಲದೆ ಈ ಪತ್ರಿಕೆಯು ಹೊಡಿ ಜಗತ್ತಿ ವಿಜಯದ ವಿಶಯಲ್ಲಿ ವೀರಶೈವ ಮತವೂ ಕೂಡ ಪ್ರಧಾನವೆಂದು ಸನಾತನ ವಾದ ವೈದಿಕಧರ್ಮ ಎಂಬೊಕ್ಕಿಗಳು ಕೆಲವೆಡೆ ಗೈಮಾತಾಗಿ ಧರ್ಮಗಳು



ಪಂಚಾಚಾರ್ಯಪ್ರಭಾ ಸಂಪಾದಕರಾದ

ಶ್ರೀ ಬಿ ನಾಗಭೂಷಣಯ್ಯನವರು

ವಾಹನ ಲಯಗಳಾ ನಡೆಮಂಕೆ ಪಿಡಿಯನ್ನು ಬೋಧಿ ಜರಿಯಲು ಹಂದಿದೆ ಅದರಂತೆ ಪತ್ರಿಕೆಯು ಮಾಡಿದ ಪ್ರಯತ್ನಗಳಿಂದಲೂ ಬಂದ ಸಂದೇಶಗಳನ್ನು ಬಿಡಿ ಸ್ಫುಟಿಸಿಲಾಯಿತು ಉತ್ಸವಕ್ಕಾಗಿ ಸೇರಿದ ಯಾವತ್ತಿ ಜನರು ಫಲತಾಂಬೂಲಗಳನ್ನು ಸ್ವೀಕರಿಸಿದನಂತರ ಪಂಚಾಚಾರ್ಯಪ್ರಭೆಗೆ ಶುಭಾಶಯವನ್ನು ಕೋರಿ ಕೈ॥ ವೀ॥ ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರಿಂದ ಸ್ಥಾಪಿತವಾದ ಈ ಪ್ರಭಾಪತ್ರಿಕೆಯು ಹುಟ್ಟಿಕಾಲ ಜನಾನುರಾಗಿಯಾಗಿ ಬಾಳಲೆಂದು ಹಾರೈಸಿದರು ಶ್ರೀಜಗದ್ಗುರು ಪಂಚಾಚಾರ್ಯ ಮಹಾ ರಾಜಕೀ ಜೈ ಸಂ॥ ಶ್ರೀಕಾಶೀನಾಥಶಾಸ್ತ್ರೀಗೆ ಜೈ ಎಂಬ ಜಯಘೋಷದೊಡನೆ ರಚನಮಹೋತ್ಸವವು ಮಂಗಾಯಗೊಳಿಸಲ್ಪಟ್ಟಿತು

ಕಾಶೀ ವೀರಶೈವ ವಿದ್ವತ್ಸಂಘದಿಂದ ಬಂದ ಶುಭಾಶಯ

ಸಂಪಾದಕರು 'ಪಂಚಾಚಾರ್ಯಪ್ರಭಾ' ನೈಸೂರು ಇವರಿಗೆ—

"ನಿಮ್ಮ ಪ್ರಭಾ ಪತ್ರಿಕೆಯ ರಜತಮಹೋತ್ಸವವು ಯಶಸ್ವಿಯಾಗಿ ನಡೆಯಲಿ" ಎಂದು ಸಂಘದ ವರ ನಾಗಿ ಕಾರ್ಯದರ್ಶಿಗಳು ತಂತಿ ಮೂಲಕ ಶುಭವನ್ನು ಕೋರಿದ್ದಾರೆ.

ರಜತಮಹೋತ್ಸವ ಹಾಗೂ ನೂತನ ವರ್ಷದ ಪೂಜಾಸಮಾರಂಭ

ನೈಸೂರ ರಾಜಧಾನಿಯಲ್ಲಿ ನಡೆಸಲ್ಪಟ್ಟ ಪಂಚಾ ಚಾರ್ಯ ಪ್ರಭಾ ಪತ್ರಿಕೆಯ ರಜತಮಹೋತ್ಸವವು ಕಾ ೧೪ ನೇ ದಿನ್ನ ಶ್ರೀ ಪಂಚಾಚಾರ್ಯ ಎಲೆದಿಕ ಪ್ರಶ್ನೆಯಲ್ಲಿ ಒಳ್ಳೆಗೆ ನೈಭವದಿಂದ ಆಚರಿಸ ಲ್ಪಟ್ಟಿತು ತಳರುತೋರಣಗಳಿಂದಲೂ, ರಂಭಾಸ್ತಂಬ ಗಳಿಂದಲೂ ಅಲಂಕರಿಸಲ್ಪಟ್ಟ ಪದ್ಮಾವನದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರವನ್ನಿಟ್ಟು ಪೂರ್ಣಕುಂಭೋಪಚಾರಗಳಿಂದ ಪೂಜಿಸಿ ಪಂಚಾಚಾರ್ಯರಿಗೆ ಸ್ವಾಗತ ಹೊಡನೆ ಮಂಗಲವನ್ನು ಕೋರಿದನಂತರ ಪಂಚಾಚಾರ್ಯರಿಂದಲೂ ಪಟ್ಟಾಚಾರ್ಯರಿಂದಲೂ ಮಾನ್ಯ ಪಹನೀಯರಿಂದಲೂ ಬಂದ ಸಂದೇಶಗಳನ್ನು ಓದಿ ಸ್ಫುಟಿಸಲಾಯಿತು ಉತ್ಸವಕ್ಕಾಗಿ ಸೇರಿದ ಯಾವತ್ತಿ ಜನರು ಫಲತಾಂಬೂಲಗಳನ್ನು ಸ್ವೀಕರಿಸಿದನಂತರ ಪಂಚಾಚಾರ್ಯಪ್ರಭೆಗೆ ಶುಭಾಶಯವನ್ನು ಕೋರಿ ಕೈ॥ ವೀ॥ ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರಿಂದ ಸ್ಥಾಪಿತವಾದ ಈ ಪ್ರಭಾಪತ್ರಿಕೆಯು ಹುಟ್ಟಿಕಾಲ ಜನಾನುರಾಗಿಯಾಗಿ ಬಾಳಲೆಂದು ಹಾರೈಸಿದರು ಶ್ರೀಜಗದ್ಗುರು ಪಂಚಾಚಾರ್ಯ ಮಹಾ ರಾಜಕೀ ಜೈ ಸಂ॥ ಶ್ರೀಕಾಶೀನಾಥಶಾಸ್ತ್ರೀಗೆ ಜೈ ಎಂಬ ಜಯಘೋಷದೊಡನೆ ರಚನಮಹೋತ್ಸವವು ಮಂಗಾಯಗೊಳಿಸಲ್ಪಟ್ಟಿತು

ವೇ॥ ಪೆಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು ಶ್ರೀಜಗದ್ಗುರುಪಾರುಳಜಯಂತೀ ಮಹೋತ್ಸವ ಸಮಯದಲ್ಲಿ ಮಾಡಿದ ಭಾಷಣದ ಕೆಲವಂಶವನ್ನು ಇದರಡಿಯಲ್ಲಿ ಪ್ರಕಟಿಸಲಾಗಿದೆ—

ಮಾನವಪ್ರಾಣಿಯ ಉದ್ಧಾರಕ್ಕೋಸ್ಕರ ಪರಮ ದಯಾಳುವಾದ ಶ್ರೀಪರಮೇಶ್ವರನಿಂದ ವೇದಾಗಮೋಪನಿಷತ್ತುಗಳು ನಿರ್ಮಾಣಲ್ಪಟ್ಟವೆ ಈ ಗ್ರಂಥಗಳಲ್ಲಿರುವ ಸಿದ್ಧಾಂತ ತತ್ತ್ವಗಳನ್ನು ತಿಳಿದು ಯಾರು ನಡೆಸುವರೋ, ಅವರಿಗೆ ನಿತ್ಯಸುಖವು ಪ್ರಾಪ್ತವಾಗುವದೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ ಭರತಖಂಡದಲ್ಲಿ ವಾಸಿಸಿರುವ ಹಿಂದೂಮತೀಯರಿಗೆಲ್ಲ ಈ ಗ್ರಂಥಗಳೇ ಅತ್ಯಂತ ಪೂಜ್ಯಗಳಾಗಿರುತ್ತವೆ ವೇದಾಗಮಾದಿಗಳಲ್ಲಿ ಬೋಧಿಸುವ ವಿಷಯಗಳನ್ನನುಸರಿಸಿ ವರ್ತಿಸುವವರು ಹಿಂದುಗಳೆಂದೂ, ವೇದಾಗಮಾದಿಗಳ ಅಭಿಪ್ರಾಯಕ್ಕೆ ವಿರೋಧಿಗಳಾಗಿ ವರ್ತಿಸುವವರು ಹಿಂದುಗಳಲ್ಲವೆಂದೂ ಶಾಸ್ತ್ರನಿಯಮವುಂಟು ಹಿಂದೂಮತದಲ್ಲಿ ವರ್ಣಾಶ್ರಮ ಧರ್ಮನಿಬಂಧನವು ಮುಖ್ಯವಾದುದಾಗಿದೆ ಈ ವರ್ಣಾಶ್ರಮಧರ್ಮನಿಬಂಧನವನ್ನು ಕುರಿತು, ಅನೇಕಾನೇಕ ಜನವುಹರ್ಷಿಗಳು ಸ್ಮೃತಿಗಳನ್ನೂ ಪುರಾಣಗಳನ್ನೂ, ಗೀತಾದಿಗಳನ್ನೂ ಬರೆದಿರುವರು ಮಹಾತ್ಮರಾದ ಆ ಮಹರ್ಷಿಗಳು ರಚಿಸಿರುವ ವರ್ಣಾಶ್ರಮ ಧರ್ಮನಿಬಂಧವಂತೆ ಇಂದಿನವರೆಗೂ ಹಿಂದೂಮತದಲ್ಲಿ ವರ್ಣಾಶ್ರಮಧರ್ಮಗಳ ಕಟ್ಟಳೆಯು ಅವಿಚ್ಛಿನ್ನವಾಗಿ ನಡೆದು ಬಂದಿರುತ್ತದೆ ಯಾರು ವರ್ಣಾಶ್ರಮಗಳ ತತ್ತ್ವಗಳನ್ನು ಮನ್ನಿಸಿ ಅದರಂತೆ ಆಚರಿಸುವರೋ ಅವರೇ ನೈದಿಕರೆಂದೂ, ಇದಕ್ಕೆ ವಿರುದ್ಧವಾಗಿ ಆಚರಿಸುವವರು ಅನೈದಿಕರೆಂದೂ ಧರ್ಮಶಾಸ್ತ್ರಗಳಲ್ಲಿ ನಿರ್ಣಯ ಸಲ್ಪಟ್ಟಿವೆ ವೀರಶೈವಮತಕ್ಕೆ ವೇದಾಗಮಾದಿಗಳು ಪರಮಪ್ರಮಾಣೀಭೂತಗ್ರಂಥಗಳಾಗಿದ್ದರೂ ಈ ಮತದಲ್ಲಿರತಕ್ಕ ಕೆಲವು ಜನ ವಿಚಾರರೂಢ್ಯರು ವೀರಶೈವಮತವು ಅಪ್ರಾಕೃತ ವಾದುದರಿಂದ ಈ ಮತದಲ್ಲಿ ವರ್ಣಾಶ್ರಮಧರ್ಮಗಳ ನಿಬಂಧನೆಗೆ ಇಲ್ಲವೆಂದು ಕಂಠರೋಷಣವನ್ನು ಮಾಡುತ್ತಿರುವರು ಹೀಗೆ ಮಾಡುವದು ಅವರ ಅಜ್ಞಾನದ ಪ್ರಭಾವವಲ್ಲದೆ ಬೇರೊಂದಲ್ಲ ಅನಾದಿಕಾಲದಿಂದ ವೀರ ಶೈವಮತದಲ್ಲಿ ಆಚೇಕಾನೇಕರು ಆಚಾರ್ಯರೂ ಪಂಡಿತರೂ, ಯೋಗಿಗಳೂ ಆಗಿಹೋಗಿದ್ದಾರೆ ಅವರು ರಚಿಸಿದ ಭಾಷ್ಯಾದ್ಯುದ್ಗ್ರಂಥಗಳಲ್ಲಿ ವರ್ಣಾಶ್ರಮಧರ್ಮ ವಿಚಾರವು ಬಹುವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವದು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಲೋಕಪ್ರಸಿದ್ಧನಾದ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡುವ ಸಮಯದಲ್ಲಿ—ಬ್ರಹ್ಮನಿರ್ದಿಷ್ಟಚತುರ್ವರ್ಣಾಶ್ರಮಗಳಂತೆ ಶಿವ ನಿರ್ದಿಷ್ಟಚತುರ್ವರ್ಣಾಶ್ರಮಗಳೂ ಉಂಟೆಂದು ಬೋಧಿಸಿದ್ದಾರೆ ತಿರೋಕ್ತನಾದ ಜಾತಿಮಠಾದಿಯನ್ನು ಯಾವನು ಮೀರಿ ನಡೆಯುವನೋ ಅವನು ಜಂಘಾಲ ನೆಂದೂ, ಸರ್ವಕರ್ಮಬಹಿಷ್ಕೃತನೆಂದೂ ಉಲ್ಲೇಖಿಸಲ್ಪಟ್ಟಿದೆ ಇದೇರೀತಿಯಾಗಿ ಸಾವಿರಾರು ಧರ್ಮಗ್ರಂಥಗಳಲ್ಲಿ ವರ್ಣಾಶ್ರಮಧರ್ಮಗಳ ವಿಚಾರವು ಚಿಕ್ಕಬಾಲಕರಿಗೂ ಸಹ ತಿಳಿಯುವಂತೆ ಪ್ರತಿಪಾದಿಸಲ್ಪಟ್ಟಿದ್ದರೂ, ಈ ವಿಷಯವನ್ನು ವೀರಶೈವಮತದಲ್ಲಿರತಕ್ಕ ಕೆಲವರು ಅವೈದಿಕರು ಅಪಲಪಿಸುತ್ತ, ಮನಸ್ಸಿಗೆ ಬಂದಂತೆ ವರ್ತಿಸಹತ್ತಿರುವದನ್ನು ನೋಡಿದರೆ ಬಹು ವ್ಯಸನವಿಸುತ್ತದೆ ಈ ಕನ್ನಡಿಗರು (ಮಿತ್ರರು) ಈ ರೀತಿಯಾಗಿ ವೀರಶೈವ ಮತದಲ್ಲಿ ವರ್ಣಾಶ್ರಮಧರ್ಮಗಳಿರುವುದಿಲ್ಲವೆಂದು ಆಪಲಪಿಸುತ್ತಿರುವುದನ್ನು ನೋಡಿ, ಅನ್ಯಮತೀಯರು ಈ ವಿಷಯವು ನಿಜವಿರಬಹುದೆಂದು ಭಾವಿಸಿಬಿಟ್ಟಾರೆ ಅವರು ಹಾಗೆ ಭಾವಿಸಿದ್ದಲ್ಲಿ, ಅದು ಕೇವಲ ಕಪ್ಪುಶಿಳುವಳಿಕೆಯಾಗಿರುವುದು ಶ್ರೀವೈಷ್ಣವನಮತದಲ್ಲಿ ಯಾವರೀತಿಯಾಗಿ ಚತುರ್ವರ್ಣಾಶ್ರಮಧರ್ಮಗಳು ಸ್ಥಾಪಿಸಲ್ಪಟ್ಟಿರುವವೋ, ಆದರಂತೆಯೇ ಈ ಮತದಲ್ಲಯೂ ಕೂಡ ಅನಾದಿಕಾಲದಿಂದಲೂ ಚತುರ್ವರ್ಣಾಶ್ರಮಧರ್ಮಗಳು ಸ್ಥಾಪಿಸಲ್ಪಟ್ಟಿರುವವು ಶ್ರೀವೈಷ್ಣವಸಂಪ್ರದಾಯಕ್ಕೂ ವೀರಶೈವಸಂಪ್ರದಾಯಕ್ಕೂ ಯಾವ ವ್ಯತ್ಯಾಸವೂ ಇರುವುದಿಲ್ಲ ಸಿದ್ಧಾಂತವಿಷಯವಾಗಿರಲಿ, ಆಚಾರಾದಿವಿಷಯಗಳಾಗಿರಲಿ ಎರಡೂ ಒಂದೇರೀತಿಯಾಗಿರುತ್ತವೆ ದೇವತೋಪಾಸನಾವಿಷಯದಲ್ಲಿಯೂ ಕಾಗೂ ಕೆಲಕೆಲವು ಕರ್ಮಾದಿಗಳಲ್ಲಿಯೂ ಮಾತ್ರ ಅಲ್ಪಸ್ವಲ್ಪ ವ್ಯತ್ಯಾಸ ವಾಗುವುದುಬು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಅನಾದಿಕಾಲದಲ್ಲಿ ಸ್ಥಾಪಿಸಿದ ಸಿದ್ಧಾಂತಾಚಾರಾದಿ ವಿಷಯಗಳನ್ನೇ ಅನುಸರಿಸಿ, ಶ್ರೀ ರಾಮಾನುಜಾಚಾರ್ಯರು ತಮ್ಮ ಸಿದ್ಧಾಂತವನ್ನು ಲೋಕದಲ್ಲಿ ಪ್ರಚಾರಪಡಿಸಿದರೆಂದು ನಿಸ್ಸಂಕಯವಾಗಿ ಹೇಳಬಹುದಾಗಿಗೆ ಒಪ್ಪಿಗೆ ಈ ಎರಡೂ ಮತಗಳಿಗೆ ನಾನಾರೀತಿಯಿಂದ ಸಂಬಂಧವಿರುತ್ತದೆ ಅದುಜೇಗೆಂದರೆ

ಶ್ರೀಮತ್ಸಿಂಹಾಚಾರ್ಯರು ಶಿವಸೂತ್ರ ಬ್ರಹ್ಮಸೂತ್ರ ಗಳ ಮೇಲೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಸ್ಥಾಪಿಸಿರುವಂತೆ, ರಾಮಾನುಜಾಚಾರ್ಯರಾದರೂ ಬ್ರಹ್ಮಸೂತ್ರ ಗಳ ಮೇಲೆ ವಿಶಿಷ್ಟಾದ್ವೈತಸಿದ್ಧಾಂತವನ್ನು ಸ್ಥಾಪಿಸಿರು ವರು ಪಂಚಾಚಾರ್ಯರು ಪರಬ್ರಹ್ಮವು ಶಕ್ತ್ಯವಿಶಿಷ್ಟ ವಾಗಿರುವದೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಚಿದಚಿದ್ವಿಶಿಷ್ಟವಾಗಿರುವುದೆಂದು ಬೋಧಿಸಿದರು ಪಂಚಾ ಚಾರ್ಯರು ನಾಸದೃಶಾರ್ಥಕವಾಗಿ ಭೇದಾಭೇದವನ್ನು ಒಪ್ಪುವಂತೆ ರಾಮಾನುಜಾಚಾರ್ಯರಾದರೂ ಪಾರ ಮಾರ್ಥಿಕವಾಗಿ ಭೇದಾಭೇದವನ್ನು ಒಪ್ಪಿದರು ಪಂಚಾ ಚಾರ್ಯರು ಪ್ರತ್ಯಕ್ಷ ಅನುಮಾನ ಆಗಮಪ್ರಮಾಣ



ಪಂಚಾಚಾರ್ಯಪ್ರಭಾ ಸಂಪಾದಕರಾದ



ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು

ಗಳನ್ನು ಅಂಗೀಕರಿಸಿರುವಂತೆ ರಾಮಾನುಜಾಚಾರ್ಯ ರಾದರೂ ಈ ನೂರು ಪ್ರಮಾಣಗಳನ್ನೇ ಅಂಗೀಕರಿಸಿ ವರು ಈ ಉಭಯಮತಾಚಾರ್ಯರು ಜಗತ್ಸತ್ಯತ್ವವನ್ನು ಒಪ್ಪಿಕೊಳ್ಳುವರು ಅಧ್ಯಾತ್ಮಸಾಧನವನ್ನು ಖಂಡಿಸುವರು ಉಭಯರೂ ಸಿದ್ಧಾಂತವೂ ವಿಶಿಷ್ಟಾದ್ವೈತವಾದ್ದು, ಅಲ್ಪಸ್ವಲ್ಪ ವ್ಯತ್ಯಾಸವಾಗಿರುವುದು ಪಂಚಾಚಾರ್ಯರು ಶಿವನೇ ಪರಬ್ರಹ್ಮವೆಂದು ಬೋಧಿಸಿದರೆ ರಾಮಾನುಜಾ ಚಾರ್ಯರು ವಿಷ್ಣುವೇ ಪರಬ್ರಹ್ಮವೆಂದು ಬೋಧಿಸಿದರು ಪಂಚಾಚಾರ್ಯರು ಶಿವನಿಂದಲೇ ಸಕಲಚರಾಚರಾತ್ಮಕ ವಾದ ಜಗತ್ತು ನಿರ್ಮಿತವಾಯಿತೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ವಿಷ್ಣುವಿನಿಂದಲೇ ನಿರ್ಮಿತ ವಾಯಿತೆಂದು ಬೋಧಿಸಿದರು ಪಂಚಾಚಾರ್ಯರು ಸಾರ್ವಕಾಲಿಕಸಹಕಾರದ ಪರಮೇಶ್ವರನನ್ನು ಪೂಜಿಸಲೇ ಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಲಕ್ಷ್ಮೀ ಸಹಿತವಾದ ನಾರಾಯಣನನ್ನು ಪೂಜಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ಪರಶಿವರೂಪಿಯಾದ ಇಷ್ಟಲಿಂಗಮೂರ್ತಿಯನ್ನು ಕ್ಷಣಕಾಲದಲ್ಲಿಯಾದರೂ ಅಗಲಿಸದೆ ಸದಾ ಶರೀರದಲ್ಲಿ ಧಾರಣಮಾಡಿಕೊಂಡಿರ ಬೇಕೆಂದು ಬೋಧಿಸಿದರೆ, ಅದಕ್ಕೆ ಬದಲಾಗಿ ರಾಮಾ ನುಜಾಚಾರ್ಯರು ವಿಷ್ಣುವಿನ ಆಯುಧರೂಪಗಳಾದ ಶಂಖಚಕ್ರಗಳನ್ನು ಶರೀರದಲ್ಲಿ ಎಡಬಿಡದೆ ಸದಾ ಧರಿಸಿ ಕೊಳ್ಳಬೇಕೆಂದು ತಪ್ತಮುದ್ರಾಂಕನವಿಧ್ಯಕ್ರಿಯೆಯನ್ನು ನೆರೆ ಗೊಳಿಸಿದರು ಪಂಚಾಚಾರ್ಯರು ಗೋಮುಖದಿಂದ ಸಿದ್ಧವಾದ ಭಸ್ಮವನ್ನು ತಿರ್ಯಕ್ತ್ರಿಪುಂಡ್ರವನ್ನಾಗಿ ಧರಿಸ ಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಮೃತ್ತಿಕೆಯಿಂದ ಸಿದ್ಧವಾದ ನಾಮವನ್ನು ಊರ್ಧ್ವ ತ್ರಿಪುಂಡ್ರವನ್ನಾಗಿ ಧರಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ರುದ್ರಾಕ್ಷಮಣಿಗಳನ್ನು ಧರಿಸ ಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ತುಲಸೀಮಣಿಗಳನ್ನು ಧರಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ಪೂಜೆಗಾಗಿ ಬಿಲ್ವಪತ್ರೆಗಳನ್ನು ಪ್ರಧಾನವನ್ನಾಗಿಟ್ಟುಕೊಂಡು ಧರಿಸಬೇಕೆಂದು ಬೋಧಿಸಿದರೆ ರಾಮಾನುಜಾಚಾರ್ಯರು ತುಲಸೀಪತ್ರೆಗಳನ್ನು ಧರಿಸಬೇಕೆಂದು ಬೋಧಿಸಿದರು ಪಂಚಾಚಾರ್ಯರು ಶಿವಸೂತ್ರೀಮಂತ್ರವನ್ನು ಜಪಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ನಾರಾಯಣಾಷ್ಟಾಕ್ಷರೀ ಮಂತ್ರವನ್ನು ಜಪಿಸಬೇಕೆಂದು ಬೋಧಿಸಿದರು ಪಂಚಾ ಚಾರ್ಯರು ಜಪಿಸಿದ ಶಿವಮಣಿ ಕಿವನ ಸಂಬಂಧವಿರ ಬೇಕೆಂದೂ, ಅದಕ್ಕೆ ಲಿಂಗಧಾರಣ, ಪಂಚಾಕ್ಷರೀ ಮಂತ್ರೋಪದೇಶಾದಿಗಳನ್ನು ಮಾಡಬೇಕೆಂದೂ ಬೋಧಿಸಿದರೆ, ರಾಮಾನುಜಾಚಾರ್ಯರು ಶಿಖವಿಗೆ ತಿಕತಂಬ ಚಕ್ರಧಾರಣ, ನಾರಾಯಣಾಷ್ಟಾಕ್ಷರೀಮಂತ್ರೋಪದೇಶ ವನ್ನು ಮಾಡಬೇಕೆಂದು ಬೋಧಿಸಿದರು ಪಂಚಾ ಚಾರ್ಯರು ೮ ನೆಯ ವರ್ಷದಲ್ಲಿ ಜಾತಿಸಂಸ್ಕಾರರೂಪವಾದ ಉಪನಯನವನ್ನೂ, ಮತಸಂಸ್ಕಾರರೂಪವಾದ ದೀಕ್ಷೆ ಯನ್ನೂ ಬೋಧಿಸಿದಂತೆಯೇ, ರಾಮಾನುಜಾ ಚಾರ್ಯ ರಾದರೂ ಈ ಉಭಯಸಂಸ್ಕಾರಗಳನ್ನೂ ಬೋಧಿಸಿದರು ಪಂಚಾಚಾರ್ಯರು ತಿಪದೇಶ್ವಾ ಸಮಯನಲ್ಲಿ ದ್ವಿಜರಿಗೆ 'ಷಡಧ್ವಶುದ್ಧಿ ಸಂಸ್ಕಾರ ವನ್ನು ಮಾಡಬೇಕೆಂದು ಬೋಧಿಸಿದಂತೆ ರಾಮಾನುಜಾಚಾರ್ಯರಾದರೂ ವೈಷ್ಣವದೀಕ್ಷಾ ಸಮಯದಲ್ಲಿ ಷಡಧ್ವಶುದ್ಧಿ ಸಂಸ್ಕಾರವನ್ನು ಮಾಡಬೇಕೆಂದು ಬೋಧಿಸಿದರು ಪಂಚಾಚಾರ್ಯರು ಬ್ರಾಹ್ಮೀಸ್ಥಾದಿಚಿಂತಾಲಪರ್ಯಂತವಾಗಿ ಸರ್ವರೂ ತಮ್ಮ ತಮ್ಮ ಜಾತಿಗಳಿಗನುಸಾರವಾಗಿ ಲಿಂಗಧಾರಣ ಭಸ್ಮ ಧಾರಣ ರುದ್ರಾಕ್ಷಧಾರಣಾದಿಗಳಿಂದ ಯುಕ್ತರಾಗಿ ವರ್ಣಾ ಶ್ರಮಧರ್ಮಗಳಿಂತೆ ವರ್ತಿಸಬೇಕೆಂದು ಬೋಧಿಸಿದಂತೆ, ರಾಮಾನುಜಾಚಾರ್ಯರಾದರೂ ಬ್ರಾಹ್ಮೀಸ್ಥಾದಿಚಿಂತಾಲ ಪರ್ಯಂತವಾಗಿ ಸರ್ವರೂ ಶಂಖ ಚಕ್ರ ಊರ್ಧ್ವಪುಂ ಡ್ರಾದಿಗಳಿಂದ ಯುಕ್ತರಾಗಿ ವರ್ಣಾಶ್ರಮಧರ್ಮ ಗಳಿಂತೆ ವರ್ತಿಸಬೇಕೆಂದು ಬೋಧಿಸಿದರು ಪಂಚಾಚಾ ರ್ಯರು ತಮ್ಮ ಮತಕ್ಕೆ " ವೀರಶೈವ 'ನೆಂಬ ನಾಮ ವನ್ನಿಟ್ಟರೆ, ರಾಮಾನುಜಾಚಾರ್ಯರು ತಮ್ಮ ಮತಕ್ಕೆ " ವೀರಶೈವ್ಣವ ಆಥವಾ ಶ್ರೀವೈಷ್ಣವ " ಎಂಬ ನಾಮ ವನ್ನಿಟ್ಟರು ಪಂಚಾಚಾರ್ಯರು ತಿವಾಗಮಗಳೇ ಪರಮ ಪ್ರಮಾಣೀಭೂತಗಳಾದ ಗ್ರಂಥಗಳೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಪಾಂಚರಾತ್ರಾಗಮಗಳೇ ಪರಮಪ್ರಮಾಣೀಭೂತಗ್ರಂಥಗಳೆಂದು ಬೋಧಿಸಿದರು ಪಂಚಾಚಾರ್ಯರು ವಿಧವಾಸ್ತ್ರೀಯರು ಕೇಶಗಳನ್ನು ತೆಗೆಯಿಸಕೂಡದೆಂದೂ, ಒಪ್ಪತ್ತೇ ಭೋಜನವನ್ನು ಮಾಡಬೇಕೆಂದೂ, ಕೆಂಪುಬಟ್ಟೆಗಳನ್ನು ಧರಿಸ ಬೇಕೆಂದೂ ಪತಿವಿಯೋಗಾನಂತರ ನಾರಾಯಣನೇ ಪತಿಯೆಂದು ಭಾವಿಸಿ ವರ್ತಿಸಬೇಕೆಂದೂ ಬೋಧಿಸಿ ದರು ಪಂಚಾಚಾರ್ಯರು ಗುರುಮನೆತನದವರಿಗೆ (ಆಚಾರ್ಯಸಾಂಪ್ರದಾಯಿಕರಿಗೆ) ಮಹತ್ವವನ್ನು ಕೊಟ್ಟರುವಂತೆ, ರಾಮಾನುಜಾಚಾರ್ಯರಾದರೂ ಗುರು ಮನೆತನದವರಿಗೆ ಮಹತ್ವವನ್ನು ಕೊಟ್ಟರುವರು. ವೀರಶೈವಮತದಲ್ಲಿ ಬ್ರಾಹ್ಮಣಪದವಾಚ್ಯರಾದವರಿಗೆ " ಅಯ್ಯನವರು " ಎಂದು ಕರೆದರೆ, ಶ್ರೀವೈಷ್ಣವಮತ ದಲ್ಲಿ " ಅಯ್ಯರ್ಗಾರ್ " ಎಂದು ಕರೆಯುವರು ಇವೇ ನೊದಲಾದ ವಿಷಯಗಳನ್ನು ಪರ್ಯಾಲೋಚಿಸಿ ನೋಡಿ ದರೆ, ಪಂಚಾಚಾರ್ಯರು ಜಗತ್ತಿನಲ್ಲಿ ತಿಭಕ್ತಿಮಯವನ್ನು ಪ್ರಸಾರಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಂತೆ, ರಾಮಾನುಜಾಚಾರ್ಯರೂ ಸಹ ಜಗತ್ತಿನಲ್ಲಿ ವಿಷ್ಣುಭಕ್ತಿ ಯನ್ನು ಪ್ರಚಾರಪಡಿಸಬೇಕೆಂಬ ಉದ್ದೇಶದಿಂದ ವೀರ ಶೈವಮತದ ಸಿದ್ಧಾಂತಾಚಾರಾದಿಗಳನ್ನೇ ರೂಪಾಂತರವ ನ್ನಾಗಿ ಮಾಡಿ, ತಮ್ಮ ಸಿದ್ಧಾಂತವನ್ನು ನೆಲೆಗೊಳಿಸಿ

ಸಚಿತ್ರ ರೇಣುಕವಿಜಯ

ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಪರತತ್ವವನ್ನು ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಅವತರಿಸಿ ೧೪೦೦ ವರ್ಷಗಳ ವರೆಗೆ ಇದ್ದು, ಅನೇಕಾನೇಕರ್ದ್ಭುತ ಲೀಲೆಗಳನ್ನು ಮಾಡಿ ಜಗದುದ್ಧಾರಮಾಡಿರುವ ವಿಷಯವು ಸುಪ್ರಸಿದ್ಧವೇ ಆಗಿದೆ. ಈ ಮಹನೀಯರು ಮಾಡಿರುವ ಯಾವತ್ತು ಲೀಲೆಗಳ ಸ್ವರೂಪವನ್ನು ತೋರಿಸುವ ಗ್ರಂಥಗಳು ಈ ಹೊತ್ತಿನ ವರೆಗೆ ಎಲ್ಲಿಯೂ ಮುದ್ರಿಸಲ್ಪಡದಿರುವದು ವೀರಶೈವ ಮತಕ್ಕೆ ಒಂದುತರಹ ಕಲಂಕವೆಂದೇ ಹೇಳಬೇಕಾಗಿದೆ. ಈ ವಿಷಯವನ್ನು ಗಮನಿಸಿಕೊಂಡು ಪೂರ್ವಾಚಾರ್ಯರು ಬರೆದ ರೇಣುಕವಿಜಯ ಗ್ರಂಥವನ್ನೇ ಜೀರ್ಣವಸ್ಥಿತಿಯಲ್ಲಿರುವ ಪ್ರತಿಗಳಿಂದ ಸಂಗ್ರಹಿಸಿ ಸಂಶೋಧನೆಮಾಡಿ ಸಚಿತ್ರವಾಗಿ ಪ್ರಕಟಿಸಬೇಕೆಂದು ಕಳೆದ ೨೫ ವರ್ಷಗಳಿಂದ ಪ್ರಯತ್ನಿಸುತ್ತಿದ್ದೆವು. ಆದರೆ ಅನೇಕ ಕಾರಣಗಳಿಂದ ಈ ಕಾರ್ಯವು ಕೈಗೂಡಿರಲಿಲ್ಲ. ಈಗ ಶ್ರೀಜಗದ್ಗುರು ರೇಣುಕಾಚಾರ್ಯರ ಕೃಪೆಯಿಂದ ಈ ಗ್ರಂಥವು ಸಚಿತ್ರವಾಗಿ ಪ್ರಕಟವಾಗಿದೆ. ಈ ಗ್ರಂಥದಲ್ಲಿ ಶ್ರೀರೇಣುಕಾಚಾರ್ಯರು ಯಾವತ್ತು ಲೀಲೆಗಳು ವಿಶದವಾಗಿ ವರ್ಣಿಸಲ್ಪಟ್ಟಿರುವುದಲ್ಲದೆ ಆಯಾ ಕಥಾಸಂದರ್ಭಗಳನ್ನು ಸಾರವಾಗಿ ಆಕ್ಷಿಪ್ತವಾಗಿ ಅಜಂತಾದಿ ಲೋಕಪ್ರಸಿದ್ಧವಾದ ಚಿತ್ರಗಳಿಗೆ ಅನುರೂಪವಾಗಿ ಅಲ್ಲಲ್ಲಿ ಆಜಾನುಲಿಂಗರ ಲೀಲಾಚಿತ್ರಗಳಿಂದ ಅತ್ಯಂತ ಸುಂದರ ಭಾವಚಿತ್ರ (ಫೋಟೋ) ಗಳು ಸೂಚಿಸಲ್ಪಟ್ಟಿವೆ. ಒಟ್ಟಿಗೆ ಈ ಗ್ರಂಥವಲ್ಲಿ ೨೦ ಬಾವಚಿತ್ರಗಳಿವೆ. ಈ ಗ್ರಂಥದ ಮಹತ್ವವನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಎಂದು ಹೇಳಬಹುದು. ಈ ಗ್ರಂಥದ ಪರಿಶೀಲನೆಯಲ್ಲಿ ಶ್ರೀ ಗುರುಕರಜಾಯ ವಿರೆ ತಂದ್ರನೆಲೀಲಾಲ್ ಗವನ್ನು ಆನುಗ್ರಹಿಸಿದ ವಿಷಯವು ಪೂರ್ವದಲ್ಲಿ ಆ ಲೀಲೆಯನ್ನು ಬರೆದ ಸಾಲಿಗ್ರಾಮಗಳಿಂದ ಸಮರ್ಪಣಗೊಂಡ ಸಮರ್ಪಣವಾಗಿ ಪ್ರಕಾಶಿಸಲ್ಪಟ್ಟಿದೆ. ಇಂತಹ ಅನೇಕ ಸಾರ್ಥಕತೆಗಳಿಂದ ಈ ಸರ್ವೋತ್ಕೃಷ್ಟ ಗ್ರಂಥವು ವೀರಶೈವಮತದ ಸ್ಥಿರೀಕರ್ತೃ ಶ್ರೀಮದ್ಭಗವತ್ಪಾದ ಶ್ರೀಮದ್ರೇಣುಕಾಚಾರ್ಯರ ಪ್ರಸಾದದಿಂದ ಎಲ್ಲರೂ ಪ್ರಸಾದಿಸಿ ಬಾಲಕರೂ ಶ್ರೀಯರೂ ಪ್ರತಿಯೊಬ್ಬರೂ ಪರಿಪೂರ್ಣರಾಗಿ ಪರಿಪೂರ್ಣಾನಂದವನ್ನು ಅನುಭವಿಸಲೆಂದು ಪರಮೇಶ್ವರನಲ್ಲಿ ಪ್ರಾರ್ಥಿಸುತ್ತೇವೆ.

ಮ್ಯಾನೇಜರ್—ಶ್ರೀ ಜಗದ್ಗುರು ಪ್ರಿಂಟಿಂಗ್ ವರ್ಕ್ಸ್, ಮೈಸೂರು.

ನಿಮಗೆ ರುದ್ರಾಕ್ಷಿಗಳು ಬೇಕೆ?

ನಮ್ಮಲ್ಲಿ ಎಲ್ಲ ಪ್ರಕಾರದ ರುದ್ರಾಕ್ಷಿ ಮಾಲೆಗಳು, ಕಂಠಮಾಲೆಗಳು, ಸ್ಫಟಿಕಮಾಲೆಗಳು, ಆಸಲೀ ಗೌರೀ ಶಂಖ, ಗರ್ಭಗೌರೀ ರುದ್ರಾಕ್ಷಿಗಳು, (೨ ಮುಖದಿಂದ ೧೫ ಮುಖದವರೆಗೆ) ಸ್ಫಟಿಕ ಮಹಾದೇವ, ನರ್ಮದಾ ಬಾಣಲಿಂಗ, ಸಾಲಿಗ್ರಾಮ ಇತ್ಯಾದಿ ಪೂಜೋಪಯೋಗ ಸಾಮಾನುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.

೨ ಪಿ ಯಿಂದ ಮಾಲು ಕಳಿಸುವ ವ್ಯವಸ್ಥೆ ಇಡಲಾಗಿದೆ

ಕೆಳಗಿನ ವಿಳಾಸಕ್ಕೆ ಇಂದೇ ಪತ್ರ ಬರೆಯಿರಿ

೧ ವಿಶ್ವನಾಥ ಪ್ರಸಾದ ರುದ್ರಾಕ್ಷಮಾಲಾವಾಲಾ,
ಪೂಜನ ಸಾಮಗ್ರೀ ಭಂಡಾರ,
ಸಾಕ್ಷೀ ವಿನಾಯಕ ಗಲ್ಲೀ,
ಬನಾರಸ್ ಸಿಟಿ

೨ ವಿಶ್ವನಾಥ ಪ್ರಸಾದ ಮಾಲಾವಾಲಾ,
ಜಂಗಮವಾಡಿ ಮಠ,
ಬನಾರಸ್ ಸಿಟಿ.

ಶ್ರೀಕ್ಷೇತ್ರ ಕಾಶೀಖಂಡದ ಗ್ರಂಥಗಳ ಸಂಸ್ಕಾರವು

ವೀರಾರಾಧ್ಯ ಪರ್ಯಾಯಪೀಠಾಲಂಕಾರ ಪಂಚಾಚಾರ್ಯ ಪ್ರಭೃತಿ ವೀರಶೈವ ಸಂಸ್ಥಾನಾಧೀಶ್ವರರಿಂದ ಒಂದಾಗಿರುವ ಈ ಸಂಸ್ಥಾನವು ಆಯಾಕ್ಷೇತ್ರದಲ್ಲಿರುವ ಶ್ರೀ ವಿಶ್ವನಾಥಲಿಂಗದಿಂದ ಪ್ರಾದುರ್ಭವಿಸಿ ಅವತರಣ ಪಂಚಾಚಾರ್ಯ ಪಟ್ಟಲಿಂಗಸಂಪನ್ನವಾದ ಪವಿತ್ರವೀರಶೈವ ಸನಾತನವಾದ ಏಕೈಕಸಂಪ್ರದಾಯಕವಾದ ಈ ವೀರಶೈವ ಮತವನ್ನು ಸ್ಥಾಪಿಸಿ ವೀರಶೈವ ಮತ ಸಾಮ್ರಾಜ್ಯ ಸಂರಕ್ಷಣೆಗಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ಜ್ಞಾನಸಿಂಹಾಸನವನ್ನು ಸಂಸ್ಥಾಪಿಸಿರುವ ವಿಷಯವು ವೇದ, ಆಗಮ, ಉಪನಿಷತ್ತು, ಪುರಾಣ ಇತಿಹಾಸಗಳಲ್ಲಿ ಉಲ್ಲೇಖಿಸಿರುವುದು ಸುಪ್ರಸಿದ್ಧವೇ ಇರುತ್ತದೆ.

ಶ್ರೀಜಗದ್ಗುರು ಜ್ಞಾನಸಿಂಹಾಸನದ ವ್ಯಾಪ್ತಿಗನಿತೆಯನ್ನು ಸ್ಥಾಠಕ್ಷ್ಯವನ್ನು ಗೌರವವನ್ನು ಕಂಡು ಪೂರ್ವದ ಹಿಂದೂ ರಾಜಾಧಿರಾಜರು ಸಾರ್ವಭೌಮ ಚಕ್ರವರ್ತಿಗಳು, ಮುಸಲ್ಮಾನ್ ಬಾದಶಹರು ಈ ಪೀಠಕ್ಕೆ ಅನೇಕಾನೇಕ ಗ್ರಾಮಗಳನ್ನು ದಾನಕೊಟ್ಟಿರತ್ತಾರೆ ಆ ಗ್ರಾಮಗಳು ಇಂದಿಗೂ ಜ್ಞಾನಸಿಂಹಾಸನಾಧಿಪತಿಗಳ ಸ್ವಾಧೀನದಲ್ಲಿ ಮತ್ತು ಅನುಭವದಲ್ಲಿ ಇರುತ್ತವೆ.

ಶಾಸ್ತ್ರಾಭ್ಯಾಸದ ನಿಮಿತ್ತಕ್ಕಾಗಿ ಈ ದೇಶದಿಂದ ದೇಶಗಳಿಗೆ ತಕ್ಕ ವಿದ್ಯಾರ್ಥಿಗಳಿಗೆ ಸಹಾಯದಿಂದ ಸಹಾಯವನ್ನು ಪಡೆಯುವೆ. ಶ್ರೀಕಾಶೀಸಿಂಹಾಸನಾಧಿಪತಿಗಳು ಗುರುಪರಂಪರೆಯಿಂದ ಆಶೀರ್ವಾದವನ್ನು ಪ್ರೋತ್ಸಾಹವನ್ನು ಕೊಡುತ್ತ ಬಂದಿದ್ದರಿಂದ ಸಮಸ್ತಕ್ಕೆ ಮಾಲ ತಳಪಡಿಯಂತಿರುವ ಗುರುವರ್ಗದವರು ಶಾಸ್ತ್ರಾಭ್ಯಾಸವನ್ನು ಮಾಡಿ ಮಹಾ ಮಹಾವಿದ್ವಾಂಸರಾಗಿ ಪದವೀಧರರಾಗಿ ದೇಶಕ್ಕೆ ಬಂದು ವಿದ್ವತ್ಸಭೆಗಳಲ್ಲಿ ತಮ್ಮ ನೈಪಿಶ್ಯವನ್ನು ತೋರಿಸಿ ವಾರ್ಷಿಯನ್ನೂ ಪ್ರತಿಷ್ಠೆಯನ್ನೂ ಪಡೆದುಬರುವರು ಮುಂಲೆಗಂಡಾಗಿದ್ದ ಸಂಸ್ಕೃತ ಮಕ್ತಗ್ರಂಥಗಳನ್ನು ಶೋಧಿಸಿ ಸಿದ್ಧಾಂತ ತತ್ತ್ವಗಳನ್ನು ಶೃಜುರಪಡಿಸಿ ವೀರಶೈವ ಮತವನ್ನು ಜೀವತೆಗೆ ತಂದರು

ಈ ರೀತಿಯಾಗಿ ಮಾಹೇಶ್ವರಮತಾಧಿಕಾರಿಗಳು ಶ್ರೀಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರವರ ಕೃಪಾಭಿಪ್ರಭಾಯಭಾಯಿಯಲ್ಲಿ ವಾಸವಾಗಿ ಜಗದ್ಗುರು ಪ್ರಸಾದವನ್ನು ಸೇವಿಸಿ ಅವರ ಅನುಗ್ರಹ ಆಶೀರ್ವಾದಬಲದಿಂದ ಪಂಡಿತರಾಗಿ, ಪೀಠಾಧಿಪತಿಗಳಾಗಿ, ಪಟ್ಟಣಾಧಿಕಾರಿಗಳಾಗಿ, ವಿರಕ್ತರಾಗಿ ದೇಶಮಧ್ಯದಲ್ಲಿ ತಮ್ಮ ತಮ್ಮ ಮಠಗಳನ್ನು ಅಭಿವೃದ್ಧಿಗೆ ತಂದು ತರುತ್ತಿರುವದು ಲೋಕಪ್ರಸಿದ್ಧವೇ ಇರುತ್ತವೆ

ಕಾಶೀ ಜಗದ್ಗುರು ವೀರಾಧಿಪತಿಗಳಿಂದಲೇ ವೀರಶೈವ ಮತಕ್ಕೆ ಪ್ರಾಶಸ್ತ್ಯವೂ, ಗೌರವವೂ ಪ್ರಾಪ್ತವಾಗಿದ್ದುದರಿಂದ ಶ್ರೀ ಜಗದ್ಗುರು ಮಹೋಪಕಾರವು ಚಿರಸ್ಮರಣೀಯವಾಗಿರುತ್ತದೆ.

ಸಮಾಜಕ್ಕೆ ಎಷ್ಟೇ ಸೇವೆಯನ್ನು ಅನುಕರಣವನ್ನು ಮಾಡಿದರೂ ಸಹ ಕ್ರಿಯಾ ಸಂಪಾದಿಸಿದರೂ ಕೆಲವರು ಕೆಲವರಿಗೆ ಸಂತೃಪ್ತಿಯನ್ನು ಎಂದೂ ಕೊಡುವುದಿಲ್ಲ ತೀರ ಹಾಗೆ

ಜ್ಞಾನಸಿಂಹಾಸನಾರೋಹಣಮಾಡಿರತಕ್ಕ ಶ್ರೀಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರವರಿಗೆ ಸಂಸ್ಥಾನಗುರುವರ್ಯರು ತಮ್ಮ ನಿಷ್ಠೂರ ಅಪಾರ ಭಕ್ತಿಯಿಂದ ತಾವು ಸಂಸ್ಥಾನಾಧಿಪತಿಗಳಾಗಿ ಇದ್ದು ಮಹಾಗುರುವಿನ ಸಾನ್ನಿಧ್ಯದಂತೆ ಇದ್ದುಗೊಂಡು ಮಾರ್ಗದರ್ಶನವನ್ನು ಅಂಗೀಕಾರವಾಗಿ ಆಯುರ್ವೇದವನ್ನು ಓದಿ ತಕ್ಕ ವಿದ್ವಾಂಸರಿಗೆ ಅನ್ನೋದಕವನ್ನು ಕೊಡುತ್ತಿರುವದು ಕಾಲಪರಿಮಿತಿಯು ಕಡಿಮೆಯಾಗಿದ್ದು ಖರ್ಚಿನ ಭಾರವು ಹೆಚ್ಚಾಗಿದ್ದರೂ ಲೋಕಸ್ವಾಸ್ಥಸಂರಕ್ಷಣೆಯ ವಿಶೇಷ ಉದ್ದೇಶವನ್ನಿಟ್ಟುಕೊಂಡು ಸಮಾಜೋದ್ಧಾರ ತತ್ಪರರೂ ವಿದ್ವದ್ಭೂಷಣರೂ ಆದ ಶ್ರೀ ಸನ್ನಿಧಾನವರು ಶ್ರೀಜಗದ್ಗುರುಮಹಾಪೀಠದ ಗುರುಪರಂಪರೆಯನ್ನು ಅನುಸರಿಸುತ್ತ ಒಂದು ಒರತ್ತಿರುವದು ಸುತ್ಯಪೂರ್ಣವಾಗಿರುತ್ತದೆ

ಶ್ರೀಜಗದ್ಗುರುಗಳಾರು ತಾ ೧೦ ೪ ೫೦ ರಲ್ಲಿ ಶ್ರೀಮುಷ್ಣಂದಿರ ಗುರುಕುಲದಲ್ಲಿ ನಲೆದ ಶ್ರೀ ಚತುರಂಗ ಜಾಯರ ಸನ್ಮೇಲನಕ್ಕಾಗಿ ದಯಮಾಡಿಸಿ ಅಲ್ಲಿಯ ಕಾರ್ಯಗಳನ್ನು ಪೂರ್ತಿಸಿಕೊಂಡು ಶಿಷ್ಯಮಂಡಳಿಯ ಪ್ರಾರ್ಥನೆಯಂತೆ ಈ ಭಾಗದಲ್ಲಿ ಸಂಚಾರ ಕ್ರಮವನ್ನು ಕೈಕೊಂಡು ಆಯಾಯ ಭಾಗದಲ್ಲಿ ಸಂಚರಿಸಿ ಸರ್ವರನ್ನೂ ದರ್ಶನಾಶೀರ್ವಾದದಿಂದ ಪ್ರತಿತರನ್ನಾಗಿ ಕಾಶಿಗೆ ದಯಮಾಡಿಸಿದ ವಿಷಯ ಸರ್ವಶ್ರುತವಿರುವುದೆಸ್ಟೇ!

ಲೋಕಕಲ್ಯಾಣಾಧಿರತರಾದ ಶ್ರೀ ಮಹಾನಿಧಾನವರು ಶ್ರೀ ಕೇದಾರೇಶ್ವರ ಉದ್ಧಾರದ ಬಗ್ಗೆ ಈ ಭಾಗದಿಂದ ಶಿಷ್ಯಮಂಡಲವನ್ನು ಬರಮಾಡಿಕೊಂಡು ಕಾರ್ಯವನ್ನು ಯಶಸ್ವಿಯಾಗಿ ಮಾಡಿದ್ದು ಅತ್ಯಂತ ಆನಂದದ ಸಂಗತಿಯಾಗಿದ ಮತ್ತು ಆ ಸೀರೆದ ಬಗ್ಗೆ ಇನ್ನೂ ಅನೇಕಾನೇಕ ಕಾರ್ಯಗಳನ್ನು ಮಾಡ ಬೇಕಾಗಿರುವುದರಿಂದ ಪುನಃ ಈ ಭಾಗಕ್ಕೆ ಇಷ್ಟ ರಲ್ಲಿಯೇ ಸತೀಟಗಾಗಿ ಆಗಮಿಸತಕ್ಕವರಿದ್ದಾರೆ ಪ್ರಯುಕ್ತ ಈ ಶುಭಪ್ರಸಂಗದಲ್ಲಿ ಅಖಿಲ ಭಾರತೀಯ ವೀರಶೈವರು ಒಕ್ಕೈಪ್ಪಿನಿಂದ, ಧರ್ಮಾಭಿಮಾನದಿಂದ ಗೃಹಕೃತ್ಯದ ಆಡಚಣೆಗಳನ್ನು ಅನಾನುಕೂಲಗಳನ್ನು ದೂರಮಾಡಿ, ಶಾನು ಮುಂದೆ ನಾವು ಮುಂದೆ ಎಂದು ಸಂನ್ಯಾಸದ ಪದ್ಧತಿಗನುಸರಿಸಿ ಆಕ್ಟ್ಯಕವಾಗಿ ಆಗಮಿಸಿರುವ ಶ್ರೀ ಕಾಶೀಜಗದ್ಗುರುಗಳವರನ್ನು ನಿಮ್ಮ ನಿಮ್ಮ ಗ್ರಾಮಗಳಿಗೆ ಮುಕ್ಕಾಂ ಮಾಡಿಸಿಕೊಂಡು ಶಕ್ತ್ಯನುಸಾರ ಕಾಣಿಕಾದಿ ಸೇವೆಯನ್ನು ಸಲ್ಲಿಸಿ ಸುಜಾಸನ್ನಿ ಧಾನದ ನಂದರ್ಶನ ಪದುಪದೇಶ ಶುಭಾಶೀರ್ವಾದ ಗಳನ್ನು ಪಡೆದು ಧನ್ಯರಾಗತಕ್ಕದ್ದು ಧರ್ಮಾಭಿಮಾನಿ ಗುಣದ ಅಖಿಲ ಭಾರತ ವೀರಶೈವರ ಆದ್ಯ ಕರ್ತವ್ಯ ನೆಂಬುದನ್ನು ಯಾರೂ ಮರೆಯಲಾಗದು

ರಾಜ್ಯಾಂಗದ ತಿದ್ದುಪಡಿ ಮಾಡಕೂಡದು

ಭಾರತ ಸರ್ವಶ್ರೇಷ್ಠ ನ್ಯಾಯಾಲಯ ವಕೀಲರ ಸಂಘದ ನಿರ್ಣಯ

ಭಾರತ ಸರ್ವಶ್ರೇಷ್ಠ ನ್ಯಾಯಾಲಯದ ವಕೀಲರ ಸಂಘದ ಕಾರ್ಯಸಮಿತಿ ಶ್ರೀ ಎಂ ಸಿ ಸೆಟಲ್‌ವಾಡರ ಅಧ್ಯಕ್ಷತೆಯಲ್ಲಿ ನಡೆದು ಭಾರತ ರಾಜ್ಯಾಂಗವನ್ನು ಈ ಪಟ್ಟದಲ್ಲಿ ತಿದ್ದುಪಡಿಮಾಡುವುದು ವಿಹಿತವಲ್ಲೆಂದು ನಿರ್ಣಯಿಸಿತು ಸಾರ್ವಜನಿಕಾಭಿಪ್ರಾಯವು ಪಡೆಯದೆ ತಿದ್ದುಪಡಿ ಮಾಡುವುದು ಸರಿಯಿಲ್ಲವೆಂದು ಮಹಾ ಚ್ಯಾನಾಯಿ ಮುಂಬರಲಿರುವುದರಿಂದ ಈಗ ತಿದ್ದುಪಡಿ ನಡೆಸುವುದು ಅಯುಕ್ತವೆಂದು ನಿರ್ಣಯಿಸಿದೆ

ಅಮೆರಿಕಾ ಸೇನೆಗೆ ೩೦ ೦೦೦ ಹೊಸಯೋಧರು

ಜೂನ್ ತಿಂಗಳಲ್ಲಿ ೩೦ ಸಾವಿರ ಹೊಸ ಸೈನಿಕರನ್ನು ಅಮೆರಿಕಾ ಸೈನ್ಯಕ್ಕೆ ನೇಮಿಸಿಕೊಳ್ಳಲಾಗುವುದು ಸೈನ್ಯ ಸಂಗ್ರಹದ ಕಾರ್ಯ ಕಳೆದ ಸೆಪ್ಟೆಂಬರ್‌ನಲ್ಲಿ ಆರಂಭಿಸಿತು ಆಗಿನಿಂದ ಸುಮಾರು ೫೫,೦೦,೦೦೦ ಯೋಧರನ್ನು ಹೊಸದಾಗಿ ನೇಮಿಸಿಕೊಳ್ಳಲಾಗಿದೆ

೧೬೫ ವರ್ಷ ವಯಸ್ಸಿನ ಆಯುರ್ವೇದ ವೈದ್ಯ

ಆಯುರ್ವೇದ ವೈದ್ಯ ಶ್ರೀ ತಪ್ಪೀಜಿ ಮಹಾರಾಜರವರು ಮದರಂಸಿಗೆ ಬಂದಿದ್ದಾರೆ ಅವರ ವಯಸ್ಸು ೧೦೫ ವರ್ಷಗಳು ಇವರು ಹಿಮಾಲಯದ ಪರ್ವತದ ಬಳಿ ಒಬ್ಬ ಸನ್ಯಾಸಿಯಿಂದ ಚಿಕಿತ್ಸೆಯನ್ನು ಕಲಿತಿದ್ದಾರೆ ಪಂಡಿತ ಮದನಮೋಹನ ಮಾಳವೀಯ ಮೊದಲಾದವರು ಈತನಿಂದ ಚಿಕಿತ್ಸೆ ಪಡೆದಿದ್ದಾರಂತೆ.

ಸ್ವೀಕಾರ

ಬಳ್ಳಾರಿ ಡಿ|| ಹೂವಿನಹಡಗಲಿ ಗ್ರಾಮವಾಸಿಗಳಾದ ಗುರುಸೇವಾಕಿಂಕರ ಶ್ರೀ ಸೂಪ್ಪಿನ ಗುರುಲಿಂಗಪ್ಪನವರು ಪಂಚಾಚಾರ್ಯಪ್ರಭಾ ಪತ್ರಿಕೆಯು ೨೫ ನೇ ವರ್ಷದ ರಜತಮಹೋತ್ಸವಕ್ಕೆ ಭಾನಿಯಾದ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಗೊಳಿಸುವದಕ್ಕಾಗಿ 5 ರೂ ಗಳನ್ನು ಸಮರ್ಪಿಸಿ ಕಳಿಸಿಕೊಟ್ಟಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲಿಚ್ಛಿಸು ಪ್ರಾರ್ಥಿಸುತ್ತೇವೆ

ಸಿದ್ಧಾಂತಶಿಖಾಮಣಿ

ವೀರಶೈವಮತಪ್ರವರ್ತಕರಾದ ಜಗದ್ಗುರು ರೇಣುಕಾಚಾರ್ಯರಿಂದ ಉಪದೇಶಿಸಲ್ಪಟ್ಟ ಶ್ರೀ ಸಿದ್ಧಾಂತಶಿಖಾಮಣಿ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಶ್ಲೋಕರೂಪದಲ್ಲಿ ಇರುವುದು. ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಇರುವುದರಿಂದ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವಿರುವವರಿಗೆ ಮಾತ್ರ ಇದರ ಉಪಯೋಗವಾಗುತ್ತಿತ್ತು. ಆದುದರಿಂದ ಈ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಸಂಸ್ಕೃತ ಶ್ಲೋಕಗಳಿಗೆ ಅನ್ವಯಕ್ರಮ, ಪದಾರ್ಥ, ತಾತ್ಪರ್ಯ, ವಿವರಣೆ ಮತ್ತು ಟಿಪ್ಪಣಿಗಳೊಂದಿಗೆ ಸಂಪೂರ್ಣವಾಗಿ ಮುದ್ರಿಸಲಾಗಿದೆ. ಈ ಗ್ರಂಥವನ್ನು ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವಿಲ್ಲದವರೂ ಸಹ ಸುಲಭವಾಗಿ ಅಭ್ಯಾಸ ಮಾಡಿ ಅರ್ಥಮಾಡಿಕೊಳ್ಳಬಹುದು. ಈ ಗ್ರಂಥವು ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮತ್ತು ಶಿವಾದ್ವೈತ ಸಿದ್ಧಾಂತಗಳನ್ನು ಒಳಗೊಂಡಿದೆ. ಈ ಗ್ರಂಥವನ್ನು ಓದಿದರೆ ವೀರಶೈವ ಧರ್ಮದ ಸಮಗ್ರ ಜ್ಞಾನವು ಲಭಿಸುವುದು. ಈ ಗ್ರಂಥವು ಸುಮಾರು **೩೫೦** ಪುಟಗಳಲ್ಲಿ ಮುದ್ರಿತವಾಗಿದೆ. ಈ ಗ್ರಂಥವನ್ನು ಕೊಳ್ಳಲಿಚ್ಛಿಸುವವರು ಕೂಡಲೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಬೆಲೆ ೨ ರೂಪಾಯಿ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಅವ್ಯಯಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦×೧೫ ಬೆಲೆ ೧೪	೦—೬—೬
ಶ್ರೀರೇಣುಕಾಚಾರ್ಯರ ಲಿಂಗವಿವರದ ಫೋಟೋ (ನಾನಾವಿಧವರ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
